ವಾರ್ಷಿಕ ಚಂದಾ ರೂ.25/-

# ಮಾರ್ಚ್ ಜನಪದ

ಸಂಪುಟ-06 • ಸಂಚಿಕೆ-09 • ಜೂನ್ 2023



Downloaded From:www.kpscvaani.com



ಮೇ 21 ರಂದು ಬೆಂಗಳೂರು ನಗರದ ಕೆ.ಆರ್.ವೃತ್ತದ ಅಂಡರ್ ಪಾಸ್ ಬಳಿ ಮಳೆ ನೀರಿನಲ್ಲಿ ಮುಳುಗಿ ಸಾವನ್ನಪ್ಪಿದ ಭಾನುರೇಖಾ ಅವರ ಕುಟುಂಬ ವರ್ಗದವರನ್ನು ಮಾರ್ಥಾಸ್ ಆಸ್ಪತ್ರೆಗೆ ಭೇಟಿ ನೀಡಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಾಂತ್ವಾನ ಹೇಳಿದ ಸಂದರ್ಭ.



ಮೇ 22 ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ವಿಧಾನಸಭೆಯಲ್ಲಿ ನೂತನ ಶಾಸಕರಾಗಿ ಪ್ರಮಾಣ ವಚನ ಸ್ವೀಕರಿಸಿದ ಸಂದರ್ಭ.

Downloaded From:www.kpscvaani.com

ವಾರ್ಷಿಕ ಚಂದಾ ರೂ.25/–

# ವಾರ್ತಾ ಜನಪದ

ಸಂಪುಟ–06 • ಸಂಚಿಕೆ–09 • ಜೂನ್ 2023



**06** ಸಿದ್ಧ ಶೈಲಿಯ ದಿಗ್ವಿಜಯ ರಾಜ್ಯದ ಇಪ್ಪತ್ತನಾಲ್ಕನೇ ಮುಖ್ಯಮಂತ್ರಿಯಾಗಿ ಸಿದ್ಧರಾಮಯ್ಯ
• ಮಂಜುನಾಥ್ ಚಾಂದ್

**10** ನಿರಂತರ ನಿಷ್ಠೆಗೆ ಸಂದ ಜಯ ರಾಜ್ಯದ ಒಂಬತ್ತನೇ ಉಪಮುಖ್ಯಮಂತ್ರಿಯಾಗಿ ಡಿ.ಕೆ.ಶಿವಕುಮಾರ್
• ಚಂದ್ರಮುಖಿ

**13** ಹೊಸ ಸಂಪುಟ ಸಚಿವರ ಕಿರು ಪರಿಚಯ
• ಶುಭಾ

**16** ವಿಧಾನಸಭಾ ಚುನಾವಣೆ ಶೇ. 74 ಐತಿಹಾಸಿಕ ಮತದಾನ
• ನಂಜುಂಡಪ್ಪ ವಿ

**19** ಉತ್ತಮ ಮಾನಸಿಕ ಆರೋಗ್ಯಕ್ಕೆ ಜೀವನ ಕೌಶಲ್ಯಗಳು
• ಡಾ|| ಮೋಹನ್ ಕುಮಾರ್. ಆರ್

**21** ಪರಿಸರ ರಕ್ಷತಿ ರಕ್ಷಿತಃ
• ಮಹಾಂತೇಶ .ಅ. ಗುಡೋಡಗಿ.



**24** ಸಾಲಿ ಮಾಸ್ತರರ ಪರಿಸರ ಪಾಠ
• ಸೋಮಲಿಂಗಪ್ಪ ಬೆಣ್ಣಿ ಗುಳದಳ್ಳಿ

**26** ನೇತ್ರದಾನ ಕ್ರಾಂತಿಯ ಹರಿಕಾರ ಡಾ. ಕೆ. ಭುಜಂಗ ಶೆಟ್ಟಿ
• ಡಿ. ಪಿ. ಮುರಳೀಧರ್

**30** ದಾಗಿನಕಟ್ಟೆ ಗ್ರಾಮದ ವೀರಮ್ಮ: ರಾಜ್ಯದ ಮೊದಲ ಜಲಯೋಧೆ
• ಕೆ.ಎಸ್.ರಾಜಮನ್ನಾರ್

**33** ಜನರಿಗೆ ಆರೋಗ್ಯವಂತ ಬೆಳೆ ನೀಡುತ್ತಿರುವ ಮಲ್ಲೇಶಪ್ಪ
• ಜಿ.ಚಂದ್ರಕಾಂತ



**35** ದೇಹಕ್ಕೆ ಜೀವಂತಿಕೆ ತುಂಬುವ ಯೋಗ
• ಡಾ.ಗುರುರಾಜ ಪೋಶೆಟ್ಟಿಹಳ್ಳಿ

**39** ವಿಶ್ವ ಪಾರಂಪರಿಕ ತಾಣಗಳ ತಾತ್ಕಾಲಿಕ ಪಟ್ಟಿಗೆ ಮೋರೇರ ಶಿಲಾ ಸಮಾಧಿಗಳು
• ಡಾ. ವರ ಪ್ರಸಾದ್‌ರಾವ್ ಪಿ.ವಿ

**42** ಹುಬ್ಬಳ್ಳಿಯ ತೋಳನ ಕೆರೆ
• ಸುಭಾಸ ಯಾದವಾಡ

**44** ಆರು ದಶಕ ಕಂಡ ಚಿತ್ರಕಲಾ ಪರಿಷತ್ತು
• ಜಗನ್ನಾಥ್ ಪ್ರಕಾಶ್

**46** ಚಾಮುಂಡಿ ಬೆಟ್ಟಕ್ಕೆ ಕುಡಿಯುವ ನೀರಿನ ಸೌಲಭ್ಯ
• ವೇಮಗಲ್ ಸೋಮಶೇಖರ್

**48** ಬೆಂಗಳೂರು ಜನಕ ನಾಡಗೌಡ ಕೆಂಪೇಗೌಡ
• ಬನ್ನೂರು ಕೆ. ರಾಜು

**50** ಪದಬಂಧ-43

**ಪ್ರಧಾನ ಸಂಪಾದಕರು**
ಆರ್. ವಿನೋತ್‌ಪ್ರಿಯ, ಐಎಎಸ್
ಆಯುಕ್ತರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

**ಸಂಪಾದಕೀಯ ಸಲಹೆ**
ಸಹನಾ ಎಂ.
ಉಪ ನಿರ್ದೇಶಕರು

**ಉಪ ಸಂಪಾದಕರು**
ಬಿ. ಜಿ. ಪೂರ್ಣಿಮ

**ಪ್ರಕಾಶಕರು**
ನಿರ್ದೇಶಕರು
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
#17, ವಾರ್ತಾ ಸೌಧ, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001
Ph : 080-22028103 / 22028023
email : varthajanapada@yahoo.co.in
https://dipr.karnataka.gov.in

**ಮುದ್ರಕರು**
ಲಾವಣ್ಯ ಮುದ್ರಣ
# 19, ವಿದ್ಯಾಪೀಠ ವೃತ್ತ, ಬನಶಂಕರಿ 1ನೇ ಹಂತ, ಬೆಂಗಳೂರು–50

ಲೇಖಕರ ಅಭಿಪ್ರಾಯಗಳು ಸರ್ಕಾರದ ಅಭಿಪ್ರಾಯಗಳಲ್ಲ

Downloaded From:www.kpscvaani.com

# ನಿಮ್ಮ ಅನಿಸಿಕೆ

ಮೇ 2023 ರ ವಾರ್ತಾ ಜನಪದ ಸಂಚಿಕೆಯು ಮತದಾರರಿಗೆ ಮತದಾನದ ಮಹತ್ವವನ್ನು ತಿಳಿಸುವ ನಿಟ್ಟಿನಲ್ಲಿ ಚುನಾವಣಾ ವಿಶೇಷ ಸಂಚಿಕೆಯಾಗಿ ಹೊರಹೊಮ್ಮಿದೆ. ಅದರಲ್ಲೂ ಚಂದ್ರಮುಖಿ ಅವರು ಬರೆದಿರುವ 'ಬಂದಿದೆ ಪ್ರಜಾಪ್ರಭುತ್ವದ ಹಬ್ಬ: ಪ್ರಬುದ್ಧ ಪ್ರಭುತ್ವ ಸ್ಥಾಪನೆಗಿದು ಸಕಾಲ' ಹಾಗೂ ಡಾ. ಆರ್. ಶಂಕರಪ್ಪ ಅವರು ಬರೆದಿರುವ 'ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಚುನಾವಣೆ ಅತಿ ಮುಖ್ಯ ಘಟ್ಟ' ಲೇಖನಗಳು ಮತದಾನ ಮತ್ತು ಚುನಾವಣೆಯ ಮಹತ್ವದ ಮೇಲೆ ಬೆಳಕು ಚೆಲ್ಲಿವೆ.

ಪ್ರಜಾಪ್ರಭುತ್ವದ ಯಶಸ್ವಿಗೆ ಬುನಾದಿಯಾಗಿರುವ ಚುನಾವಣಾ ಪ್ರಕ್ರಿಯೆಯಲ್ಲಿ ಮತದಾರರು ಪಾಲ್ಗೊಂಡು ತಪ್ಪದೇ ಮತ ಚಲಾಯಿಸುವುದು ಅತ್ಯವಶ್ಯಕ ಎಂಬುದನ್ನು ಲೇಖನಗಳು ತಿಳಿಸಿಕೊಟ್ಟಿವೆ. ಒಟ್ಟಿನಲ್ಲಿ ಎರಡೂ ಲೇಖನಗಳು ಸಮಯೋಚಿತ ಲೇಖನವಾಗಿವೆ.

**–ಮಧುಸುದನ್, ಹಂಪಿ**

* * *

ಏಳು ದಶಕಗಳ ಕಾಲ ನಾಟ್ಯ ಸಾಧಕರಾಗಿ ಜೀವಿಸಿರುವ ನೃತ್ಯ ಪಟು ಪ್ರೊ.ಎಂ.ಆರ್. ಕೃಷ್ಣಮೂರ್ತಿ ಅವರ ಜೀವನ ಚಿತ್ರ ತಿಳಿಸುವ ಲೇಖನ ಓದಿ ರೋಮಾಂಚನವಾಯಿತು. ನಾನೂ ಕೂಡ ನೃತ್ಯ ವಿದ್ಯಾಭ್ಯಾಸ ಮಾಡುತ್ತಿದ್ದು, ಇಂತಹ ಮಹಾನೀಯರ ಜೀವನ ಚರಿತ್ರೆ ತಿಳಿಯಲು ಸಾಧ್ಯವಾಯಿತು. ಮುಂದೆಯೂ ಕೂಡ ನೃತ್ಯ ಕಲೆಗೆ ಸಂಬಂಧಿಸಿದಂತಹ ಲೇಖನಗಳನ್ನು ತಮ್ಮ ಪತ್ರಿಕೆಯಲ್ಲಿ ಪ್ರಕಟಿಸಬೇಕಾಗಿ ವಿನಂತಿಸುವೆ.

**–ಪ್ರತಿಮಾ, ಹಾಸನ**

* * *


ಪ್ರಜಾಪ್ರಭುತ್ವ ಹೊಂದಿರುವ ನಮ್ಮ ರಾಷ್ಟ್ರದಲ್ಲಿ ಮತದಾನಕ್ಕಿಂತ ಪವಿತ್ರವಾದ ಮತ್ತು ಮುಖ್ಯವಾದ ಕೆಲಸ ಇನ್ನೊಂದಿಲ್ಲ. ಹಾಗಾಗಿ ಪ್ರಜೆಗಳ ಪ್ರಜ್ಞಾವಂತಿಕೆಯಿಂದ ಮತ್ತು ಪ್ರಬುದ್ಧತೆಯಿಂದ ಮತದಾನ ಮಾಡುವಂತೆ ಪ್ರೇರೇಪಿಸುವ ದೃಷ್ಟಿಯಿಂದ ಮೇ ಮಾಹೆಯ ವಾರ್ತಾ ಜನಪದ ಮೂಡಿ ಬಂದಿದೆ. ಅದರಲ್ಲಿ ಚುನಾವಣೆಗೆ ಸಂಬಂಧಿಸಿದಂತೆ ಪ್ರಕಟವಾಗಿರುವ ಎಲ್ಲಾ ಲೇಖನಗಳು ಖಂಡಿತವಾಗಿಯೂ ಜನರನ್ನು ಮತದಾನ ಮಾಡುವಂತೆ ಜಾಗೃತಗೊಳಿಸಿದೆ.

**–ವಂಸತ್ ಕುಮಾರ್ ಟಿ.ಎಲ್, ತುಮಕೂರು**

* * *

ಬೆಂಗಳೂರಿನವನೇ ಆದ ನನಗೆ ಬೆಂಗಳೂರಿನಲ್ಲಿ ಭಾರತದ ಪ್ರಪ್ರಥಮ ಮತ್ತು ಏಕೈಕ ಮ್ಯೂಸಿಕ್ ಮ್ಯೂಸಿಯಂ ಇರುವುದು ತಿಳಿದಿರಲಿಲ್ಲ. ತಮ್ಮ ಪತ್ರಿಕೆಯಲ್ಲಿ ಪ್ರಕಟವಾಗಿರುವ 'ಭಾರತದ ಪ್ರಪ್ರಥಮ ಮತ್ತು ಏಕೈಕ ಮ್ಯೂಸಿಕ್ ಮ್ಯೂಸಿಯಂ ಬೆಂಗಳೂರಿನಲ್ಲಿ' ಎಂಬ ಲೇಖನವು ಸಂಗೀತ ಪ್ರಿಯರಿಗೆ ಉತ್ತಮ ಮಾಹಿತಿಯನ್ನು ಒದಗಿಸಿದೆ.

ಇಂತಹ ಮ್ಯೂಸಿಯಂ ಕುರಿತು ಪರಿಚಯಿಸಿರುವುದಕ್ಕೆ ಮುರಳೀಧರ್ ಅವರಿಗೆ ಧನ್ಯವಾದಗಳು. ಕರ್ನಾಟಕ ಶಾಸ್ತ್ರೀಯ, ಹಿಂದೂಸ್ತಾನಿ ಶಾಸ್ತ್ರೀಯ, ಜನಪದ ಹಾಡುಗಳು, ಚಿತ್ರ ಗೀತೆಗಳು ಹಾಗೂ ಪಾಶ್ಚಿಮಾತ್ಯ ಸಂಗೀತ ಸೇರಿದಂತೆ ಎಲ್ಲಾ ಬಗೆಯ ಸಂಗೀತಕ್ಕೆ ಸಂಬಂಧಿಸಿದಂತಹ ಪರಿಕರಗಳನ್ನು ಸಂಗ್ರಹಿಸಿಟ್ಟಿರುವುದಲ್ಲದೆ, ಸಂಗೀತ ಕ್ಷೇತ್ರದಲ್ಲಿ ಮಹಾನ್ ಸಾಧನೆ ಮಾಡಿರುವ ಘಟಾನುಘಟಿ ಗಾಯಕರು ಮತ್ತು ಗಾಯಕಿಯರು ಬಳಸುತ್ತಿದ್ದ ಸಂಗೀತ ಪರಿಕರಗಳನ್ನು ಈ ವಸ್ತು ಸಂಗ್ರಹಾಲಯದಲ್ಲಿ ಸಂರಕ್ಷಿಸಿಡಲಾಗಿದೆ ಎಂದು ತಿಳಿದು ತುಂಬಾ ಸಂತೋಷವಾಯಿತು. ಹಾಗೆಯೇ ವೀಕ್ ಎಂಡ್ ಕಳೆಯಲು ಒಂದು ಒಳ್ಳೆಯ ಜಾಗ ಸಿಕ್ಕಂತ್ತಾಯಿತು.




**–ಆಶ್ರಯ್ ಬಿ.ಎಸ್. ಬೆಂಗಳೂರು**

* * *

ಮೇ 12 ರ ಅಂತಾರಾಷ್ಟ್ರೀಯ ನರ್ಸ್‌ಗಳ ದಿನಾಚರಣೆ ಪ್ರಯುಕ್ತ ತಮ್ಮ ಪತ್ರಿಕೆಯಲ್ಲಿ ಸತತ ಏಳು ದಶಗಳ ಕಾಲ ಸೂಲಗಿತ್ತಿ ಕೈಂಕರ್ಯದಲ್ಲಿ ತೊಡಗಿಸಿಕೊಂಡು 'ನರಸಮ್ಮ' ಎಂದೇ ಖ್ಯಾತಿ ಗಳಿಸಿದ ಪಾವಗಡದವರಾದ ಮಹಾತಾಯಿ ಸೂಲಗಿತ್ತಿ ಅವರ ಕುರಿತು ಲೇಖನ ಪ್ರಕಟಿಸಿರುವುದು ಹೆಚ್ಚು ಸಂತಸವಾಯಿತು. ಎಂತಹ ಕ್ಲಿಷ್ಟ ಪರಿಸ್ಥಿತಿಯಲ್ಲೂ ತಮ್ಮ ಅನುಭವದಿಂದ ಸುಲಭವಾಗಿ ಹೆರಿಗೆ ಮಾಡಿಸುತ್ತಿದ್ದರು ಎಂಬುದನ್ನು ತಿಳಿದು ಆ ತಾಯಿ ಬಗ್ಗೆ ಹೆಮ್ಮೆ ಎನಿಸಿತು.

ಅಲೆಮಾರಿ ಜನಾಂಗದ ಗರ್ಭಿಣಿಯೊಬ್ಬರ ಮಗು ಹೊಟ್ಟೆಯಲ್ಲೇ ಸತ್ತಿರುವುದರಿಂದ ಹೆರಿಗೆ ಮಾಡಿಸುವುದು ಕಷ್ಟ ಎಂದು ಕೈಚೆಲ್ಲಿದ್ದ ವೇಳೆಯಲ್ಲೂ ನರಸಮ್ಮ ಅವರು ಹೆರಿಗೆ ಮಾಡಿಸಿ ಮಗು ಮತ್ತು ತಾಯಿ ಇಬ್ಬರನ್ನು ಉಳಿಸಿರುವುದು ಅವರ ಕೈಗುಣಕ್ಕೆ ಸಾಕ್ಷಿಯಾಗಿದೆ. ಯಾವುದೇ ಅಪೇಕ್ಷೆಗಳಿಲ್ಲದೆ, ನಿಸ್ವಾರ್ಥ ಸೇವೆಗೈದ ಆ ಮಹಾ ತಾಯಿಯ ಲೇಖನದಿಂದ ಪತ್ರಿಕೆಯ ಗೌರವವೂ ಹೆಚ್ಚಿದೆ ಎಂದರೆ ತಪ್ಪಾಗಲಾರದು.

**–ಶೈಲಜ, ಕೊರಟಗೆರೆ**

* * *

ಮೊದಲ ಬಾರಿಗೆ ಮತ ಚಲಾಯಿಸುವ ಯುವ ಜನರಿಗೆ ಮತಯಂತ್ರದ ಮೂಲಕ ಹೇಗೆ ಮತದಾನ ಮಾಡಬೇಕು ಎಂಬುದನ್ನು ಪರಿಚಯಿಸುವ ಸಲುವಾಗಿ ಬಾಗಲಕೋಟೆ ಜಿಲ್ಲಾಡಳಿತವು ಸ್ವೀಪ್ ಎಕ್ಸ್‌ಪ್ರೆಸ್ ವಾಹನದ ಮೂಲಕ ಸಂಚಾರಿ ಅಣುಕು ಮತದಾನ ನಡೆಸಿರುವುದರಿಂದ ಯುವ ಜನರಿಗೆ ಹೆಚ್ಚು ಸಹಕಾರಿಯಾಗಿರುತ್ತದೆ. ಈ ಸ್ವೀಪ್ ಎಕ್ಸ್‌ಪ್ರೆಸ್ ವಾಹನದ ಮೂಲಕ ಜಿಲ್ಲೆಯಾದ್ಯಂತ ಸಂಚರಿಸಿ ಮತದಾನದ ಜಾಗೃತಿ ಮೂಡಿಸಿರುವ ಬಾಗಲಕೋಟೆ ಜಿಲ್ಲಾಧಿಕಾರಿಗಳ ವಿನೂತ ಕ್ರಮ ಶ್ಲಾಘನೀಯವಾದುದು.

**–ಶಿವಪ್ರಕಾಶ್, ಜಮಖಂಡಿ**

ಮೇ 2023 ರ ಸಂಚಿಕೆಯ ವಾರ್ತಾ ಜನಪದ ಸಂಚಿಕೆಯ ಮುಖಪುಟ ವಿನ್ಯಾಸ ಸೊಗಸಾಗಿತ್ತು. ಅಲ್ಲದೆ ಸಂಚಿಕೆಯನ್ನು ಚುನಾವಣಾ ಸಂಬಂಧವಾಗಿ ಮತದಾರರಿಗೆ ಜಾಗೃತಿ ಮೂಡಿಸುವಂತಹ ಲೇಖನಗಳಿಗೆ ಸೀಮಿತವಾಗಿಸಿದ್ದು ಹೆಚ್ಚು ಸೂಕ್ತವಾಗಿತ್ತು ಎಂಬುದು ನನ್ನ ಅಭಿಪ್ರಾಯ.

**–ರೇಷ್ಮಾ, ಸಾಗರಕಟ್ಟೆ**

'ವಾರ್ತಾ ಜನಪದ' ಮಾಸಿಕ ಈಗ **www.kanaja.in**ನಲ್ಲಿ ಲಭ್ಯ

ವಾರ್ತಾ ಜನಪದ ಮಾಸಿಕಕ್ಕೆ ಚಂದಾದಾರರಾಗಲು ಬಯಸುವವರು ರೂ 25/– ಅನ್ನು ಪಾವತಿಸಲು ಕಡ್ಡಾಯವಾಗಿ ಸೇವಾಸಿಂಧುವಿನ **https://sevasindhu.karnataka.gov.in** ಮೂಲಕ ಆನ್ ಲೈನ್ ಅರ್ಜಿಯನ್ನು ಸಲ್ಲಿಸಬೇಕು.

ವಾರ್ತಾ ಜನಪದ ಪತ್ರಿಕೆಯ ಸಾಫ್ಟ್ ಕಾಪಿಯನ್ನು ಇ–ಮೇಲ್ ಮೂಲಕ ಉಚಿತವಾಗಿ ಚಂದಾದಾರರಾಗಲು ಇಚ್ಛಿಸುವವರು ತಮ್ಮ ಇ–ಮೇಲ್ ವಿಳಾಸವನ್ನು 9480841210 ಗೆ ಕಳುಹಿಸಿ ನೋಂದಾಯಿಸಿ ಕೊಳ್ಳಬಹುದು.

Downloaded From:www.kpscvaani.com



# ಸಂಪಾದಕೀಯ...

**ಪ್ರಿಯ ಓದುಗ ಮಿತ್ರರೇ,**

ಶಾಂತಿ ಮತ್ತು ಸುವ್ಯವಸ್ಥಿತ ರಾಜ್ಯವೆಂದೇ ಕರ್ನಾಟಕ ಚಿರಪರಿಚಿತ. ವಿಧಾನಸಭಾ ಚುನಾವಣೆ–2023 ನ್ನು ಅತ್ಯಂತ ಯಶಸ್ವಿಯಾಗಿ ನಡೆಸಿದ ಕೀರ್ತಿ ಮತ್ತೊಮ್ಮೆ ರಾಜ್ಯದ ಪಾಲಾಯಿತು. ಪ್ರಜಾಪ್ರಭುತ್ವ ಇಲ್ಲಿ ಗೆದ್ದಿತು. ಚುನಾವಣೆ ಘೋಷಣೆಯಾದಗಿನಿಂದ ಮತದಾನದವರೆಗೆ ಚುನಾವಣಾ ಆಯೋಗವು ತನ್ನ ಕರ್ತವ್ಯ ನಿರ್ವಹಿಸಿದ್ದರಿಂದ ಮತದಾನದ ಹಬ್ಬ; ಪ್ರಜಾಪ್ರಭುತ್ವದ ಹಬ್ಬ ಯಾವುದೇ ಗೊಂದಲವಿಲ್ಲದೆ ಸಂಭ್ರಮದಿಂದ ನೆರವೇರಿತು.

2018ರ ಚುನಾವಣೆಯಲ್ಲಿ 72 % ಇದ್ದ ಮತದಾನ ಈ ಬಾರಿ ಶೇಕಡ 2 ಹೆಚ್ಚಾಗಿದ್ದು, 74% ದಾಖಲಾಯಿತು. ಮಹಿಳಾ ಮತದಾರರು ತಮ್ಮ ಮತದಾನದ ಮೂಲಕ ತಮ್ಮ ಮಹತ್ವವನ್ನೂ ಸಾರಿದರು. ರಾಜ್ಯದ ಹಲವೆಡೆಗಳಿಂದ ಬಂದ ಸಚಿತ್ರ ವರದಿಗಳಿಂದ ವಯೋವೃದ್ಧರು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದವರು ಮತದಾನ ಕೇಂದ್ರಕ್ಕೆ ಬಂದು ಮತದಾನ ಮಾಡಿದ ದಾಖಲೆಗಳನ್ನು ವೀಕ್ಷಿಸಿದಾಗ ರಾಜ್ಯದ ಜನರು ಸರ್ಕಾರದ ರಚನೆಯಲ್ಲಿ ಪಾಲ್ಗೊಳ್ಳುವಿಕೆಯ ಮಹತ್ವನ್ನು ಅರಿತಿರುವುದು ಎಲ್ಲರು ಗಮನಿಸಬೇಕಾದ ಅಂಶ.

ಚುನಾವಣೆಯಲ್ಲಿ ಕಾಂಗ್ರೆಸ್ ಬಹುಮತ ಗಳಿಸಿ, ಮೇ 20 ರಂದು ಕಂಠೀರವ ಕ್ರೀಡಾಂಗಣದಲ್ಲಿ ಸನ್ಮಾನ್ಯ ರಾಜ್ಯಪಾಲರಾದ ಥಾವರ್ ಚಂದ್ ಗೆಹ್ಲೋಟ್ ಅವರಿಂದ ರಾಜ್ಯದ 24 ನೇ ಮುಖ್ಯಮಂತ್ರಿಯಾಗಿ ಶ್ರೀ ಸಿದ್ದರಾಮಯ್ಯ ಅವರು, ಉಪ ಮುಖ್ಯಮಂತ್ರಿಯಾಗಿ ಶ್ರೀ ಡಿ.ಕೆ.ಶಿವಕುಮಾರ್ ಅವರು ಹಾಗೂ ಎಂಟು ಸಚಿವರು ಪ್ರಮಾಣವಚನ ಸ್ವೀಕರಿಸಿದರು.

ಪ್ರಮಾಣ ವಚನ ಸ್ವೀಕರಿಸಿದ ಬಳಿಕ ವಿಧಾನಸೌಧದಲ್ಲಿ ಅಂದೇ ನೂತನ ಸಚಿವ ಸಂಪುಟದೊಂದಿಗೆ ಸಚಿವ ಸಂಪುಟ ಸಭೆಯನ್ನು ನಡೆಸಿದ ಮುಖ್ಯಮಂತ್ರಿ ಅವರು ತಮ್ಮ ಪಕ್ಷ ಅಧಿಕಾರಕ್ಕೆ ಬಂದರೆ ಜಾರಿಗೆ ತರುವುದಾಗಿ ತಿಳಿಸಿದ್ದ ಗೃಹಜ್ಯೋತಿ, ಗೃಹಲಕ್ಷ್ಮಿ, ಅನ್ನಭಾಗ್ಯ, ಯುವನಿಧಿ, ಹಾಗೂ ಮಹಿಳೆಯರಿಗೆ ಉಚಿತ ಬಸ್ ಪ್ರಯಾಣ ಯೋಜನೆಗಳಿಗೆ ತಾತ್ವಿಕ ಅನುಮೋದನೆ ನೀಡಿದರು.

ಗೃಹಜ್ಯೋತಿ ಯೋಜನೆಯಡಿ ಪ್ರತಿ ಮನೆಗೆ 200 ಯುನಿಟ್ ಉಚಿತ ವಿದ್ಯುತ್ ನೀಡಲು, ಗೃಹಲಕ್ಷ್ಮಿ ಯೋಜನೆಯಡಿ ಮನೆಯ ಯಜಮಾನಿಗೆ ಪ್ರತಿ ತಿಂಗಳು ರೂ 2 ಸಾವಿರ ಸಹಾಯಧನ ನೀಡಲು, ಅನ್ನಭಾಗ್ಯ ಯೋಜನೆಯಡಿ ರಾಜ್ಯದ ಬಿಪಿಎಲ್ ಕುಟುಂಬದ ಪ್ರತಿ ವ್ಯಕ್ತಿಗೆ ತಲಾ 10 ಕೆ.ಜಿ ಉಚಿತ ಅಕ್ಕಿ ನೀಡಲು, ಯುವನಿಧಿ ಯೋಜನೆಯಡಿ ಪದವೀಧರ ನಿರುದ್ಯೋಗಿಗಳಿಗೆ ಮಾಸಿಕ ರೂ 3 ಸಾವಿರ ಹಾಗೂ ಡಿಪ್ಲೊಮಾ ಪದವೀಧರ ನಿರುದ್ಯೋಗಿಗಳಿಗೆ ರೂ 1,500 ನಿರುದ್ಯೋಗ ಭತ್ಯೆ ನೀಡಲು, ಹಾಗೂ ರಾಜ್ಯದ ಮಹಿಳೆಯರಿಗೆ ಸರ್ಕಾರಿ ಸಾರಿಗೆ ಬಸ್‌ಗಳಲ್ಲಿ ಉಚಿತ ಪ್ರಯಾಣ ಸೌಲಭ್ಯ ಒದಗಿಸಲು ಸರ್ಕಾರ ಬದ್ಧವಾಗಿದ್ದು, ಸದ್ಯದಲ್ಲೇ ಆಯಾ ಇಲಾಖೆಗಳಿಂದ ರೂಪುರೇಷೆಗಳನ್ನು ಸಿದ್ಧಪಡಿಸಿ ಆದೇಶವನ್ನು ಹೊರಡಿಸಲಾಗುವುದೆಂದು ಸಂಪುಟ ಸಭೆಯ ಬಳಿಕ ಆಯೋಜಿಸಿದ್ದ ಪತ್ರಿಕಾಗೋಷ್ಠಿಯ ಮುಖಾಂತರ ಮಾನ್ಯ ಮುಖ್ಯಮಂತ್ರಿ ಅವರು ನಾಡಿನ ಜನತೆಗೆ ಭರವಸೆಯನ್ನು ನೀಡಿದರು.

ಆ ಮೂಲಕ ತಮ್ಮ ಸರ್ಕಾರ **"ನುಡಿದಂತೆ ನಡೆಯುವ ಸರ್ಕಾರ"** ಎಂಬ ಸಂದೇಶವನ್ನು ಜನತೆಗೆ ನೀಡಿದ್ದಾರೆ.

**ಆರ್. ವಿನೋತ್‌ಪ್ರಿಯ, ಐಎಎಸ್**
ಪ್ರಧಾನ ಸಂಪಾದಕರು

**ಪ್ರಧಾನ ಸಂಪಾದಕರು,** ವಾರ್ತಾ ಜನಪದ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ,
#17, ವಾರ್ತಾ ಸೌಧ, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001. email : feedbackjanapada@gmail.com



Downloaded From:www.kpscvaani.com



## ಸಿದ್ಧ ಶೈಲಿಯ ದಿಗ್ವಿಜಯ

## ರಾಜ್ಯದ ಇಪ್ಪತ್ತನಾಲ್ಕನೇ ಮುಖ್ಯಮಂತ್ರಿಯಾಗಿ

# ಸಿದ್ದರಾಮಯ್ಯ

ಮಂಜುನಾಥ್ ಚಾಂದ್

"ಕರ್ನಾಟಕದಿಂದ ಪ್ರತಿ ವರ್ಷ ಎಷ್ಟು ತೆರಿಗೆ ವಸೂಲಾಗುತ್ತದೆ ಎಂಬುದು ನಿಮಗೆ ಗೊತ್ತಾ? ಆದಾಯತೆರಿಗೆ, ಕಾರ್ಪೊರೇಟ್ ತೆರಿಗೆ, ಅಬಕಾರಿ ತೆರಿಗೆ, ಜಿಎಸ್‌ಟಿ, ಪೆಟ್ರೋಲ್, ಡೀಸೆಲ್ ಮೇಲಿನ ಸುಂಕದ ರೂಪದಲ್ಲಿ ಮೂರು ಲಕ್ಷ ಕೋಟಿ ರೂಪಾಯಿ ವಸೂಲಾಗುತ್ತದೆ. ಜನರಿಂದಲೇ ವಸೂಲಾಗುವ ಈ ತೆರಿಗೆ ಹಣ ಕೇಂದ್ರ ಸರ್ಕಾರದ ಬೊಕ್ಕಸವನ್ನು ತುಂಬುತ್ತದೆ. ಆದರೆ ವಾಪಸ್ಸು ನಮಗೆ ಬರುವುದು ಎಷ್ಟು ಹೇಳಿ? ಕೇವಲ 47000 ಕೋಟಿ!"

ಅವರು ಹೀಗೆ ಲೆಕ್ಕವನ್ನು ಮಂಡಿಸುತ್ತಿದ್ದರೆ ಎದುರಿಗಿದ್ದವರು ಸಂಪೂರ್ಣ ತಬ್ಬಿಬ್ಬು. ಸಿದ್ದರಾಮಯ್ಯ ಎಂದರೆ ಹಾಗೆ. ಪಕ್ಕಾ ಲೆಕ್ಕ. ತೆರಿಗೆ ಹಣ ಎನ್ನುವುದು ಜನರ ಬೆವರಗಳಿಕೆಯ ಫಲ ಎನ್ನುವುದರ ಸ್ಪಷ್ಟ ಅರಿವು ಅವರಿಗಿದೆ. ಅಂತಹ ಹಣ ಜನರ ಬದುಕನ್ನು ಬಂಗಾರವಾಗಿ ಮಾಡುವ ಯೋಜನೆಗಳಿಗೆ ವಿನಿಯೋಗವಾಗಬೇಕು. ಹಾಗೆ ಮಾಡದೇ ಹೋದಾಗ ಅದನ್ನು ಗಟ್ಟಿಧ್ವನಿಯಲ್ಲಿ ಪ್ರಶ್ನೆ ಮಾಡುವ ಛಾತಿ ಬೆಳೆಸಿಕೊಳ್ಳಬೇಕು. ಅದು ಸಂವಿಧಾನ ನಮಗೆ ಕೊಟ್ಟಿರುವ ಹಕ್ಕು. ಅದುವೇ ಪ್ರಜಾಪ್ರಭುತ್ವದ ನಿಜವಾದ ದನಿ. ಅಂತಹ ಗಟ್ಟಿತನವಿರುವ ನಾಯಕರಲ್ಲಿ ನಮಗೆ ಅಗ್ರಗಣ್ಯರಾಗಿ ಕಾಣುವವರು ಸಿದ್ದರಾಮಯ್ಯ.

ಕೇವಲ ಒಂದು ತೆರಿಗೆಯ ವಿಷಯ ಮಾತ್ರ ಅಲ್ಲ, ಪ್ರತಿಯೊಂದು ಇಲಾಖಾವಾರು ಅನುದಾನದ ವಿವರಗಳು ಕೂಡ ಅವರ ಮನಸ್ಸಿನಲ್ಲಿ ಸದಾ ಅಚ್ಚೊತ್ತಿರುತ್ತವೆ. ಯಾವುದೇ ಒತ್ತಡದ ಸನ್ನಿವೇಶವಿರಲಿ, ಅವರು ಸಮಚಿತ್ತವನ್ನು ಕಳೆದುಕೊಳ್ಳುವುದಿಲ್ಲ. ಅವರ ಜ್ಞಾಪಕ ಶಕ್ತಿ ಕೈಕೊಡುವುದಿಲ್ಲ. ಸ್ಪಷ್ಟವಾದ, ಕರಾರುವಕ್ಕಾದ ಅಭಿಪ್ರಾಯವನ್ನು ಮಂಡಿಸುವಲ್ಲಿ ಅವರು ಎಡವುದಿಲ್ಲ. ಯಾಕೆಂದರೆ ಅವೆಲ್ಲವೂ ಅಧ್ಯಯನ ಶೀಲತೆಯಿಂದ ಹೊರಹೊಮ್ಮಿದ ಚಿಂತನೆಗಳು. ತಳಮಟ್ಟದಿಂದ ಕಂಡುಕೊಂಡ ಅನುಭವಗಳು. ಅವರದ್ದು ಶೋಕಿಯ ರಾಜಕಾರಣವಲ್ಲ. ಹಾಗಾಗಿಯೇ ವಿಷಯಾಧಾರಿತ ಪ್ರಶ್ನೆ ಬಂದಾಗ ಅವರು ಅದಕ್ಕೆ ತಕ್ಕ ಉತ್ತರ ನೀಡದೇ ವಿರಮಿಸುವುದಿಲ್ಲ. ಅವರದ್ದು ರಾಜಕಾರಣವನ್ನು ಮೀರಿದ



Downloaded From:www.kpscvaani.com



ಕಾರ್ಯಕಾರಣ. ಅಧಿಕಾರದ ಪರಿಭಾಷೆಯನ್ನು ಮೀರಿದ ಆಡಳಿತ ನಿರ್ವಹಣೆ.

ಇವೆಲ್ಲವೂ ಅವರನ್ನು ಎರಡನೇ ಬಾರಿ ರಾಜ್ಯದ ಮುಖ್ಯಮಂತ್ರಿ ಸ್ಥಾನದಲ್ಲಿ ತಂದು ಕೂರಿಸಿದೆ. ಅವರದ್ದೇ ಆದ 'ಸಿದ್ಧ ಶೈಲಿ' ಅವರನ್ನು ಮತ್ತು ಅವರ ಪಕ್ಷವನ್ನು ಗೆಲ್ಲಿಸಿದೆ.

ಅಧಿಕಾರ ಅಂತ ಸಿಕ್ಕಾಗ ಅವರೆಂದೂ ಕಾಲಹರಣ ಮಾಡುತ್ತ, ಗಿಮಿಕ್ ಮಾಡುತ್ತ ಕುಳಿತವರಲ್ಲ. ಮೊದಲ ಬಾರಿಗೆ 'ಹಣಕಾಸು' ಖಾತೆ ಅವರಿಗೆ ಸಿಕ್ಕಿದ್ದು 1994ರಲ್ಲಿ ದೇವೇಗೌಡರ ನೇತೃತ್ವದ ಸರ್ಕಾರದಲ್ಲಿ. ಆಗಿನ್ನೂ ಅವರಿಗೆ 46 ವರ್ಷ ವಯಸ್ಸು. ಅಲ್ಲಿಂದೀಚೆಗೆ 29 ವರ್ಷಗಳೇ ಕಳೆದು ಹೋಗಿವೆ. ಈ ಅವಧಿಯಲ್ಲಿ ಅವರು ಹದಿಮೂರು ಬಾರಿ ಬಜೆಟ್ ಮಂಡನೆ ಮಾಡಿದ್ದಾರೆ. ಆದರೆ ಯಾವುದೇ ತೋರಿಗಾಣಿಕೆಗೆ ಅವಕಾಶವಿಲ್ಲದ ರೀತಿಯಲ್ಲಿ ಪ್ರತಿ ಯೋಜನೆಯಲ್ಲೂ 'ಜನಸ್ಪರ್ಶ' ನೀಡಿದ್ದಾರೆ. ಎಲ್ಲಕ್ಕಿಂತ ಮುಖ್ಯವಾಗಿ 'ಕುರುಡು ಕಾಂಚಾಣ' ಅವರನ್ನು ಕುರುಡರನ್ನಾಗಿ, ಭ್ರಷ್ಟರನ್ನಾಗಿ ಮಾಡಿಲ್ಲ. ಹಣಕಾಸು ಮಂತ್ರಿ, ಉಪಮುಖ್ಯಮಂತ್ರಿ, ಮುಖ್ಯಮಂತ್ರಿ, ಸಮ್ಮಿಶ್ರ ಸರ್ಕಾರದಲ್ಲಿ ಸಮನ್ವಯ ಸಮಿತಿ ಅಧ್ಯಕ್ಷ, ವಿರೋಧ ಪಕ್ಷದ ನಾಯಕ... ಹೀಗೆ ಎಲ್ಲ ಬಹುಮುಖ್ಯ ಹುದ್ದೆಗಳ ನಿರ್ವಹಣೆಯ ಬಳಿಕವೂ ಮತ್ತೊಮ್ಮೆ ಅವರಿಗೆ ಆಡಳಿತ ಚುಕ್ಕಾಣಿ ಹಿಡಿಯುವ ಅವಕಾಶ ಲಭಿಸಿದೆ ಎಂದರೆ ಇಷ್ಟೂ ವರ್ಷ ಅವರು ಅನೂಚಾನವಾಗಿ ಕಾಯ್ದುಕೊಂಡು ಬಂದಿರುವ ಕಳಂಕರಹಿತ ರಾಜಕಾರಣ.

ಇವೆಲ್ಲದರ ಬೇರು ಇರುವುದು ಸಿದ್ದರಾಮನಹುಂಡಿಯಲ್ಲಿ. ಅವರು ಬೆಳೆದು ಬಂದಿರುವ ಪರಿಸರದಲ್ಲಿ ಎನ್ನುವುದು ಬಹಳ ಮುಖ್ಯ. ಅಲ್ಲಿ ಅವರು ಇದ್ದುದು ಜನರೊಂದಿಗೆ ಮತ್ತು ಜನರಿಗಾಗಿ. ಬೆಳೆದದ್ದು ಜನಾನುರಾಗಿಯಾಗಿ. ಅವರ ಮೊದಲ ಅಕ್ಷರಗಳು ಮೂಡಿದ್ದು ಅವರೂರಿನ ಮರಳಿನ ಮೇಲೆ. ಅಲ್ಲೊಬ್ಬರು ನಂಜೇಗೌಡ ಅಂತ ಮೇಷ್ಟ್ರು ಇದ್ದರು. ಸಿದ್ದರಾಮೇಶ್ವರ ಗುಡಿಯಲ್ಲಿ ನಡೆಯುತ್ತಿದ್ದ ಪಾರಂಪರಿಕ ನೃತ್ಯ 'ವೀರ ಮಕ್ಕಳ' ಕುಣಿತವನ್ನು ಕಲಿಸುವ ಮೇಷ್ಟ್ರು. ಅಲ್ಲಿ ಕುಣಿತಕ್ಕೆ ಹೆಜ್ಜೆ ಹಾಕುತ್ತಿದ್ದ ಸಿದ್ದರಾಮಯ್ಯ ಅವರಿಗೆ ಮರಳಿನ ಮೇಲೆ ಅಕ್ಷರಾಭ್ಯಾಸ ಮಾಡಿಸಿದವರು. ಗಣಿತ ಪಾಠ ಮಾಡಿದವರು. ನಂತರ ರಾಜಪ್ಪ ಮೇಷ್ಟ್ರೇ ಸಿದ್ದರಾಮಯ್ಯ ಅವರನ್ನು ಐದನೇ ತರಗತಿಗೆ ಸೇರಿಸಿದರು. ಇದೇ ಅವರ ಬದುಕಿನ ಬಹುಮುಖ್ಯ ತಿರುವಾಯಿತು. ಮುಂದೆ ಬಿಎಸ್‌ಸಿ ಮುಗಿಸಿ ಎಲ್‌ಎಲ್‌ಬಿಯನ್ನೂ ಗಳಿಸಲು ಸಾಧ್ಯವಾಯಿತು.

ಇಷ್ಟೆಲ್ಲದರ ನಡುವೆ ಅವರು ಜನರೊಂದಿಗೆ ಇದ್ದವರು ಮತ್ತು ಜನರೇ ಅವರ ಶಕ್ತಿ ಎಂಬುದಕ್ಕೆ ಅನೇಕ ಉದಾಹರಣೆಗಳು ಸಿಗುತ್ತವೆ. 1983ರಲ್ಲಿ ಸಿದ್ದರಾಮಯ್ಯ ಅವರು ಮೊದಲ ಬಾರಿಗೆ



**ಜನನ:** ಆಗಸ್ಟ್ 03, 1947
**ತಂದೆ:** ಸಿದ್ದರಾಮೇಗೌಡ
**ತಾಯಿ:** ಬೋರಮ್ಮ
**ಪತ್ನಿ:** ಪಾರ್ವತಿ
**ವಿದ್ಯಾಭ್ಯಾಸ:** ಎಲ್‌ಎಲ್‌ಬಿ



Downloaded From:www.kpscvaani.com

ಚುನಾವಣೆಗೆ ನಿಂತಾಗ ಅವರ ಬಳಿ ನಾಮಪತ್ರ ಸಲ್ಲಿಸಲೂ ದುಡ್ಡು ಇರಲಿಲ್ಲ. ಆದರೆ ಜನ ಬಿಡಲಿಲ್ಲ. ತಾವೇ ನೂರು, ಇನ್ನೂರು ರೂಪಾಯಿ ಸಂಗ್ರಹ ಮಾಡಿ ಚುನಾವಣೆಗೆ ನಿಲ್ಲಿಸಿ ಗೆಲ್ಲುವಂತೆ ಮಾಡಿದರು. ಇದಕ್ಕೆ ಬಲವಾದ ಕಾರಣವೂ ಇತ್ತು ಅನ್ನಿ. ಎಲ್‌ಎಲ್‌ಬಿ ಮುಗಿಸಿ ವಕೀಲ ವೃತ್ತಿ ಶುರು ಮಾಡಿಕೊಂಡಿದ್ದ ಸಿದ್ದರಾಮಯ್ಯ ತಮ್ಮ ಬಳಿ ಬಂದ ಬಡ ಕಕ್ಷಿದಾರರಿಂದ ದುಡ್ಡು ತೆಗೆದುಕೊಳ್ಳುತ್ತಿರಲಿಲ್ಲ. ಹಾಗಾಗಿ ಇಂತಹ 'ಅಭಿಮಾನದ ಹೊರೆ' ಜನರ ಮೇಲಿತ್ತು. ಅದು ಅವರನ್ನು ಗೆಲ್ಲಿಸಿ ವಿಧಾನಸಭೆಯ ಮೆಟ್ಟಿಲು ಏರುವಂತೆ ಮಾಡಿತು.

ಹಾಗೆ 'ಶಕ್ತಿ ಕೇಂದ್ರ'ದ ಮೆಟ್ಟಿಲು ಏರಿದವರ ರಾಜಕೀಯ ಜೀವನದ ಏರಿಳಿತ ಬಹು ದೊಡ್ಡದು. ಅವರು ಕೆಲವು ಬಾರಿ ಸೋತಿದ್ದಾರೆ. ಆದರೆ ಆ ಸೋಲನ್ನು ಮೀರಿಸುವ ಹಾಗೆ ಗೆದ್ದು ತೋರಿಸಿದ್ದಾರೆ ಮತ್ತು ತಮ್ಮದೇ ಶೈಲಿಯಲ್ಲಿ ಹೊಸ ಹುಟ್ಟು ಪಡೆದಿದ್ದಾರೆ. ಸಿದ್ದರಾಮಯ್ಯ ಅವರ ಅಷ್ಟೂ ರಾಜಕೀಯ ಜೀವನದ ಮೈಲುಗಲ್ಲುಗಳನ್ನು ಒಮ್ಮೆ ಅವಲೋಕನ ಮಾಡಿದರೆ ಇದು ವೇದ್ಯವಾಗುತ್ತದೆ. ಅಂದರೆ ಅವರು ತಮ್ಮ ಜೀವನದ ನಿರ್ಣಾಯಕ ಕಾಲಘಟ್ಟದಲ್ಲೆಲ್ಲ ಅತ್ಯಂತ ನಿರ್ಣಾಯಕವಾದ ನಿರ್ಧಾರವನ್ನು ಕೈಗೊಂಡಿದ್ದಾರೆ. ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಲೋಕದಳದಿಂದ ಕಣಕ್ಕಿಳಿದದ್ದು, ಜನತಾ ಪಕ್ಷ ಸೇರಿ ಕನ್ನಡ ಕಾವಲು ಸಮಿತಿ ಅಧ್ಯಕ್ಷರಾಗಿದ್ದು, ಜನತಾದಳದಲ್ಲಿ ಪ್ರಧಾನ ಕಾರ್ಯದರ್ಶಿ, ಒಡೆದ ದಳವನ್ನು ಬಿಟ್ಟು ಜಾತ್ಯಾತೀತ ದಳವನ್ನು ಸೇರಿ ಆ ಪಕ್ಷದ ರಾಜ್ಯ ಘಟಕದ ಅಧ್ಯಕ್ಷರಾಗಿದ್ದು, ಜೆ.ಎಚ್.ಪಟೇಲ್ ಮುಖ್ಯಮಂತ್ರಿ ಆಗಿದ್ದ ಸಮ್ಮಿಶ್ರ ಸರ್ಕಾರದಲ್ಲಿ ಉಪಮುಖ್ಯಮಂತ್ರಿ ಸ್ಥಾನ ಗಳಿಸಿದ್ದು, ಜಾತ್ಯಾತೀತ ದಳವೂ ಏಕವ್ಯಕ್ತಿಯ ಹಿಡಿತಕ್ಕೆ ಸಿಕ್ಕಾಗ ಅಲ್ಲಿಂದ ಕಾಂಗ್ರೆಸ್ ಸೇರಿದ್ದು, ಮತ್ತು ಮುಖ್ಯಮಂತ್ರಿಯಾಗುವ ಎರಡೂ



## 24ನೇ ಮುಖ್ಯಮಂತ್ರಿ: ಅದ್ಧೂರಿ ಪ್ರಮಾಣ ವಚನ



ಮೇ ತಿಂಗಳ 10ರಂದು ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಭರ್ಜರಿ ಬಹುಮತ. 135 ಸ್ಥಾನಗಳನ್ನು ಗಳಿಸಿದ ಕಾಂಗ್ರೆಸ್‌ನ ಶಾಸಕಾಂಗ ಪಕ್ಷದ ನಾಯಕರಾಗಿ ಆಯ್ಕೆಯಾಗಿದ್ದು ಹಿರಿಯ ಮುತ್ಸದ್ದಿ ಸಿದ್ದರಾಮಯ್ಯ ಅವರು. ನೂತನ ಸರ್ಕಾರದ ಪ್ರಮಾಣ ವಚನ ಸಮಾರಂಭ ಅದ್ಧೂರಿಯಾಗಿ ನಡೆದಿದ್ದು ಮೇ 20ರಂದು ಶನಿವಾರ ಬೆಂಗಳೂರಿನ ಕಂಠೀರವ ಕ್ರೀಡಾಂಗಣದಲ್ಲಿ.

ರಾಜ್ಯಪಾಲರಾದ ಥಾವರ್‌ಚಂದ್ ಗೆಹ್ಲೋಟ್ ಅವರು ರಾಜ್ಯದ 24ನೇ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಗೋಪ್ಯತೆಯ ಪ್ರಮಾಣ ವಚನ ಬೋಧಿಸಿದರು. ಸಿದ್ದರಾಮಯ್ಯ ಅವರು ರಾಜ್ಯದ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸುತ್ತಿರುವುದು ಇದು ಎರಡನೇ ಬಾರಿ.

ಇದರ ಜೊತೆಗೆ ಪಕ್ಷದ ಗೆಲುವಿನಲ್ಲಿ ಬಹುಮುಖ್ಯ ಪಾತ್ರವನ್ನು ವಹಿಸಿದ ಡಿ.ಕೆ.ಶಿವಕುಮಾರ್ ಅವರು ಉಪಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದರು. ಇವರ ಜೊತೆಗೆ ಮಂತ್ರಿ ಮಂಡಲವನ್ನು ಸೇರಿದ ಇತರ ಮುಖಂಡರೆಂದರೆ; ಡಾ.ಜಿ.ಪರಮೇಶ್ವರ್, ಕೆ.ಎಚ್.ಮುನಿಯಪ್ಪ, ಎಂ.ಬಿ.ಪಾಟೀಲ್, ಕೆ.ಜೆ.ಜಾರ್ಜ್, ಸತೀಶ್ ಜಾರಕಿಹೊಳಿ, ರಾಮಲಿಂಗಾರೆಡ್ಡಿ, ಪ್ರಿಯಾಂಕಖರ್ಗೆ ಮತ್ತು ಜಮೀರ್ ಅಹಮದ್ ಖಾನ್.

ಸಮಾರಂಭದಲ್ಲಿ ಕಾಂಗ್ರೆಸ್ ಮುಖಂಡರಾದ ರಾಹುಲ್ ಗಾಂಧಿ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಪ್ರಿಯಾಂಕ ಗಾಂಧಿ, ತಮಿಳುನಾಡು, ಬಿಹಾರ, ರಾಜಸ್ತಾನ, ಛತ್ತೀಸ್‌ಗಢ, ಹಿಮಾಚಲ ಪ್ರದೇಶ, ಜಾರ್ಖಂಡ್ ಮುಖ್ಯಮಂತ್ರಿಗಳಾದ ಎಂ.ಕೆ.ಸ್ಟಾಲಿನ್, ನಿತೀಶ್‌ಕುಮಾರ್, ಅಶೋಕ್ ಗೆಹ್ಲೋಟ್, ಭೂಪೇಶ್ ಬಘೇಲ್, ಸುಖ್ವಿಂದರ್ ಸಿಂಗ್ ಸುಖು, ಹೇಮಂತ್ ಸೊರೇನ್, ಎನ್‌ಸಿಪಿ ನಾಯಕ ಶರದ್ ಪವಾರ್, ಸಿಪಿಎಂ ಮುಖಂಡ ಸೀತಾರಾಮ್ ಯೆಚೂರಿ, ಸಿಪಿಐ ನಾಯಕ ಡಿ.ರಾಜಾ, ಮಕ್ಕಳ ನಿಧಿ ಮಯ್ಯಂ ನಾಯಕ ಕಮಲಹಾಸನ್, ಎನ್‌ಸಿಪಿ ಮುಖಂಡ ಫಾರೂಕ್ ಅಬ್ದುಲ್ಲ, ಪಿಡಿಪಿ ನಾಯಕಿ ಮೆಹಬೂಬಾ ಮುಫ್ತಿ ಸೇರಿದಂತೆ ಅನೇಕ ಮಂದಿ ಗಣ್ಯರು ಹಾಜರಿದ್ದರು.



Downloaded From:www.kpscvaani.com



## ಹಸಿದವರ ಹೊಟ್ಟೆಯ ಅನ್ನದ ಅಗಳುಗಳಾದ

# ಅನ್ನಭಾಗ್ಯ ಯೋಜನೆ

"ಮಕ್ಕಳಿಗೆ ಜ್ವರ ಬಂದಾಗ ಅವರ ತಾಯಂದಿರು ಒಂದು ತುತ್ತು ಅನ್ನಕ್ಕಾಗಿ ಮಾಡುತ್ತಿರುವ ಒದ್ದಾಟವನ್ನು ಕಣ್ಣಾರೆ ಕಂಡಿದ್ದೇನೆ. ಸಿದ್ದರಾಮನಹುಂಡಿಯಲ್ಲಿ ಇಂತಹ ಜೀವನಗಳನ್ನು ನೋಡುತ್ತಲೇ ಬೆಳೆದವನು ನಾನು" ಎಂದು ಸಿದ್ದರಾಮಯ್ಯನವರು ಅನೇಕ ಬಾರಿ ಹೇಳಿದ್ದಾರೆ.

ಇಂತಹ ಹಸಿದ ತಾಯಂದಿರು ಮತ್ತು ಮಕ್ಕಳ ಅನ್ನದ ಅಗಳುಗಳಾಗಿ ಅವರು ಜಾರಿಗೆ ತಂದ 'ಅನ್ನಭಾಗ್ಯ' ಯೋಜನೆ ಕೆಲಸ ಮಾಡಿವೆ ಎಂಬುದು ನಿಶ್ಚಿತ. ಎಲ್ಲಕ್ಕಿಂತ ಮುಖ್ಯವಾಗಿ ಅಂತಹ ಮನೆಗಳ ಆರ್ಥಿಕ ಸ್ಥಿತಿಯಲ್ಲಿಯೂ ಚೇತರಿಕೆ ಕಾಣಲು ಅದು ಸಹಕಾರಿಯಾಗಿತ್ತು ಎಂಬುದರಲ್ಲಿ ಬೇರೆ ಮಾತಿಲ್ಲ. ಹತ್ತು ಕೆಜಿ ಅಕ್ಕಿ ಉಳ್ಳವರ ಪಾಲಿಗೆ ತೀರಾ ಸಣ್ಣದಾಗಿ ಕಾಣಿಸಬಹುದು. ಆದರೆ ಅದಕ್ಕೆ ಲಕ್ಷಾಂತರ ಕುಟುಂಬಗಳ ಕಣ್ಣೀರು ಒರೆಸುವ ತಾಕತ್ತು ಇತ್ತು.

ಅವರು ಜಾರಿಗೆ ತಂದ ಇಂದಿರಾ ಕ್ಯಾಂಟೀನು, ವಿದ್ಯಾಸಿರಿ, ಕೃಷಿಭಾಗ್ಯದಂತಹ ಹತ್ತಾರು ಯೋಜನೆಗಳ ಹಿಂದೆ ಗ್ರಾಮೀಣ ಬದುಕಿನ ಪ್ರತಿಬಿಂಬವೇ ನಿಚ್ಚಳವಾಗಿ ಕಾಣುತ್ತದೆ

## ಸಿದ್ದು ಹೆಜ್ಜೆ ಗುರುತುಗಳು

**ಲೋಕಸಭೆಗೆ ಸ್ಪರ್ಧೆ** : 1980 ರಲ್ಲಿ ಮೈಸೂರು ಲೋಕಸಭಾ ಕ್ಷೇತ್ರದಿಂದ ಸ್ಪರ್ಧೆ, ಸೋಲು

**ವಿಧಾನಸಭೆ ಪ್ರವೇಶ** : 1983 ರಲ್ಲಿ ಚಾಮುಂಡೇಶ್ವರಿ ಕ್ಷೇತ್ರದಿಂದ ಲೋಕದಳದ ಅಭ್ಯರ್ಥಿಯಾಗಿ ಸ್ಪರ್ಧೆ. **ಅದೇ ವರ್ಷ ಕನ್ನಡ ಕಾವಲು ಸಮಿತಿಯ ಮೊದಲ ಅಧ್ಯಕ್ಷರಾಗಿ ನೇಮಕ.**

**ಸಚಿವ ಸ್ಥಾನ** : 1985 ರಲ್ಲಿ ನಡೆದ ಮಧ್ಯಂತರ ಚುನಾವಣೆಯಲ್ಲಿ ಪುನರಾಯ್ಕೆ, ರಾಮಕೃಷ್ಣ ಹೆಗಡೆ ಸಂಪುಟದಲ್ಲಿ ಪಶುಸಂಗೋಪನಾ ಸಚಿವರಾಗಿ ನೇಮಕ. ಎಸ್.ಆರ್.ಬೊಮ್ಮಾಯಿ ಸಂಪುಟದಲ್ಲಿ ಸಾರಿಗೆ ಸಚಿವ.

**ಮೊದಲ ಸೋಲು** : 1989 ರಲ್ಲಿ ಕಾಂಗ್ರೆಸ್ಸಿನ ಎಂ.ರಾಜಶೇಖರಮೂರ್ತಿ ಅವರ ವಿರುದ್ಧ ಸೋಲು.

**ಜನತಾದಳ ಪ್ರಧಾನ ಕಾರ್ಯದರ್ಶಿ**:1992ರಲ್ಲಿ ಪಕ್ಷ ಸಂಘಟನೆಯ ಜವಾಬ್ದಾರಿ.

**ಹಣಕಾಸು ಸಚಿವ** : 1994ಲ್ಲಿ ಮರು ಆಯ್ಕೆ, ದೇವೇಗೌಡ ಸರಕಾರದಲ್ಲಿ ಹಣಕಾಸು ಸಚಿವ.

**ಉಪಮುಖ್ಯಮಂತ್ರಿ** : 1996 ರಲ್ಲಿ ಜೆ.ಎಚ್.ಪಟೇಲರ ನೇತೃತ್ವದ ಸರ್ಕಾರದಲ್ಲಿ ಉಪಮುಖ್ಯಮಂತ್ರಿ ಸ್ಥಾನ

**ಜೆಡಿಎಸ್ ಸೇರ್ಪಡೆ** : 1999 ರಲ್ಲಿ ದೇವೇಗೌಡರ ನೇತೃತ್ವದ ಜೆಡಿಎಸ್ ಸೇರ್ಪಡೆ

**ಡಿಸಿಎಂ** : 2004 ರಲ್ಲಿ ಕಾಂಗ್ರೆಸ್-ಜೆಡಿಎಸ್ ಸಮ್ಮಿಶ್ರ ಸರ್ಕಾರದಲ್ಲಿ ಡಿಸಿಎಂ.

**ಜೆಡಿಎಸ್ ತೊರೆದಿದ್ದು**: 2005 ರಲ್ಲಿ ದೇವೇಗೌಡರ ಜೊತೆಗಿನ ಭಿನ್ನಾಭಿಪ್ರಾಯದಿಂದ ಜೆಡಿಎಸ್ ನಿಂದ ಹೊರನಡೆದರು.

ಸಂದರ್ಭಗಳಲ್ಲಿ ತಮ್ಮ ವರ್ಚಸ್ಸು ಕುಂದದಂತೆ ನೋಡಿಕೊಂಡಿದ್ದು ಇವೆಲ್ಲವೂ ಒಬ್ಬ ನಾಯಕನ ದೃಷ್ಟಿಯಿಂದ ಮುಖ್ಯವಾಗುತ್ತಾ ಹೋಗುತ್ತದೆ.

ದೇವರಾಜು ಅರಸು ನಂತರದ ಕಾಲಘಟ್ಟದಲ್ಲಿ ರಾಜ್ಯ ರಾಜಕೀಯದಲ್ಲಿ ಅನೇಕ ಮಂದಿ ಬಂದು ಹೋಗಿದ್ದಾರೆ. ಆದರೆ ಗಟ್ಟಿ ಕಾಳುಗಳಾಗಿ ನಿಂತವರು ಬೆರಳೆಣಿಕೆಯ ಮಂದಿ. ಅವರಲ್ಲಿ ಮೊದಲಿಗರಾಗಿ ನಿಲ್ಲುವವರು ಸಿದ್ದರಾಮಯ್ಯನವರು. ಕೇವಲ ಘೋಷಣೆಗಳ, ಥಳಕು-ಬಳುಕಿನ, ಗಿಮಿಕ್ಕಿನಿಂದಷ್ಟೇ ರಾಜಕೀಯ ಮಾಡಿದವರನ್ನು ಜನ ಬಹುಬೇಗ ಮೂಲೆಗುಂಪು ಮಾಡುತ್ತಾರೆ ಎಂಬುದು ಕಾಲಕಾಲದಿಂದಲೂ ಸಾಬೀತಾಗುತ್ತಲೇ ಬಂದಿದೆ. ಅಂತಹ ರಾಜಕಾರಣ ಮಾಡುವವರಿಗೆ ಮತ್ತು ರಾಜಕೀಯಕ್ಕೆ ಹೊಸದಾಗಿ ಎಂಟ್ರಿಕೊಟ್ಟವರಿಗೆ ಸಿದ್ದರಾಮಯ್ಯ ಮಾದರಿಯಾಗಿ ನಿಲ್ಲುತ್ತಾರೆ. 2013ರಲ್ಲಿ ಅಧಿಕಾರಕ್ಕೇರುವ ಮುನ್ನ ಕಾಂಗ್ರೆಸ್ ಪಕ್ಷ ಕೊಟ್ಟ ಭರವಸೆಗಳು ಅನೇಕರಿಗೆ ನೆನಪಿರಬಹುದು. ಅವುಗಳು ಎಷ್ಟರ ಮಟ್ಟಿಗೆ ಈಡೇರಿವೆ ಎಂಬ ಪ್ರಶ್ನೆ ಸಾಮಾನ್ಯ. ಇದಕ್ಕೆ ಮುಖ್ಯಮಂತ್ರಿಯಾಗಿ ಆಯ್ಕೆಯಾದ ಬಳಿಕ ಸಿದ್ದರಾಮಯ್ಯನವರು ಸತತ ಐದು ವರ್ಷಗಳ ಕಾಲ ಮಂಡಿಸಿದ ಐದೂ ಬಜೆಟ್‌ಗಳನ್ನು 'ಗಂಭೀರವಾಗಿ' ಪರಿಶೀಲಿಸಿದರೆ ಉತ್ತರ ದೊರೆಯುತ್ತದೆ. ಅವೆಲ್ಲವೂ ಕಾರ್ಯಕ್ರಮಗಳಾಗಿ, ಯೋಜನೆಗಳಾಗಿ ಜನರ ಮನೆಗಳನ್ನು ತಲುಪಿವೆ. ಸಿದ್ದರಾಮಯ್ಯ ಅವರು ಮತ್ತೊಮ್ಮೆ ಮುಖ್ಯಮಂತ್ರಿಯಾಗಿರುವುದು ಮತ್ತು ಅವರ ಒಟ್ಟು ರಾಜಕೀಯ ಜೀವನದ ಸಾರ್ಥಕ್ಯ ಇರುವುದೇ ಇಲ್ಲಿ.

ರಾಜಕೀಯದ ತಿರುಗಣಿಯಲ್ಲಿ ಇಷ್ಟೆಲ್ಲ ಮುಪ್ಪುರಿಗೊಂಡಿರುವ, ಈಗಲೂ ಸಾಮಾಜಿಕ ಕಳಕಳಿಯನ್ನು ಉಳಿಸಿಕೊಂಡಿರುವ ಸಿದ್ದರಾಮಯ್ಯ ಅವರನ್ನು ಟಗರು, ಪೊಗರು, ಖದರು ಎನ್ನುವುದೆಲ್ಲ ತೀರಾ ಕ್ಲೀಷೆ. ಅವರು ಇವೆಲ್ಲ ಅನುಭವಗಳಿಂದ ಮಾಗಿದ ಅತ್ಯುತ್ತಮ ಸಂಸದೀಯ ಪಟು ಎನ್ನುವುದು ನಿರ್ವಿವಾದ. ■



Downloaded From:www.kpscvaani.com



## ನಿರಂತರ ನಿಷ್ಠೆಗೆ ಸಂದ ಜಯ

### ರಾಜ್ಯದ ಒಂಬತ್ತನೇ ಉಪಮುಖ್ಯಮಂತ್ರಿಯಾಗಿ

# ಡಿ.ಕೆ.ಶಿವಕುಮಾರ್

ಚಂದ್ರಮುಖಿ

ಮೊನ್ನೆ ಅವರು ಸಂಪೂರ್ಣ ಭಾವಪರವಶರಾದರು. ಅವರು ಅಧ್ಯಕ್ಷರಾಗಿರುವ ಕಾಂಗ್ರೆಸ್ ಪಕ್ಷ ರಾಜ್ಯದಲ್ಲಿ 135 ಸ್ಥಾನಗಳನ್ನು ಗೆದ್ದು ಅಭೂತಪೂರ್ವ ವಿಜಯವನ್ನು ಸಾಧಿಸಿತ್ತು. ಎಲ್ಲೆಲ್ಲೂ ವಿಜಯೋತ್ಸಾಹದ ಸಂಭ್ರಮವೇ ಹಾಸಿತ್ತು. ಆದರೆ ಅವರು ಅಷ್ಟೂ ದಿನ ಅವಡುಕಚ್ಚಿ ಕಾಪಿಟ್ಟುಕೊಂಡಿದ್ದ ದುಃಖ ಕಟ್ಟೆಯೊಡೆದಿತ್ತು. ಪಕ್ಷ ಬಹುಮತ ಪಡೆದಿದ್ದಕ್ಕೆ ಭಾವುಕರಾದರು.

ಡಿ.ಕೆ.ಶಿವಕುಮಾರ್ ಎಂದರೆ ಬಂಡೆ, ಕಲ್ಲು ಹೃದಯ, ಡೇರ್ ಆ್ಯಂಡ್ ಡೆವಿಲ್, ಟ್ರಬಲ್ ಶೂಟರ್ ವಗೈರೆ ಬಿರುದುಗಳನ್ನು ಕೊಟ್ಟುಕೊಂಡೇ ಬಂದವರಿಗೆ ಇದು ಅಚ್ಚರಿಯಾಗಿತ್ತು. ತಮ್ಮ ಪಕ್ಷವನ್ನು ಈ ಮಟ್ಟಿಗೆ ಗೆಲ್ಲಿಸಿಕೊಂಡು ಬರುವುದು ಸಾಮಾನ್ಯ ಮಾತಾಗಿರಲಿಲ್ಲ. ಅದು ಕೊನೆಗೂ ಸಾಧ್ಯವಾಗಿತ್ತು. ಅಂತಹ ಸಂದರ್ಭದಲ್ಲಿ ಬಂಡೆಯೂ ಕರಗುತ್ತದೆ ಎಂಬುದಕ್ಕೆ ಅವರ ಭಾವುಕತೆ ಸಾಕ್ಷಿಯಾಗಿದ್ದವು. ಒಂದು ರೀತಿಯಲ್ಲಿ ಅದು ಖುಷಿಯ ಕಣ್ಣೀರಾಗಿತ್ತು.

ಕಷ್ಟಗಳು, ಮತ್ತೆ ಮತ್ತೆ ಬಿದ್ದ ಹೊಡೆತಗಳು ಅವರನ್ನು ಮಾಗುವಂತೆ ಮಾಡಿದೆ ಎಂಬುದು ನಿಜ. ಇದು ಅವರ ರಾಜಕೀಯ ಜೀವನದ ಅತ್ಯಂತ ನಿರ್ಣಾಯಕ ಕಾಲಘಟ್ಟ. ಎಲ್ಲವನ್ನೂ ಎಲ್ಲ ಕಾಲದಲ್ಲಿಯೂ ಜಿದ್ದಿಗೆ ಬಿದ್ದು ಗಿಟ್ಟಿಸಿಕೊಳ್ಳಲು ಸಾಧ್ಯವಿಲ್ಲ. ಸಂಯಮವೂ ಬೇಕಾಗುತ್ತದೆ ಎಂಬುದನ್ನು ಕಲಿಸುವ ಕಾಲಘಟ್ಟವಿದು. ಅದು ಅವರಿಗೆ ಅರ್ಥವಾಗಿದೆ ಅಥವಾ ಕಾಲವು ಅರ್ಥ ಮಾಡಿಸಿದೆ.

ಇದಕ್ಕೆ ಕಳೆದ ಮೂವತ್ತು ನಲವತ್ತು ವರ್ಷಗಳ ಡಿ.ಕೆ.ಶಿವಕುಮಾರ್ ಅವರ ರಾಜಕೀಯ ಜೀವನದ ಪುಟಗಳನ್ನು ತೆರೆದು ನೋಡ ಬೇಕು. ಅಲ್ಲಿ ನಮಗೆ ಮೊದಲಿಗೆ ಕಣ್ಣಿಗೆ ರಾಚುವುದು ಸಾತನೂರಿನ ರಾಜಕೀಯ. ಬಹುತೇಕ ಇಡೀ ರಾಜ್ಯವೇ ಅಲ್ಲಿನ ವಿದ್ಯಮಾನಗಳನ್ನು ಕುತೂಹಲದಿಂದ ಗಮನಿಸುವ ಮಟ್ಟಕ್ಕೆ ಅದು ಬೆಳೆದಿತ್ತು. ಆಗಿನ್ನೂ ಕಾಲೇಜಿನ ವಿದ್ಯಾರ್ಥಿ ನಾಯಕನಾಗಿ, ಎನ್‌ಎಸ್‌ಯುಐ ಮತ್ತು ಯುವ ಕಾಂಗ್ರೆಸ್ ಅಧ್ಯಕ್ಷರಾಗಿ ತಮ್ಮ ಆಕ್ರಮಣಕಾರಿ ನಿಲುವಿನಿಂದ 'ಖ್ಯಾತರಾಗಿದ್ದ' ಡಿಕೆ ಮೊಟ್ಟ ಮೊದಲು ಆಖಾಡಕ್ಕೆ ಇಳಿದಿದ್ದು ಎಚ್.ಡಿ.ದೇವೇಗೌಡರ ವಿರುದ್ಧ (1985ರಲ್ಲಿ). ಅದು ಅತ್ಯಂತ ತುರುಸಿನ ಸ್ಪರ್ಧೆ. ಅದರಲ್ಲಿ ಡಿಕೆಶಿ ಸೋತರಾದರೂ ಅವರೊಬ್ಬ ಟ್ರಬಲ್ ಶೂಟರ್ ಮತ್ತು ಬಡಪೆಟ್ಟಿಗೆ ಮಣಿಯುವ ಆಸಾಮಿ ಅಲ್ಲ ಎಂಬುದು ಕಾಂಗ್ರೆಸ್‌ಗೆ ಅರ್ಥವಾಗಿತ್ತು ಮತ್ತು ಜನರಿಗೆ ಸಾಬೀತಾಗಿತ್ತು.


Downloaded From:www.kpscvaani.com



ದೊಡ್ಡಾಲನಹಳ್ಳಿಯ ಕೆಂಪೇಗೌಡ ಮತ್ತು ಗೌರಮ್ಮ ಅವರ ಮಗನಾದ ಶಿವಕುಮಾರ್ ಅವರಿಗೆ ಇದ್ದುದು ದೊಡ್ಡ ಉದ್ಯಮಿಯಾಗುವ ಕನಸು. ಅದಕ್ಕಾಗಿ ಊರಲ್ಲಿದ್ದ ಭೂಮಿಯನ್ನು ಮಾರಾಟ ಮಾಡಿದ್ದರು. ಬೆಂಗಳೂರಿನಲ್ಲಿ ಕೋಳಿ ಫಾರಂ ಆರಂಭಿಸಿದ್ದರು. ಆದರೆ ಸೆಳೆದಿದ್ದು ಸಾತನೂರಿನ ರಾಜಕೀಯ. ಅಲ್ಲಿ ಅವರ ಹೆಸರು ದೊಡ್ಡ ಮಟ್ಟಿನಲ್ಲಿ ರಿಜಿಸ್ಟರ್ ಆಗಿತ್ತು. ಆ ಹಿಡಿತವನ್ನು ಅವರೆಂದೂ ಸಡಿಸಲಿಲ್ಲ. ದೇವೇಗೌಡರ ಪ್ರತಿರೋಧದ ನಡುವೆಯೇ ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯತಿಯ ಸದಸ್ಯರಾದರು. ಮುಂದಿನ ಐದು ವರ್ಷಗಳಲ್ಲಿ ಮತ್ತೆ ಚುನಾವಣೆ ಬಂತು. ಆಗ ಅವರು ಜೆಡಿಎಸ್‌ನ ಯು.ಕೆ.ಸ್ವಾಮಿ ವಿರುದ್ಧ(1989) ಹಾಗೂ ಮುಂದಿನ ಎಲ್ಲಾ ಚುನಾವಣೆಗಳಲ್ಲಿ ಸೋಲನ್ನು ಕಾಣಲಿಲ್ಲ. ಸಾತನೂರಿನ ಹಣಾಹಣಿ ಪ್ರತಿಷ್ಠೆಯ ಕಣವಾಯಿತು. ಕುಮಾರಸ್ವಾಮಿ ಅವರಿಗೆ 1999ರಲ್ಲಿ ಸೋಲಾಯಿತು. ಕ್ರಮೇಣ ಕ್ಷೇತ್ರದಲ್ಲಿ ಜೆಡಿಎಸ್ ಪ್ರಭಾವ ಕಡಿಮೆಯಾಗುತ್ತ ಹೋಯಿತು.

ಶಿವಕುಮಾರ್ ಅವರು 2004ರ ಲೋಕಸಭಾ ಚುನಾವಣೆಯಲ್ಲಿ ದೇವೇಗೌಡರ ವಿರುದ್ಧ ಪತ್ರಕರ್ತೆ ತೇಜಸ್ವಿನಿ ಅವರನ್ನು ಕಾಂಗ್ರೆಸ್ ಅಭ್ಯರ್ಥಿಯನ್ನಾಗಿ ಮಾಡಿದರು. ಹಾಗೆ ಮಾಡಿದ್ದು ಮಾತ್ರವಲ್ಲದೆ ಆಕೆಯನ್ನು ಗೆಲ್ಲಿಸುವಲ್ಲಿ ಸಫಲರಾದರು. ಮುಂದೆ ಕನಕಪುರದೊಂದಿಗೆ ಸಾತನೂರು ಕ್ಷೇತ್ರವನ್ನು ವಿಲೀನಗೊಳಿಸಿದರಿಂದ ಸಾತನೂರು ಕನಕಪುರವಾಗಿ ಬದಲಾಯಿತು. ಆದರೂ ಫಲಿತಾಂಶ ಮಾತ್ರ ಬದಲಾಗಲಿಲ್ಲ.

ರಾಜ್ಯ ರಾಜಕಾರಣದಲ್ಲಿ ಅನೇಕ ಬಾರಿ ಅವರು ಕಿಂಗ್ ಮೇಕರ್ ಆಗಿ ಕೆಲಸ ಮಾಡಿದ್ದಾರೆ. ಅದು ಆರಂಭವಾಗಿದ್ದು 1991ರಲ್ಲಿ. ಆಗ ಡಿಕೆಶಿ ವಹಿಸಿದ ನಿರ್ಣಾಯಕ ಪಾತ್ರದ ಫಲವಾಗಿ ಬಂಗಾರಪ್ಪ ಮುಖ್ಯಮಂತ್ರಿಯಾದರು. ಅಂದು ಅವರು ಮೊದಲ ಬಾರಿಗೆ ಬಂದೀಖಾನೆ ಸಚಿವರಾದರು. ಮುಂದೆ ಬಂಗಾರಪ್ಪ ಗರಡಿಯಲ್ಲಿಯೇ ಬೆಳೆದರು. ಆ ಬಳಿಕ ಎಸ್.ಎಂ.ಕೃಷ್ಣ ಸರ್ಕಾರ ಅಧಿಕಾರ ಬಂದಾಗಲೂ ನಗರಾಭಿವೃದ್ಧಿ ಖಾತೆಯ ಹೊಣೆ ಹೊತ್ತರು. ಎರಡೂ ಸರ್ಕಾರಗಳಲ್ಲಿ ಅವರು ಸಿಎಂಗೆ ಬಲಗೈ ಬಂಟರಾಗಿ ಕೆಲಸ ಮಾಡಿದರು. ತಾನು ಬಂಗಾರಪ್ಪ ಅವರ ಶಿಷ್ಯ ಎಂದು ಅವರು ಯಾವಾಗಲೂ ಹೇಳಿಕೊಳ್ಳುತ್ತಿರುತ್ತಾರೆ. ಆದರೆ ಅನೇಕ ಬಾರಿ ಅವರಿಗೆ ದಕ್ಕಬೇಕಾಗಿದ್ದ ಹುದ್ದೆಗಳು, ಖಾತೆಗಳು ಸಿಗುವುದು ವಿಳಂಬವಾಯಿತು ಎನ್ನುವುದು ನಿಜ. ಅದಕ್ಕೆ ಕಾರಣ ಎದುರಾಳಿಗಳು ಮಾತ್ರವಲ್ಲ ಎಂಬುದು ಅವರಿಗೂ ಗೊತ್ತು. ಇದಕ್ಕೆ ಸಮ್ಮಿಶ್ರ



**ಜನನ:** ಮೇ 15, 1962
**ತಂದೆ:** ಕೆಂಪೇಗೌಡ
**ತಾಯಿ:** ಗೌರಮ್ಮ
**ಪತ್ನಿ:** ಉಷಾ
**ವಿದ್ಯಾಭ್ಯಾಸ:** ಸ್ನಾತಕೋತ್ತರ ಪದವಿ


Downloaded From:www.kpscvaani.com



ಸರ್ಕಾರ ಮತ್ತು ಹಿಂದಿನ ಸರ್ಕಾರದಲ್ಲಿ ವಿಳಂಬವಾಗಿ ಸಿಕ್ಕ ಖಾತೆಗಳು ಉದಾಹರಣೆಗಳಾಗಿ ನಿಲ್ಲುತ್ತವೆ.

ರಾಜಕಾರಣದಲ್ಲಿ ಪಕ್ಷ ಎಷ್ಟೇ ದೊಡ್ಡದಾಗಿದ್ದರೂ ಕೂಡ ಒಬ್ಬ 'ಟ್ರಬಲ್ ಶೂಟರ್' ಬೇಕೇ ಬೇಕಾಗುತ್ತದೆ. ಬಿಕ್ಕಟ್ಟು ನಿರ್ವಹಣೆ ಮಾಡಿ ಪಕ್ಷವನ್ನು ಇಕ್ಕಟ್ಟಿನಿಂದ ಪಾರುಗಾಣಿಸುವುದು ಸುಲಭದ ಕೆಲಸವಲ್ಲ. ಅದೊಂದು ಕಲೆಗಾರಿಕೆ. ಎಲ್ಲರಿಗೂ ಅದು ದಕ್ಕುವಂತಹುದಲ್ಲ. ಅನೇಕ ಸಂದರ್ಭಗಳಲ್ಲಿ ಈ ಕೆಲಸವನ್ನು ಅತ್ಯಂತ ನಾಜೂಕಿನಿಂದ ನಿಭಾಯಿಸಿದವರು ಶಿವಕುಮಾರ್. ಎದುರಾಳಿಗಳು ಕೃತ್ತಿಮ ಮಾರ್ಗಗಳನ್ನು ಅನುಸರಿಸಿದಾಗ ಪ್ರತ್ಯಸ್ತ್ರವನ್ನು ಪ್ರಯೋಗ ಮಾಡುವಲ್ಲಿ ಯಶಸ್ವಿಯಾಗಿದ್ದಾರೆ. ಅವರ ಇಂತಹ ಛಲದಂಕಮಲ್ಲನ ಕೆಲಸವನ್ನು ಮಾಧ್ಯಮದ ಮೂಲಕ ಇಡೀ ರಾಜ್ಯದ ಜನತೆ ಕಂಡಿದ್ದಾರೆ. ಮೇಕೆದಾಟು ಯೋಜನೆಗಾಗಿ ಪಾದಯಾತ್ರೆ ಹೊರಟಾಗ, ರಾಹುಲ್ ಗಾಂಧಿ ಅವರ ಭಾರತ್ ಜೋಡೋ ಯಾತ್ರೆ ರಾಜ್ಯದಲ್ಲಿ ಹೊರಟಾಗ ಮುಂಚೂಣಿಯಲ್ಲಿ ನಿಂತವರು ಡಿ.ಕೆ.ಶಿವಕುಮಾರ್.

ಎಂಟು ಬಾರಿ ಸತತ ಶಾಸಕರಾಗಿ ಆಯ್ಕೆಯಾಗಿರುವ ಶಿವಕುಮಾರ್ ಅವರ ಮುಂದೆ ಇನ್ನೂ ಕಗ್ಗಂಟುಗಳಿಲ್ಲ ಅಂದೇನೂ ಅಲ್ಲ. ಆದರೆ ಎಲ್ಲ ಸಿಕ್ಕುಗಳನ್ನು ಬಿಡಿಸುವ ಜಾಣತನ, ದಿಟ್ಟತನ ಇನ್ನೂ ಅವರೊಳಗಿದೆ. ಒಂದು ಪಕ್ಷಕ್ಕಾಗಲಿ, ಒಂದು ಸರ್ಕಾರಕ್ಕಾಗಲಿ ಶಿವಕುಮಾರ್ ಅವರಂಥವರು ನಿಜವಾದ ಆಸ್ತಿ.

ಕಳೆದ ಸುಮಾರು ಎರಡು ದಶಕಗಳ ಅವಧಿಯಲ್ಲಿ ರಾಜ್ಯದಲ್ಲಿ ಆದ ರಾಜಕೀಯ ಸ್ಥಿತ್ಯಂತರಗಳು ಒಂದೆರಡಲ್ಲ. ಆಪರೇಷನ್‌ಗಳ ಮೇಲೆ ಆಪರೇಷನ್‌ಗಳು ನಡೆದವು. ಅಧಿಕಾರ ಸೂತ್ರವನ್ನು ಕೈಯಲ್ಲಿ ಹಿಡಿದವರು ನಡೆಸಿದ ಷಡ್ಯಂತ್ರಗಳೂ ಅನೇಕ. ಇಂತಹ ಪ್ರವಾಹದ ಹೊತ್ತಿನಲ್ಲಿ ಕೊಚ್ಚಿಕೊಂಡು ಹೋದವರೇ ಹೆಚ್ಚು. ಅಧಿಕಾರವೇ ಮುಖ್ಯವಾಗಿ ಪಕ್ಷವನ್ನು ತೊರೆದವರ ದೊಡ್ಡ ದಂಡೇ ಇದೆ. ಇವೆಲ್ಲ ಬೆಳವಣಿಗೆಗಳ ನಡುವೆ 'ಪೊಲಿಟಿಕಲ್ ಮ್ಯಾನೇಜ್ಮೆಂಟ್'ನಲ್ಲಿ ಮೇಲುಗೈ ಸಾಧಿಸಿದವರು, ಚತುರತೆಯಿಂದ ನಿರ್ವಹಿಸಿದವರು ಡಿ.ಕೆ.ಶಿವಕುಮಾರ್ ಅವರು. ಈ ಮೂರೂವರೆ ದಶಕಕ್ಕೂ ಅಧಿಕ ಅವಧಿಯಲ್ಲಿ ಅವರು ಎದುರಿಸಿದ ಅಗ್ನಿ ಪರೀಕ್ಷೆ ದೊಡ್ಡದು. ಆದರೂ ಅವರು ಪಕ್ಷ ನಿಷ್ಠೆಯನ್ನು ಬದಲಿಸಲಿಲ್ಲ. ಜೊತೆಯಲ್ಲಿದ್ದವರೇ ತೊರೆದು ಹೋದರೂ ವಿಚಲಿತರಾಗಲಿಲ್ಲ. ಹಾಗೆ ಮಾಡಿದ್ದಿದ್ದರೆ ಶಿವಕುಮಾರ್ ಈ ಹೊತ್ತಿಗೆ ಸವಕಲು ನಾಣ್ಯವಾಗುತ್ತಿದ್ದರು. ಇಂತಹ ರಾಜಕೀಯ ಜರ್ನಿಯಲ್ಲಿ ಅವರು ಮಾಗಿದ್ದಾರೆ ಎಂಬುದು ಸ್ಪಷ್ಟ. ಅಲ್ಲಿ ಮೂಡಿದ ಮೈಲುಗಲ್ಲುಗಳು ಅದಕ್ಕೆ ಸಾಕ್ಷಿಯನ್ನು ಒದಗಿಸುತ್ತವೆ.

ಮೊನ್ನೆ ಅವರು ಡಿಸಿಎಂ ಆಗಿ ಆಯ್ಕೆಯಾದ ಬಳಿಕ ಇಂಗ್ಲಿಷ್ ಚಾನೆಲ್‌ನ ಹಿರಿಯ ಪತ್ರಕರ್ತರೊಬ್ಬರ ಕೆಣಕುವ ಪ್ರಶ್ನೆಗಳಿಗೆ ಅವರು ಉತ್ತರಿಸುತ್ತಿದ್ದರು:

"ನಾನು ಮೊದಲಿನಿಂದಲೂ ಹೇಳುತ್ತಲೇ ಬಂದಿದ್ದೇನೆ. ನಾವು ಪ್ರಗತಿಗಾಗಿ ಕೆಲಸ ಮಾಡುತ್ತೇವೆ. ಒಬ್ಬ ಪಕ್ಷದ ಅಧ್ಯಕ್ಷನಾಗಿ ರಾಜ್ಯದ ಜನತೆಗೆ ನಾನು ಹಾಕಿದ ಅಂಕಿತವದು. ಈಗ ಅವರು ನಮಗೆ ಉತ್ತರವನ್ನು ಕೊಟ್ಟಿದ್ದಾರೆ. ಅದು ಜನ ನಮಗೆ ಕೊಟ್ಟಿರುವ ಪರೀಕ್ಷೆ. ವೈಯಕ್ತಿಕ ಅಧಿಕಾರದ ಆಸೆಗಿಂತ ಅದು ನನಗೆ ಬಹಳ ಮುಖ್ಯ."

ಇದು ಒಬ್ಬ ನಾಯಕ ಮಾಗಿದ್ದಾನೆ, ಪಳಗಿದ್ದಾನೆ ಎಂಬುದಕ್ಕೆ ಸಾಕ್ಷಿ. ಇದು ಹೊಸ ಡಿಸಿಎಂ. ಹೊಸ ಡಿ.ಕೆ.ಶಿವಕುಮಾರ್. ■

## ಡಿಕೆಶಿ ಹೆಜ್ಜೆ ಗುರುತುಗಳು

| | | |
|---|---|---|
| 1985 | : | ಸಾತನೂರಿನಿಂದ ದೇವೇಗೌಡರ ವಿರುದ್ಧ ಸ್ಪರ್ಧೆ–ಸೋಲು. |
| 1989 | : | ಜೆಡಿಎಸ್ ವಿರುದ್ಧ ಗೆಲುವು, ಮೊದಲ ಬಾರಿಗೆ ವಿಧಾನಸಭೆ ಪ್ರವೇಶ. |
| 1991 | : | ಬಂಗಾರಪ್ಪ ಸಂಪುಟದಲ್ಲಿ ಬಂದೀಖಾನೆ ಸಚಿವ. |
| 1994 | : | ಕಾಂಗ್ರೆಸ್ ಟಿಕೆಟ್ ನಿರಾಕರಣೆ, ಬಂಡಾಯ ಅಭ್ಯರ್ಥಿಯಾಗಿ ಸ್ಪರ್ಧಿಸಿ ಗೆಲುವು. |
| 1999 | : | ಜೆಡಿಎಸ್‌ನ ಕುಮಾರಸ್ವಾಮಿ ವಿರುದ್ಧ ಜಯ. |
| 1999 | : | ನಗರಾಭಿವೃದ್ಧಿ ಸಚಿವ. |
| 2004 | : | ಸಾತನೂರಿನಿಂದ ನಾಲ್ಕನೇ ಬಾರಿ ಜಯ. |
| 2008 | : | ಕನಕಪುರ ಕ್ಷೇತ್ರ ರಚನೆಯ ನಂತರ ಇಲ್ಲಿ ಮೊದಲ ಜಯ ದಾಖಲಿಸಿದರು. |
| 2008 | : | ಕರ್ನಾಟಕ ಪ್ರದೇಶ ಕಾಂಗ್ರೆಸ್ ಕಾರ್ಯಾಧ್ಯಕ್ಷ. |
| 2013 | : | ಕನಕಪುರದಿಂದ 6ನೇ ಬಾರಿ ವಿಧಾನಸಭೆ ಪ್ರವೇಶ. |
| 2014 | : | ಇಂಧನ ಸಚಿವರಾಗಿ ಪ್ರಮಾಣ ವಚನ. |
| 2018 | : | ಕನಕಪುರದಿಂದ ಪುನರಾಯ್ಕೆ; ನೀರಾವರಿ ಮತ್ತು ವೈದ್ಯಕೀಯ ಸಚಿವ. |
| 2020 | : | ಕೆಪಿಸಿಸಿ ಅಧ್ಯಕ್ಷ. |
| 2023 | : | ಕನಕಪುರದಿಂದ 8ನೇ ಬಾರಿ ಶಾಸಕ, ಬಿಜೆಪಿಯ ಅಶೋಕ್ ವಿರುದ್ಧ ಗೆಲುವು; ಉಪ ಮುಖ್ಯಮಂತ್ರಿ. |



Downloaded From:www.kpscvaani.com

# ಹೊಸ ಸಂಪುಟ ಸಚಿವರ ಕಿರು ಪರಿಚಯ

**ನೂತನವಾಗಿ ಅಸ್ತಿತ್ವಕ್ಕೆ ಬಂದಿರುವ ಸಿದ್ದರಾಮಯ್ಯ ಅವರ ಸರ್ಕಾರದಲ್ಲಿ ಸಚಿವ ಸ್ಥಾನವನ್ನು ಪಡೆದಿರುವ ಎಂಟು ಸಚಿವರ ಸಂಕ್ಷಿಪ್ತ ಪರಿಚಯವನ್ನು ಇಲ್ಲಿ ನೀಡಲಾಗಿದೆ.**

ಶುಭಾ

## ಡಾ. ಜಿ. ಪರಮೇಶ್ವರ್



ಉಪಮುಖ್ಯಮಂತ್ರಿಯಾಗಿ ಸೇವೆ ಸಲ್ಲಿಸಿರುವುದು ಸೇರಿದಂತೆ ಪರಮೇಶ್ವರ್ ಅವರು ಉನ್ನತ ಖಾತೆಗಳನ್ನು ಸಮರ್ಥವಾಗಿ ನಿರ್ವಹಿಸಿದವರು. ತುಮಕೂರು ಜಿಲ್ಲೆ ಕೊರಟಗೆರೆ ಕ್ಷೇತ್ರದಿಂದ ಆರನೇ ಬಾರಿ ವಿಧಾನಸಭೆಯನ್ನು ಪ್ರವೇಶಿಸಿದ್ದಾರೆ. ಎಂಎಸ್‌ಸಿ ಪದವೀಧರರಾದ ಪರಮೇಶ್ವರ್ ಅವರು ಅಡಿಲೇಡ್ ವಿವಿಯಿಂದ ಸಸ್ಯ ವಿಜ್ಞಾನದಲ್ಲಿ ಪಿಎಚ್‌ಡಿ ಗಳಿಸಿದ್ದಾರೆ. ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ಅವರು ತಂದ ಬದಲಾವಣೆ ಮತ್ತು ಮಾಡಿದ ಸುಧಾರಣೆ ದೊಡ್ಡದು. ಸತತ ಎರಡು ಬಾರಿ ಮತ್ತು ಸುದೀರ್ಘಾವಧಿ ಕರ್ನಾಟಕ ಪ್ರದೇಶ ಕಾಂಗ್ರೆಸ್ ಅಧ್ಯಕ್ಷರಾಗಿ ಕಾರ್ಯನಿರ್ವಹಣೆ. ಆ ಸಂದರ್ಭದಲ್ಲಿ ಕಾಂಗ್ರೆಸ್ ಪಕ್ಷವನ್ನು ಅಧಿಕಾರಕ್ಕೆ ತಂದ ಹೆಗ್ಗಳಿಕೆ. ಇವರು ಜಿ.ಎಚ್.ಮರಿಯಪ್ಪ ಅವರ ಪುತ್ರ. ಉತ್ತಮ ಅಥ್ಲೀಟ್ ಆಗಿದ್ದ ಪರಮೇಶ್ವರ್ ಅವರು ಕೇವಲ 10.9 ಸೆಕೆಂಡ್‌ನಲ್ಲಿ 100 ಮೀಟರ್ ರನ್ನಿಂಗ್ ರೇಸ್ ಪೂರ್ಣಗೊಳಿಸಿದ ದಾಖಲೆ ಹೊಂದಿದ್ದಾರೆ.

## ಕೆ. ಎಚ್. ಮುನಿಯಪ್ಪ



ಇವರು ಕಾನೂನು ಪದವೀಧರರು. ಆರಂಭದಲ್ಲಿ ಕೆಲಕಾಲ ವಕೀಲ ವೃತ್ತಿ. ಸತತ ಏಳು ಬಾರಿ ಕೋಲಾರ ಲೋಕಸಭಾ ಕ್ಷೇತ್ರವನ್ನು ಪ್ರತಿನಿಧಿಸಿದ್ದ ಮುನಿಯಪ್ಪನವರು ಮನಮೋಹನ್ ಸಿಂಗ್ ಸರ್ಕಾರದಲ್ಲಿ ಹತ್ತು ವರ್ಷಗಳ ಕಾಲ ಸಚಿವರಾಗಿ ಕಾರ್ಯ ನಿರ್ವಹಿಸಿದವರು. ಈ ಬಾರಿ ಆನೇಕಲ್‌ನಿಂದ ವಿಧಾನಸಭೆ ಪ್ರವೇಶಿಸಿದ್ದಾರೆ. ಬೇರುಮಟ್ಟದಿಂದಲೇ ರಾಜಕೀಯ ಜೀವನ ಆರಂಭ. ಶಿಡ್ಲಘಟ್ಟ ತಾಲೂಕು ಅಭಿವೃದ್ಧಿ ಮಂಡಳಿ ಉಪಾಧ್ಯಕ್ಷ ಪದವಿಯಿಂದ ಆರಂಭವಾದ ಅವರ ಆಡಳಿತ ನಿರ್ವಹಣೆಯ ಅನುಭವ ಸುದೀರ್ಘಾವಧಿ ಕೇಂದ್ರ ಸಚಿವರಾಗುವ ತನಕ ವಿಸ್ತರಿಸಿದೆ. 1991ರಲ್ಲಿ ಮೊದಲ ಬಾರಿಗೆ ಲೋಕಸಭೆಯನ್ನು ಪ್ರವೇಶಿಸಿದರು. ಅಲ್ಲಿಂದ ಮುಂದೆ ಸತತ ಏಳು ಬಾರಿ ಗೆಲುವು. ಕೈಗಾರಿಕಾ ಸಮಿತಿ, ಸಾಮಾಜಿಕ ನ್ಯಾಯ ಹಾಗೂ ಸಬಲೀಕರಣ ಸಮಿತಿ ಸೇರಿದಂತೆ ಅನೇಕ ಸಮಿತಿಗಳಲ್ಲಿ ಸದಸ್ಯರಾಗಿ ಸೇವೆ ಸಲ್ಲಿಸಿದ ಅನುಭವ.

## ಕೆ. ಜೆ. ಜಾರ್ಜ್



ಕೇರಳದ ಟ್ರಾವಂಕೂರ್ ಮೂಲದವರಾದ ಜಾರ್ಜ್ ಅವರು ಕೇಳಚಂದ್ರ ಚಾಕೋ ಜೋಸೆಫ್ ಮತ್ತು ಮರಿಯಮ್ಮ ಅವರ ಪುತ್ರ. ಜಾರ್ಜ್ ಕಾಂಗ್ರೆಸ್ ಪಕ್ಷವನ್ನು ಸೇರಿದ್ದು 1968ರಲ್ಲಿ. ಗೋಣಿಕೊಪ್ಪಲು ಪಟ್ಟಣ ಯುವ ಕಾಂಗ್ರೆಸ್ ಅಧ್ಯಕ್ಷರಾಗಿ ಆಯ್ಕೆಯಾಗುವ ಮೂಲಕ ರಾಜಕೀಯ ಜೀವನದ ಆರಂಭ. ಕೆ.ಎಚ್. ರಂಗನಾಥ್, ಅಲ್ಲಂ ವೀರಭದ್ರಪ್ಪ, ಎಸ್.ಎಂ.ಕೃಷ್ಣ, ಧರ್ಮಸಿಂಗ್, ಆಸ್ಕರ್ ಫೆರ್ನಾಂಡಿಸ್, ಮಲ್ಲಿಕಾರ್ಜುನ ಖರ್ಗೆ ಮೊದಲಾದವರ ಅಧ್ಯಕ್ಷ ಅವಧಿಯಲ್ಲಿ ಜಾರ್ಜ್ ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಹುದ್ದೆ ಹೊಂದಿದ್ದರು. ಅವರು ಭಾರತೀನಗರ ಕ್ಷೇತ್ರದಿಂದ ವಿಧಾನಸಭೆ ಪ್ರವೇಶಿಸಿದ್ದು 1985ರಲ್ಲಿ. ವೀರೇಂದ್ರ ಪಾಟೀಲ್ ಸರ್ಕಾರದಲ್ಲಿ ಅವರಿಗೆ ಸಿಕ್ಕಿದ್ದು ಸಾರಿಗೆ ಖಾತೆ. ಬಂಗಾರಪ್ಪ ಸರ್ಕಾರದಲ್ಲಿ ವಸತಿ ಮತ್ತು ನಗರಾಭಿವೃದ್ಧಿ ಸಚಿವರಾಗಿದ್ದ ಸಂದರ್ಭದಲ್ಲಿ ಹೆಚ್ಚು ಮುಂಚೂಣಿಗೆ ಬಂದರು. ಆನಂತರ ಅಸ್ತಿತ್ವಕ್ಕೆ ಬಂದ ಸಮ್ಮಿಶ್ರ ಸರ್ಕಾರ ಸೇರಿದಂತೆ ಎಲ್ಲ ಸರ್ಕಾರಗಳ ಅವಧಿಯಲ್ಲಿ ವಾಣಿಜ್ಯ, ಕೈಗಾರಿಕೆ, ಗೃಹ ಖಾತೆಗಳನ್ನು ನಿರ್ವಹಿಸಿದ ಅನುಭವ. ಈಗವರು ಬೆಂಗಳೂರಿನ ಸರ್ವಜ್ಞನಗರ ಕ್ಷೇತ್ರವನ್ನು ಪ್ರತಿನಿಧಿಸುತ್ತಿದ್ದಾರೆ.

## ಎಂ. ಬಿ. ಪಾಟೀಲ್



ಹಿರಿಯ ರಾಜಕಾರಣಿ ಹಾಗೂ ಶಿಕ್ಷಣ ತಜ್ಞ ಬಿ.ಎಂ. ಪಾಟೀಲರ ಹಿರಿಯ ಪುತ್ರರಾದ ಪಾಟೀಲರು ತಮ್ಮ ಸಾಮಾಜಿಕ ಕಳಕಳಿಯ ಕೈಂಕರ್ಯಗಳ ಮೂಲಕ ಸದಾ ಮುಂಚೂಣಿಯಲ್ಲಿರುವವರು. ಪ್ರಭಾವಿ ಲಿಂಗಾಯತ ನಾಯಕರಾದ ಪಾಟೀಲ್ ತಿಕೋಟಾ ಕ್ಷೇತ್ರದಿಂದ ವಿಧಾನಸಭೆ ಪ್ರವೇಶ ಪಡೆದವರು. 1991ರಲ್ಲಿ ತಂದೆಯ ಅಕಾಲಿಕ ನಿಧನದಿಂದ ತೆರವಾದ ಕ್ಷೇತ್ರದಿಂದ ಆಯ್ಕೆಯಾದಾಗ ಅವರಿಗಿನ್ನೂ 26 ವರ್ಷ ವಯಸ್ಸು. ಎಂಜಿನಿಯರಿಂಗ್ ಪದವೀಧರರಾದ ಪಾಟೀಲ್ ವಿಜಯಪುರದ ಬಿಎಲ್‌ಡಿಇ ಶಿಕ್ಷಣ ಸಂಸ್ಥೆಯ ಅಧ್ಯಕ್ಷರು. ರಾಜಕಾರಣದಲ್ಲಿ ಶುದ್ಧಹಸ್ತ ಎಂಬ ಹೆಸರು ಪಡೆದವರು. ಈ ಹಿಂದಿನ ಸಿದ್ದರಾಮಯ್ಯ ಸರ್ಕಾರದಲ್ಲಿ ಜಲಸಂಪನ್ಮೂಲ ಸಚಿವರಾಗಿದ್ದರು. ಆಗ ಉತ್ತರ ಕರ್ನಾಟಕದ ಅನೇಕ ನೀರಾವರಿ ಯೋಜನೆಗಳಿಗೆ ಕಾಯಕಲ್ಪ ನೀಡಿದ್ದಾರೆ. ಬಳಿಕ ಕುಮಾರಸ್ವಾಮಿ ನೇತೃತ್ವದ ಸಮ್ಮಿಶ್ರ ಸರ್ಕಾರದಲ್ಲಿ ಗೃಹ ಖಾತೆಯನ್ನು ನಿರ್ವಹಿಸಿದ್ದಾರೆ. ಆರನೇ ಬಾರಿ ಶಾಸಕರಾಗಿ ಆಯ್ಕೆಯಾಗಿರುವ ಇವರು ಈಗ ಪ್ರತಿನಿಧಿಸುತ್ತಿರುವ ಕ್ಷೇತ್ರ ಬಬಲೇಶ್ವರ.



Downloaded From:www.kpscvaani.com

## ಸತೀಶ್ ಜಾರಕಿಹೊಳಿ



ಮಾನವ ಬಂಧುತ್ವ ವೇದಿಕೆ ಮೂಲಕ ಜನಮುಖಿ ಕಾರ್ಯಗಳಲ್ಲಿ, ಮೌಢ್ಯವನ್ನು ತೊಡೆದು ಹಾಕುವ ಕಾರ್ಯದಲ್ಲಿ ಜಾರಕಿಹೊಳಿ ಅವರು ತೊಡಗಿಕೊಂಡಿದ್ದಾರೆ. ಎರಡು ಬಾರಿ ಎಂಎಲ್‌ಸಿ ಸೇರಿದಂತೆ ಆರು ಬಾರಿ ಶಾಸಕರಾಗಿ ಆಯ್ಕೆಯಾಗಿದ್ದಾರೆ. ಯಮಕನಮರಡಿ ವಿಧಾನಸಭಾ ಕ್ಷೇತ್ರವನ್ನು ಪ್ರತಿನಿಧಿಸುತ್ತಿರುವ ಇವರು ಉತ್ತರ ಕರ್ನಾಟಕದಲ್ಲಿ ಪ್ರಭಾವಿ ರಾಜಕಾರಣಿ. ಬೆಳಗಾವಿಯ ಪ್ರಮುಖ ಕಬ್ಬು ಬೆಳೆಗಾರರ ಕುಟುಂಬದಿಂದ ಬಂದಿರುವ ಸತೀಶ್ ಈ ಹಿಂದೆ ಕುಮಾರಸ್ವಾಮಿ ಅವರ ಸಮ್ಮಿಶ್ರ ಸರ್ಕಾರದಲ್ಲಿ ಅರಣ್ಯ ಖಾತೆ ಹಾಗೂ ಸಿದ್ದರಾಮಯ್ಯ ಸರ್ಕಾರದಲ್ಲಿ ಸಣ್ಣ ಕೈಗಾರಿಕೆ ಮತ್ತು ಅಬಕಾರಿ ಖಾತೆಗಳನ್ನು ಸಮರ್ಥವಾಗಿ ನಿಭಾಯಿಸಿದವರು. ಕರ್ನಾಟಕ ಪ್ರದೇಶ ಕಾಂಗ್ರೆಸ್‌ನ ಕಾರ್ಯಾಧ್ಯಕ್ಷರು. 2021ರಲ್ಲಿ ಸಂಸದ ಸುರೇಶ್ ಅಂಗಡಿಯವರ ನಿಧನದಿಂದ ತೆರವಾದ ಬೆಳಗಾವಿ ಲೋಕಸಭಾ ಕ್ಷೇತ್ರದಿಂದ ಸ್ಪರ್ಧಿಸಿ ಅಲ್ಪ ಅಂತರದಿಂದ ಪರಾಭವ ಅನುಭವಿಸಿದರು. ರಾಹುಕಾಲ, ಅಮವಾಸ್ಯೆ, ಗ್ರಹಣ ಇವೆಲ್ಲವೂ ನೈಸರ್ಗಿಕವಾಗಿ ನಡೆಯುವ ವಿದ್ಯಮಾನಗಳು ಎಂದು ಬಲವಾಗಿ ನಂಬಿರುವ ಜನರ ಮೂಢನಂಬಿಕೆ ಕಳೆಯುವ ಪ್ರಯತ್ನವಾಗಿ ರಾಹುಕಾಲದಲ್ಲಿಯೇ ನಾಮಪತ್ರ ಸಲ್ಲಿಸುತ್ತ ಬಂದವರು.

## ರಾಮಲಿಂಗಾ ರೆಡ್ಡಿ



ಬಿಎಸ್‌ಸಿ ಪದವೀಧರರಾದ ರಾಮಲಿಂಗಾ ರೆಡ್ಡಿ ಅವರು ವಿದ್ಯಾರ್ಥಿ ದೆಸೆಯಿಂದಲೇ ನಾಯಕತ್ವದ ಗುಣವನ್ನು ಬೆಳೆಸಿಕೊಂಡವರು. 1983ರಲ್ಲಿ ಬೆಂಗಳೂರು ಮಹಾನಗರ ಪಾಲಿಕೆ ಸದಸ್ಯರಾಗುವ ಮೂಲಕ ರಾಜಕೀಯ ಪ್ರವೇಶ. ಅದಾದ ಬಳಿಕ ಅವರು ವಿಧಾನಸಭೆ ಪ್ರವೇಶ ಪಡೆದಿದ್ದು 1989ರಲ್ಲಿ ಜಯನಗರ ಕ್ಷೇತ್ರದಿಂದ. ತಲಾ ನಾಲ್ಕು ಬಾರಿ ಜಯನಗರ ಹಾಗೂ ಬಿಟಿಎಂ ಲೇಔಟ್ ಕ್ಷೇತ್ರದಿಂದ ಆಯ್ಕೆಯಾಗಿರುವ ರೆಡ್ಡಿ ಅವರು ಸದಾ ಜನರೊಂದಿಗೆ ಸಾಮಾನ್ಯರಂತೆ ಬೆರೆಯುತ್ತ ಸರಳತೆಯನ್ನು ಮೈಗೂಡಿಸಿಕೊಂಡವರು. 1992ರಲ್ಲಿ ವೀರಪ್ಪ ಮೊಯ್ಲಿ ನೇತೃತ್ವದ ಸರ್ಕಾರದಲ್ಲಿ ಮೊದಲ ಬಾರಿಗೆ ಸಚಿವ ಸ್ಥಾನವನ್ನು ಪಡೆದ ರೆಡ್ಡಿಯವರು ಹಣಕಾಸು, ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಖಾತೆಯ ಸಹಾಯಕ ಸಚಿವರಾಗಿದ್ದರು. ನಂತರ ಅಸ್ತಿತ್ವಕ್ಕೆ ಬಂದ ಎಸ್.ಎಂ.ಕೃಷ್ಣ ಸರ್ಕಾರದಲ್ಲಿ ಆಹಾರ ಮತ್ತು ನಾಗರಿಕ ಸರಬರಾಜು, ಬೆಂಗಳೂರು ನಗರಾಭಿವೃದ್ಧಿ ಹಾಗೂ ಧರ್ಮಸಿಂಗ್ ಸರ್ಕಾರದಲ್ಲಿ ಶಿಕ್ಷಣ ಸಚಿವರಾಗಿ ಕಾರ್ಯ ನಿರ್ವಹಿಸಿದರು. ಈ ಅನುಭವ ಮತ್ತು ನಿಷ್ಠೆಯ ಆಧಾರದಲ್ಲಿ ಹಿಂದಿನ ಬಾರಿ ಸಿದ್ದರಾಮಯ್ಯ ಸರ್ಕಾರ ಅಸ್ತಿತ್ವಕ್ಕೆ ಬಂದಾಗ ಅವರಿಗೆ ಗೃಹ ಖಾತೆಯ ಜವಾಬ್ದಾರಿಯನ್ನು ವಹಿಸಲಾಗಿತ್ತು. ಕಳೆದೆರಡು ವರ್ಷಗಳಿಂದ ಕಾಂಗ್ರೆಸ್ ಕಾರ್ಯಾಧ್ಯಕ್ಷರಾಗಿಯೂ ಕಾರ್ಯನಿರ್ವಹಿಸುತ್ತಿದ್ದರು. ಅವರು ನಿರಂತರ ಎಂಟು ಬಾರಿ ಆಯ್ಕೆಯಾಗಿರುವುದು ಜನರೊಂದಿಗೆ ನಿರಂತರವಾಗಿ ಒಡನಾಟ ಇಟ್ಟುಕೊಂಡಿರುವುದಕ್ಕೆ ಸಾಕ್ಷಿಯಾಗಿದೆ.

## ಪ್ರಿಯಾಂಕ ಖರ್ಗೆ



ಅತ್ಯಂತ ಕಿರಿಯ ವಯಸ್ಸಿನಲ್ಲಿಯೇ ರಾಜಕೀಯ ಪ್ರವೇಶ ಮಾಡಿ ಶಾಸಕರಾಗಿಯೂ ಆಯ್ಕೆಯಾದ ಹೆಗ್ಗಳಿಕೆ ಇವರದು. 1978ರಲ್ಲಿ ಜನಿಸಿದ ಪ್ರಿಯಾಂಕ, 1998ರಿಂದಲೇ ಎನ್‌ಎಸ್‌ಯುಐ ಕಾರ್ಯಕರ್ತರಾಗಿ ತಮ್ಮನ್ನು ತೊಡಗಿಸಿಕೊಂಡರು. ಮರು ವರ್ಷವೇ ಅದೇ ಸಂಘಟನೆಯ ಕಾಲೇಜು ಪ್ರಧಾನ ಕಾರ್ಯದರ್ಶಿಯಾದರು. ಇನ್ನೆರಡು ವರ್ಷಗಳಲ್ಲಿಯೇ ಎನ್‌ಎಸ್‌ಯುಐ ನ ರಾಜ್ಯ ಪ್ರಧಾನ ಕಾರ್ಯದರ್ಶಿಯಾಗಿ ಆಯ್ಕೆ ಹೊಂದಿದರು. 2005ರಲ್ಲಿ ಕರ್ನಾಟಕ ಪ್ರದೇಶ ಯುವ ಕಾಂಗ್ರೆಸ್ ಕಾರ್ಯದರ್ಶಿ, 2007ರಿಂದ 2011ರ ತನಕ ಪ್ರಧಾನ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸಿದರು. 2009ರಲ್ಲಿ ಚಿತ್ತಾಪುರ ಕ್ಷೇತ್ರದಲ್ಲಿ ಉಪಚುನಾವಣೆ ನಡೆದಾಗ ಪ್ರಿಯಾಂಕ ಅವರು ಕಣಕ್ಕಿಳಿದರೂ ಪರಾಭವ ಹೊಂದಿದರು. ಬಳಿಕ ಅದೇ ಕ್ಷೇತ್ರದಿಂದ (2013) ಮತ್ತೆ ಕಣಕ್ಕಿಳಿದು ಗೆದ್ದು ತೋರಿಸಿದರು. ಈ ಬಾರಿ ಅವರಿಗೆ ದಕ್ಕಿದ್ದು ಹ್ಯಾಟ್ರಿಕ್ ಗೆಲವು. 2016ರಲ್ಲಿ ಪ್ರಿಯಾಂಕ ಅವರನ್ನು ಸಿದ್ದರಾಮಯ್ಯ ಅವರು ಸಂಪುಟಕ್ಕೆ ಸೇರಿಸಿಕೊಂಡಾಗ ಅತ್ಯಂತ ಕಿರಿಯ ಸಚಿವ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದರು. ಅವರಿಗೆ ಅಂದು ವಹಿಸಲಾದ ಐಟಿ–ಬಿಟಿ ಮತ್ತು ಪ್ರವಾಸೋದ್ಯಮ ಖಾತೆಯನ್ನು ಸಮರ್ಥವಾಗಿ ನಿಭಾಯಿಸಿದರು. ಕುಮಾರಸ್ವಾಮಿ ನೇತೃತ್ವದ ಸಮ್ಮಿಶ್ರ ಸರ್ಕಾರದಲ್ಲಿ ಅವರಿಗೆ ಸಂಪುಟ ದರ್ಜೆ ಸ್ಥಾನಮಾನ ಸಿಕ್ಕಿತ್ತು. ಆಗ ಸಿಕ್ಕಿದ ಸಮಾಜ ಕಲ್ಯಾಣ ಖಾತೆಯಲ್ಲಿ ಅನೇಕ ಜನಪರ ಕೆಲಸಗಳನ್ನು ನಿರ್ವಹಿಸಿದ್ದರು. ಅಂಬೇಡ್ಕರ್ ಮತ್ತು ಬೌದ್ಧ ಚಿಂತನೆಯಲ್ಲಿ ಒಲವು ಹೊಂದಿರುವ ಅವರು ಕಾಂಗ್ರೆಸ್‌ನ ರಾಷ್ಟ್ರೀಯ ಅಧ್ಯಕ್ಷರಾದ ಮಲ್ಲಿಕಾರ್ಜುನ ಖರ್ಗೆ ಅವರ ಪುತ್ರ.

## ಜಮೀರ್ ಅಹಮದ್ ಖಾನ್



ಸಾರಿಗೆ ಉದ್ಯಮದಲ್ಲಿ ತೊಡಗಿಸಿಕೊಂಡಿರುವ ಜಮೀರ್ ಅಹಮದ್ ಖಾನ್ ಅವರು ರಾಜಕೀಯದಲ್ಲಿ ಮುಂಚೂಣಿಗೆ ಬಂದಿದ್ದು ಕುಮಾರಸ್ವಾಮಿ ಅವರ ಸಮ್ಮಿಶ್ರ ಸರ್ಕಾರದ ಅವಧಿಯಲ್ಲಿ. ಚಾಮರಾಜಪೇಟೆ ವಿಧಾನಸಭಾ ಕ್ಷೇತ್ರದಲ್ಲಿ ಜೆಡಿಎಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದ ಜಮೀರ್ ಕಾಂಗ್ರೆಸ್ ಅಭ್ಯರ್ಥಿ ಆರ್.ವಿ.ದೇವರಾಜ್ ಅವರನ್ನು ಸೋಲಿಸುವಲ್ಲಿ ಯಶಸ್ವಿಯಾಗಿದ್ದರು. ಬಳಿಕ ಕಾಂಗ್ರೆಸ್ ಮತ್ತು ಜೆಡಿಎಸ್ ಸಮ್ಮಿಶ್ರ ಸರ್ಕಾರವನ್ನು ಸ್ಥಾಪಿಸುವ ಸಂದರ್ಭದಲ್ಲಿ ಅತ್ಯಂತ ನಿರ್ಣಾಯಕ ಜವಾಬ್ದಾರಿಯನ್ನು ನಿರ್ವಹಿಸಿದ್ದರು. ಸಮ್ಮಿಶ್ರ ಸರ್ಕಾರದಲ್ಲಿ ಅವರಿಗೆ ದಕ್ಕಿದ್ದು ಹಜ್ ಮತ್ತು ವಕ್ಫ್ ಹಾಗೂ ಆಹಾರ ಖಾತೆ. ಈಗ ಐದನೇ ಬಾರಿ ಶಾಸಕರಾಗಿ ಆಯ್ಕೆಯಾಗಿರುವ ಜಮೀರ್ ಅವರು ಎರಡನೇ ಬಾರಿ ಸಚಿವ ಖಾತೆಯನ್ನು ಪಡೆದಿದ್ದಾರೆ.



Downloaded From:www.kpscvaani.com

# ಐದು ಗ್ಯಾರಂಟಿಗಳಿಗೆ ತಾತ್ವಿಕ ಅನುಮೋದನೆ



ಬೆಂಗಳೂರಿನ ಕಂಠೀರವ ಕ್ರೀಡಾಂಗಣದಲ್ಲಿ ನೆರೆದಿದ್ದ ಜನಸಾಗರದ ಮುಂದೆ ಪ್ರಮಾಣ ವಚನ ಸ್ವೀಕರಿಸಿದ ಸಿದ್ದರಾಮಯ್ಯ ಅವರ ನೂತನ ಸಚಿವ ಸಂಪುಟದ ಸದಸ್ಯರು ತಕ್ಷಣ ಕೈಗೊಂಡ ಪ್ರತಿಜ್ಞೆ **'ನಾವು ಕೊಟ್ಟ ಐದು ಗ್ಯಾರಂಟಿಗಳನ್ನು ಈಡೇರಿಸುತ್ತೇವೆ'** ಎನ್ನುವುದು. ಪ್ರತಿಜ್ಞಾವಿಧಿ ಸ್ವೀಕಾರದ ಬಳಿಕ ನೇರ ವಿಧಾನಸೌಧವನ್ನು ಪ್ರವೇಶಿಸಿದ ಮುಖ್ಯಮಂತ್ರಿ ಮತ್ತು ಉಪಮುಖ್ಯಮಂತ್ರಿ ಅವರು ನೂತನ ಸಚಿವರುಗಳೊಂದಿಗೆ ಸಚಿವ ಸಂಪುಟ ಸಭೆಯನ್ನು ನಡೆಸಿದರು. ಚುನಾವಣೆಗೂ ಮುನ್ನ ಪ್ರಕಟಿಸಿದ ಐದು ಗ್ಯಾರಂಟಿಗಳನ್ನು ಅಕ್ಷರಶಃ ಜಾರಿಗೆ ತರುವ ಬಗ್ಗೆ ಸಂಪುಟ ಸಭೆ ನಿರ್ಧಾರಗಳನ್ನು ಕೈಗೊಂಡು ತಾತ್ವಿಕ ಅನುಮೋದನೆಯನ್ನು ನೀಡಿತು. ಆ ಮೂಲಕ ನೂತನ ಸರ್ಕಾರ ಕೊಟ್ಟ ಮಾತನ್ನು ಈಡೇರಿಸುವ ಬದ್ಧತೆಯನ್ನು ಪ್ರದರ್ಶಿಸಿತು.

ಕಾಂಗ್ರೆಸ್ ಪಕ್ಷ ನೀಡಿದ ಈ ಐದು ಗ್ಯಾರೆಂಟಿಗಳು ಈಗ ಸರ್ಕಾರದ ಭರವಸೆಗಳಾಗಿವೆ. ಅವುಗಳಿಗೆ ಯೋಜನೆಯ ರೂಪ ನೀಡಿ ಜಾರಿಗೆ ತರಲಾಗುತ್ತದೆ. ಅವುಗಳ ಸಂಕ್ಷಿಪ್ತ ವಿವರ ಇಲ್ಲಿದೆ:

**ಗೃಹಜ್ಯೋತಿ** : **ಪ್ರತಿ ಮನೆಗೆ ತಿಂಗಳಿಗೆ 200 ಯೂನಿಟ್ ವರೆಗಿನ ವಿದ್ಯುತ್ ಉಚಿತ.**

**ಗೃಹಲಕ್ಷ್ಮಿ** : **ಪ್ರತಿ ಮನೆಯ ಒಡತಿಗೆ ತಿಂಗಳಿಗೆ 2000 ರೂ. ಸಹಾಯ.**

**ಅನ್ನಭಾಗ್ಯ** : **ಆದ್ಯತಾ ಮತ್ತು ಅಂತ್ಯೋದಯ ಕುಟುಂಬಗಳ ಪ್ರತಿ ಸದಸ್ಯರಿಗೆ ತಿಂಗಳಿಗೆ 10 ಕೆಜಿ ಅಕ್ಕಿ.**

**ಯುವ ನಿಧಿ** : **ಪದವೀಧರ ನಿರುದ್ಯೋಗಿಗಳಿಗೆ ತಿಂಗಳಿಗೆ 3000 ರೂ ಮತ್ತು ಡಿಪ್ಲೊಮಾ ಪದವೀಧರರಿಗೆ ತಿಂಗಳಿಗೆ 1500 ರೂ.**

**ಉಚಿತ ಪ್ರಯಾಣ**: **ಬಿಎಂಟಿಸಿ ಸೇರಿ ರಾಜ್ಯ ಸರ್ಕಾರಿ ಸ್ವಾಮ್ಯದ ಸಾರಿಗೆ ನಿಗಮ ಬಸ್‌ನಲ್ಲಿ ಮಹಿಳೆಯರಿಗೆ ಉಚಿತ ಪ್ರಯಾಣ. ಈ ಉದ್ದೇಶಕ್ಕಾಗಿ ಪಾಸ್ ವಿತರಣೆ.**

ಈ ಐದು ಗ್ಯಾರಂಟಿಗಳನ್ನು ಜಾರಿಗೆ ತರುವ ವಿಚಾರದಲ್ಲಿ ಆಯಾ ಇಲಾಖೆಗಳಿಂದ ಆದೇಶಗಳು ಹೊರ ಬೀಳಲಿವೆ ಮತ್ತು ಇವುಗಳಿಗೆ ಷರತ್ತುಗಳು ಅನ್ವಯವಾಗಲಿವೆ. ಮಹಿಳೆಯರ ಉಚಿತ ಪ್ರಯಾಣ ಸೌಲಭ್ಯವನ್ನು ರಾಜ್ಯ ರಸ್ತೆ ಸಾರಿಗೆಯ ಯಾವೆಲ್ಲಾ ಬಸ್‌ಗಳಲ್ಲಿ ನೀಡಲಾಗುವುದು ಎಂಬುದನ್ನು ಕೂಲಂಕುಷ ಚರ್ಚೆಯ ನಂತರ ಸರ್ಕಾರವು ನಿರ್ಧರಿಸಲಿದೆ. ಯುವನಿಧಿ ಯೋಜನೆಯಡಿ ನಿರುದ್ಯೋಗ ಭತ್ಯೆ ಪಡೆಯಲು ಪದವೀಧರರು ಅರ್ಹರಾಗಿರುತ್ತಾರೆ.

"ಚುನಾವಣಾ ಪ್ರಣಾಳಿಕೆ ನಾವು ನೀಡಿದ ಭರವಸೆಗಳನ್ನು ಐದು ವರ್ಷಗಳಲ್ಲಿ ಹಂತ ಹಂತವಾಗಿ ಈಡೇರಿಸುತ್ತೇವೆ. ಈ ಬಗ್ಗೆ ಅನುಮಾನ ಬೇಡ. ನಮಗೆ ಎಷ್ಟೇ ಕಷ್ಟವಾದರೂ ಕೂಡ ಈ ಐದು ಗ್ಯಾರಂಟಿಗಳನ್ನು ಜಾರಿ ಮಾಡಿಯೇ ಸಿದ್ಧ" ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಂಪುಟ ಸಭೆಯ ನಂತರ ಸುದ್ದಿಗೋಷ್ಠಿಯಲ್ಲಿ ತಿಳಿಸಿದ್ದಾರೆ. ಅಲ್ಲದೆ ಮುಚ್ಚಿರುವ ಇಂದಿರಾ ಕ್ಯಾಂಟೀನ್ ಅನ್ನು ಮತ್ತೆ ಪ್ರಾರಂಭಿಸಲಾಗುವುದು ಎಂದು ತಿಳಿಸಿದ್ದಾರೆ.



Downloaded From:www.kpscvaani.com



# ವಿಧಾನಸಭಾ ಚುನಾವಣೆ:
## ಶೇ.74 ರಷ್ಟು ಐತಿಹಾಸಿಕ ಮತದಾನ

**ಜನಾಂದೋಲನ ಸ್ವರೂಪ ಪಡೆದ ವಿಧಾನಸಭಾ ಚುನಾವಣೆಯಲ್ಲಿ ಸಂಭ್ರಮಿಸಿದ ಯುವಜನಾಂಗ ಆಯೋಗದೊಂದಿಗೆ ಕೈಜೋಡಿಸಿದರು.**

ನಂಜುಂಡಪ್ಪ. ವಿ

ರಾಜ್ಯ ವಿಧಾನಸಭೆಗೆ ಮೇ 10 ರಂದು ಯಶಸ್ವಿಯಾಗಿ ಚುನಾವಣೆ ನಡೆಯಿತು. ಈ ಬಾರಿ ಚುನಾವಣೆಯಲ್ಲಿ ಜನಸಮೂಹದ ಪಾಲ್ಗೊಳ್ಳುವಿಕೆ ಅಧಿಕವಾಗಿದ್ದು, ಹಿಂದಿನ ಚುನಾವಣೆಗಳಿಗಿಂತ ವಿಭಿನ್ನ, ವಿಶೇಷವಾಗಿತ್ತು. ಆಯೋಗದೊಂದಿಗೆ ಜನ ಸಾಮಾನ್ಯರು ಸಹ ಪ್ರತಿ ಹಂತದಲ್ಲಿ ಕೈ ಜೋಡಿಸಿದ್ದರು. ಹೀಗಾಗಿಯೇ ಚುನಾವಣೆ ಜನಾಂದೋಲನ ಸ್ವರೂಪ ಪಡೆಯಲು ಸಾಧ್ಯವಾಯಿತು. "ಮತದಾನಕ್ಕಿಂತ ಇನ್ನೊಂದಿಲ್ಲ. ನಾನು ಖಚಿತವಾಗಿ ಮತ ಚಲಾಯಿಸುತ್ತೇನೆ" ಇದು ಈ ಬಾರಿಯ ಘೋಷವಾಕ್ಯವಾಗಿತ್ತು. ಅಮೆರಿಕದ ಅಬ್ರಾಹಂ ಲಿಂಕನ್ "ಮತದಾನ ಬಂದೂಕಿನ ಗುಂಡಿಗಿಂತ ಪ್ರಬಲ ಅಸ್ತ್ರ" ಎಂದು ಹೇಳಿರುವ ಮಾತು ಪ್ರಜ್ಞಾವಂತ ಮತದಾರರ ಕಿವಿಯಲ್ಲಿ ಪ್ರತಿ ಚುನಾವಣೆಯಲ್ಲೂ ಮಾರ್ದನಿಸುತ್ತದೆ. ಈ ಬಾರಿ ಮತದಾರರು ಸಂಭ್ರಮಿಸಿದ್ದಾರೆ. ಇದರ ಹಿಂದೆ ಆಯೋಗ, ವಿವಿಧ ಸಂಘಸಂಸ್ಥೆಗಳು, ಜಿಲ್ಲಾಡಳಿತಗಳ ಪಾತ್ರ ಅನನ್ಯ.

### ಸ್ವೀಪ್ ಚಟುವಟಿಕೆ:

ನಾವು ಹಕ್ಕುಗಳ ಬಗ್ಗೆ ಮಾತನಾಡುತ್ತೇವೆ. ಆದರೆ ಕರ್ತವ್ಯಗಳನ್ನು ಮರೆಯುತ್ತೇವೆ. ಹೀಗಾಗಿಯೇ ಮತದಾನ ನಮ್ಮ ಹಕ್ಕು ಹೌದು, ಕರ್ತವ್ಯವೂ ಆಗಿದೆ. ತಾವು ಒಂದು ಮತ ಹಾಕದಿದ್ದರೆ ಏನಾಗುತ್ತದೆ ಎಂದು ಕೆಲವರು ಬೇಜವಾಬ್ದಾರಿಯಿಂದ ಮಾತನಾಡುತ್ತಾರೆ. ಕೆಲವೊಮ್ಮೆ ಗೆಲುವು, ಸೋಲಿನ ನಿರ್ಧಾರ ಒಂದೇ ಒಂದು ಮತ ಅವಲಂಬಿಸಿರುತ್ತದೆ.





Downloaded From:www.kpscvaani.com

ಅದಕ್ಕಾಗಿಯೇ ಮತದಾನ ಹೆಚ್ಚಾದರೆ ಪ್ರಜಾಪ್ರಭುತ್ವ ಇನ್ನಷ್ಟು ಬಲಿಷ್ಠ ಮತ್ತು ಉಜ್ವಲವಾಗುತ್ತದೆ. ಮತದಾನದ ಪ್ರಮಾಣ ಹೆಚ್ಚಳಕ್ಕಾಗಿ ಮತ್ತು ಮತದಾರರನ್ನು ಜಾಗೃತಗೊಳಿಸಲು ಆಯೋಗ ವ್ಯವಸ್ಥಿತ ಮತದಾರರ ಶಿಕ್ಷಣ ಮತ್ತು ಚುನಾವಣಾ ಭಾಗವಹಿಸುವಿಕೆ, ಅಂದರೆ ಸ್ವೀಪ್ ಚಟುವಟಿಕೆಯನ್ನು ಈ ಚುನಾವಣೆಯಲ್ಲಿ ಇನ್ನಷ್ಟು ತೀವ್ರಗೊಳಿಸಿತ್ತು.

ಹದಿನೆಂಟು ವರ್ಷ ಪೂರ್ಣಗೊಂಡ ಪ್ರತಿಯೊಬ್ಬರನ್ನೂ ಮತದಾರರಪಟ್ಟಿಗೆ ನೋಂದಾಯಿಸಿ ಅವರಿಗೆ ವ್ಯವಸ್ಥಿತ ಶಿಕ್ಷಣ ನೀಡಲಾಯಿತು. ಸರ್ಕಾರಿ, ಅರೆ ಸರ್ಕಾರಿ, ಅನುದಾನಿತ ಕಾಲೇಜುಗಳಲ್ಲಿ 24 ಸಾವಿರ ಮತದಾರರ ಸಾಕ್ಷರತಾ ಸಂಘಗಳು ಜನಜಾಗೃತಿಯಲ್ಲಿ ತೊಡಗಿಕೊಂಡಿದ್ದವು. ಪ್ರತಿ ತಿಂಗಳು ವೇಳಾಪಟ್ಟಿಯಂತೆ ಚರ್ಚಾಸ್ಪರ್ಧೆ, ಪ್ರಬಂಧ ರಚನೆ, ರಸಪ್ರಶ್ನೆ, ಪರಸ್ಪರ ಸಂವಾದ ಚಟುವಟಿಕೆಗಳನ್ನು ಏರ್ಪಡಿಸಲಾಗಿತ್ತು. ಭಾರತ ಚುನಾವಣಾ ಆಯೋಗದ ಸಂಪನ್ಮೂಲ ಕಿಟ್‌ಗಳನ್ನು ಸಹ ಸಾಕ್ಷರತಾ ಸಂಘಗಳಿಗೆ ಒದಗಿಸಲಾಗಿತ್ತು. ಶಿಕ್ಷಣ ಸಂಸ್ಥೆಗಳಲ್ಲಿ ಚುನಾವಣೆ ನಡೆಸುವ, ಪ್ರಣಾಳಿಕೆ ಸಿದ್ಧಪಡಿಸುವ, ನಾಮಪತ್ರಸಲ್ಲಿಕೆ, ಮತದಾರರ ನೋಂದಣಿ, ವಿದ್ಯುನ್ಮಾನ ಮತಯಂತ್ರ, ಆಯೋಗದ ಆಪ್‌ಗಳ ಬಗ್ಗೆಯೂ ತಿಳಿವಳಿಕೆ ನೀಡಲಾಗಿತ್ತು.

ಗಣರಾಜ್ಯೋತ್ಸವದ ಮುನ್ನಾ ದಿನ ಅಂದರೆ ಜನವರಿ 25 ರಂದು ರಾಷ್ಟ್ರೀಯ ಮತದಾರರ ದಿನ. ಈ ಸಂದರ್ಭದಲ್ಲೂ ಅರಿವು ಮೂಡಿಸಲಾಯಿತು. ಚುನಾವಣಾ ಆಯೋಗ ಸ್ಥಾಪನೆಯಾಗಿದ್ದು 1950 ರಲ್ಲಿ. ಹೀಗಾಗಿ ಚುನಾವಣೆಗೆ ಸಂಬಂಧಿಸಿದ ಮಾಹಿತಿಗಾಗಿ ಸಹಾಯವಾಣಿ ಸಂಖ್ಯೆಯನ್ನು 1950 ಎಂದು ನಿಗದಿ ಮಾಡಲಾಗಿದೆ. ರಾಜ್ಯದ ಪ್ರತಿಯೊಂದು ಮತಗಟ್ಟೆಗಳಿಗೆ ತಲಾ ಒಂದೊಂದು ಚುನಾವಣಾ ಜಾಗೃತಿ ಸಂಘಗಳನ್ನು ಸಹ ಸ್ಥಾಪಿಸಿ, ಬೂತ್ ಮಟ್ಟದ ಅಧಿಕಾರಿಗಳನ್ನು ಕಾರ್ಯದರ್ಶಿಯಾಗಿ ನೇಮಿಸಲಾಗಿತ್ತು.

ದೋಷ ಮುಕ್ತ, ಮತದಾರರ ಪಟ್ಟಿಯನ್ನು ಖಚಿತಪಡಿಸಿಕೊಳ್ಳಲು ಆಯೋಗ 2006 ರಲ್ಲಿ ಬಿಎಲ್‌ಒ ಸಂಸ್ಥೆ ಸ್ಥಾಪಿಸಿತು. ಇದು ಆಯೋಗದಲ್ಲಿ ಹೊಸ ತಂತ್ರಜ್ಞಾನ ವಿಧಾನಗಳನ್ನು ಮೇಲ್ದರ್ಜೆಗೇರಿಸಿಕೊಳ್ಳುವ ಮತ್ತು ಅಳವಡಿಸಿಕೊಳ್ಳುವ ಕಾರ್ಯದಲ್ಲಿ ನಿರತವಾಗಿದೆ. ದ್ವೈಮಾಸಿಕ ಇ – ಪತ್ರಿಕೆ,



ಇವಿಎಂ–ವಿವಿಪ್ಯಾಟ್ ತರಬೇತಿ, ಐಟಿ ಅಪ್ಲಿಕೇಶನ್ಸ್, ವಿಶೇಷ ಸಾರಾಂಶ ಪರಿಷ್ಕರಣೆ, ಅಂಚೆ ಮತ ಸೌಲಭ್ಯ, ಚುನಾವಣೆಯ ಯಶೋಗಾಥೆಗಳು ಹಾಗೂ ದೇಶಾದಾದ್ಯಂತ ಅಳವಡಿಸಿಕೊಂಡಿರುವ ಉತ್ತಮ ಅಭ್ಯಾಸಗಳನ್ನು ಈ ಬಾರಿಯ ಕರ್ನಾಟಕ ಚುನಾವಣೆಯಲ್ಲಿ ಅಳವಡಿಸಿಕೊಳ್ಳಲಾಯಿತು.

**ವಿಶೇಷ ಮತದಾನಕ್ಕೆ ವ್ಯವಸ್ಥೆ:**

80 ವರ್ಷದಾಟಿದ ಹಿರಿಯನಾಗರಿಕರು, ವಿಶೇಷಚೇತನರಿಗೆ ಫಾರಂ 12 ಡಿ ಅಡಿ ಮನೆಯಲ್ಲಿಯೇ ಮತ ಚಲಾಯಿಸಲು ಅವಕಾಶ ನೀಡಲಾಗಿತ್ತು. ಇದೇ ಮೊದಲ ಬಾರಿಗೆ ಅನುಸರಿಸಿದ ವಿಶೇಷ ಪ್ರಯತ್ನ ಯಶಸ್ವಿಯಾಗಿದೆ. ವಿಶೇಷವೆಂದರೆ ಬಹುತೇಕ ಹಿರಿಯ ನಾಗರಿಕರು ತಾವು ಮನೆಯಲ್ಲಿ ಮತದಾನ ಮಾಡುವುದಿಲ್ಲ, ಮತಗಟ್ಟೆಗೆ ಬಂದರೆ ಮಾತ್ರ ತಮಗೆ ತೃಪ್ತಿ ಎಂದು ಹೇಳಿರುವುದು, ಮತದಾನದ ಬಗ್ಗೆ ನಿರಾಸಕ್ತಿ ಹೊಂದಿರುವವರಿಗೆ ಇದು ಅತ್ಯಂತ ಪ್ರಬಲ ಸಂದೇಶ ಎಂದರೆ ತಪ್ಪಾಗದು. ಮೊಟ್ಟಮೊದಲ ಬಾರಿಗೆ



ಚುನಾವಣಾ ಕರ್ತವ್ಯದಲ್ಲಿ ನಿರತರಾದ ಪತ್ರಕರ್ತರಿಗೂ ಸಹ ಪ್ರತ್ಯೇಕವಾಗಿ ಅಂಚೆಮತದಾನ ಮಾಡಲು ವ್ಯವಸ್ಥೆ ಕಲ್ಪಿಸಲಾಗಿತ್ತು. ಮಾಧ್ಯಮ ಕೂಡ ಚುನಾವಣೆಯ ಭಾಗ. ಆದರೆ ಈ ಬಾರಿಯ ಚುನಾವಣೆ ಮಾಧ್ಯಮ ಸ್ನೇಹಿಯೂ ಆಗಿತ್ತು.

**ಯುವ ಮತದಾರರು:**

ಈ ಬಾರಿ ಹಿಂದೆಂದೂ ಇಲ್ಲದಷ್ಟು ಪ್ರಮಾಣದಲ್ಲಿ ಯುವ ಮತದಾರರು ನೋಂದಣಿಯಾಗಿದ್ದರು. 18 ರಿಂದ 19 ವಯೋಮಿತಿಯ 11.71 ಲಕ್ಷಕ್ಕೂ ಅಧಿಕ ಮಂದಿ ಮತದಾರರ ಪಟ್ಟಿಗೆ ಸೇರ್ಪಡೆಯಾಗಿದ್ದು, ಇವರೆಲ್ಲರಿಗೆ ಖ್ಯಾತ ಕ್ರಿಕೆಟಿಗ ರಾಹುಲ್‌ದ್ರಾವಿಡ್ ಭಾವಚಿತ್ರವಿರುವ, ಉತ್ತಮ ವಿನ್ಯಾಸದ ಪ್ರತ್ಯೇಕ ಲಕೋಟೆಯಲ್ಲಿ ಗುರುತಿನ ಚೀಟಿ ತಲುಪಿಸಲಾಗಿತ್ತು. ಜೊತೆಗೆ ವಿವಿಧ ಜಿಲ್ಲಾಧಿಕಾರಿಗಳು ಸಹ ಪ್ರತ್ಯೇಕವಾಗಿ ಅಭಿನಂದನಾಪತ್ರ ಬರೆದಿದ್ದರು. ಇವರೆಲ್ಲರಿಗೂ ಮತದಾನದ ಬಗ್ಗೆ ಮಾರ್ಗಸೂಚಿ ಸಹ ನೀಡಲಾಗಿತ್ತು. ಮತಗಟ್ಟೆಯ ಸೆಲ್ಫಿಸ್ಟ್ಯಾಂಡ್‌ನಲ್ಲಿ ಯುವ ಮತದಾರರು ಮತದಾನದ ನಂತರ ಫೋಟೋ ಕ್ಲಿಕ್ಕಿಸಿಕೊಂಡು ಸಾಮಾಜಿಕ ಜಾಲತಾಣಗಳಲ್ಲಿ ರಾರಾಜಿಸಿದರು.

**ಲಿಂಗತ್ವ ಅಲ್ಪಸಂಖ್ಯಾತರು:**

ಲಿಂಗತ್ವ ಅಲ್ಪಸಂಖ್ಯಾತರು ಮೊದಲ

**ಒಟ್ಟಾರೆ ಶೇಕಡ 74 ರಷ್ಟು ದಾಖಲೆ ಮತದಾನ**

2018 ರ ಚುನಾವಣೆಯಲ್ಲಿ ಶೇ. 72.36 ರಷ್ಟು ಮತದಾನವಾಗಿತ್ತು. ಆದರೆ ಈ ಬಾರಿ ಶೇ. 74 ರಷ್ಟು ದಾಖಲೆ ಪ್ರಮಾಣದ ಮತ ಚಲಾವಣೆಯಾಗಿದೆ. ನಗರ ಪ್ರದೇಶಗಳಿಗಿಂತ ಗ್ರಾಮೀಣ ಭಾಗಗಳಲ್ಲೇ ಹೆಚ್ಚು ಉತ್ಸಾಹದ ಮತದಾನವಾಗಿದೆ.


Downloaded From:www.kpscvaani.com



ಬಾರಿಗೆ ಹೆಚ್ಚಿನ ಸಂಖ್ಯೆಯಲ್ಲಿ ತಾವು ತೃತೀಯಲಿಂಗಿಗಳು ಎಂದು ಘೋಷಿಸಿಕೊಂಡು ಮತದಾರರ ಪಟ್ಟಿಯಲ್ಲಿ ಸ್ವಯಂ ಪ್ರೇರಣೆಯಿಂದ ನೋಂದಣಿ ಮಾಡಿ ಕೊಂಡರು. ಕರ್ನಾಟಕ ಮಹಿಳಾ ಅಭಿವೃದ್ಧಿ ನಿಗಮ ಮತ್ತು ವಿವಿಧ ಜಿಲ್ಲಾಧಿಕಾರಿಗಳ ಮೂಲಕ ವಿಶೇಷ ಮತದಾರರ ನೋಂದಣಿಗೆ ಅಭಿಯಾನ ಕೈಗೊಳ್ಳಲಾಗಿತ್ತು. %100 ರಷ್ಟು ತೃತೀಯಲಿಂಗಿ ಮತದಾರರು ಪಟ್ಟಿಗೆ ಸೇರ್ಪಡೆಯಾಗಿರುವುದು ಮತ್ತೊಂದು ವಿಶೇಷ. ನಿರ್ಲಕ್ಷಿತ ಸಮುದಾಯ ಚುನಾವಣಾ ಮಹಾಯಜ್ಞದ ಭಾಗವಾಗಿರುವುದು ಗಮನಾರ್ಹ.

ಜಿಲ್ಲೆಗಳಲ್ಲಿ ಲಿಂಗತ್ವ ಅಲ್ಪಸಂಖ್ಯಾತರು ಜನಜಾಗೃತಿ ಮೂಡಿಸಿ ಮಾದರಿಯಾಗಿದ್ದಾರೆ. ತೃತೀಯ ಲಿಂಗಿ ಕಲಾವಿದರ ಅರವಾಣಿ ಆರ್ಟ್ ಪ್ರಾಜೆಕ್ಟ್ ತಂಡ ಬೆಂಗಳೂರಿನ ಮುಖ್ಯ ಚುನಾವಣಾಧಿಕಾರಿ ಕಚೇರಿಯ ಆವರಣದಲ್ಲಿ ನೂತನವಾಗಿ ನಿರ್ಮಿಸಿರುವ 3 ಮಹಡಿಯ ಗೋಡೆಗಳ ಮೇಲೆ ಕಣ್ಣನ ಸೆಳೆಯುವ ಬಣ್ಣದ ಚಿತ್ತಾರ ಮೂಡಿಸಿತು. ಮತದಾನದ ಮಹತ್ವ ಸಾರುವ ವೈಶಿಷ್ಟ್ಯಪೂರ್ಣ ವರ್ಣಚಿತ್ರಗಳನ್ನು ಚಿತ್ತಾಕರ್ಷಕವಾಗಿ ಬಿಡಿಸಿ ಸೈ ಎನಿಸಿಕೊಂಡಿತು. ತೃತೀಯ ಲಿಂಗಿ ಕಲಾವಿದರಿಗೆ ಅವಕಾಶ ನೀಡುವ ಮೂಲಕ ಸಮಾಜದಲ್ಲಿ ಸಕಾರಾತ್ಮಕ ಬದಲಾವಣೆಯತ್ತ ಇರಿಸಲಾದ ಮುಖ್ಯ ಚುನಾವಣಾಧಿಕಾರಿಗಳ ಈ ಹೆಜ್ಜೆಗೆ ಜನಮನ್ನಣೆಯೂ ದೊರೆಯಿತು.

**ಚುನಾವಣಾ ಅಧಿಸೂಚನೆ**

ಎಪ್ರಿಲ್ 13 ರಂದು ಚುನಾವಣೆಗೆ ಅಧಿಸೂಚನೆ ಹೊರಡಿಸಲಾಗಿದ್ದು, ಎಪ್ರಿಲ್ 20 ನಾಮಪತ್ರ ಸಲ್ಲಿಸಲು ಕೊನೆಯ ದಿನವಾಗಿತ್ತು. 21 ರಂದು ಪರಿಶೀಲನೆ, 24 ನಾಮಪತ್ರ ಹಿಂಪಡೆಯಲು ಕೊನೆಯ ದಿನವಾಗಿತ್ತು. ಈ ಬಾರಿ ಒಂದೇ ಹಂತದಲ್ಲಿ 224 ಕ್ಷೇತ್ರಗಳಿಗೆ ಮೇ 10 ರಂದು ಮತದಾನ ನಡೆದು, 13 ರಂದು ಫಲಿತಾಂಶ ಪ್ರಕಟಿಸಲಾಗಿದೆ.

**ದಾಖಲೆ ಪ್ರಮಾಣದಲ್ಲಿ ನಗ, ನಗದು, ಉಡುಗೊರೆ ವಶ:**

ಮತದಾರರಿಗೆ ಹಂಚಲು ಅಥವಾ ಸೂಕ್ತ ದಾಖಲೆಗಳಿಲ್ಲದೇ ಸಾಗಿಸುತ್ತಿದ್ದ ಹಣ, ವಡವೆ, ಉಡುಗೊರೆಗಳನ್ನು ಆಯೋಗದ ಕಣ್ಗಾವಲು ತಂಡಗಳು ವಶಪಡಿಸಿಕೊಂಡವು. ಮಾಹಿತಿ ಜಾಡು ಹಿಡಿದ ಮತದಾರರು ಸಿವಿಜಿಲ್ ಆಪ್, ಸಹಾಯವಾಣಿ ಮೂಲಕ ಆಯೋಗಕ್ಕೆ ಕಾಲ ಕಾಲಕ್ಕೆ ನೀಡಿದ ಮಾಹಿತಿ ಪರಿಣಾಮ ಹಿಂದೆಂದೂ ಇಲ್ಲದಷ್ಟು ಪ್ರಮಾಣದಲ್ಲಿ ಮದ್ಯ, ನಗ, ನಗದು ವಶಪಡಿಸಿಕೊಳ್ಳಲು ಸಾಧ್ಯವಾಯಿತು. ಇದು ಹಿಂದಿನ ಚುನಾವಣೆಗೆ ಹೋಲಿಸಿದರೆ ನಾಲ್ಕುವರೆ ಪಟ್ಟು ಅಧಿಕ. ಇದರ ಒಟ್ಟಾರೆ ಮೌಲ್ಯ 147.46 ಕೋಟಿ ನಗದು ಸೇರಿ375 ಕೋಟಿ ರೂಪಾಯಿಗೂ ಹೆಚ್ಚು ಸಂಶಯಾಸ್ಪದ ಆನ್ ಲೈನ್ ವಹಿವಾಟಿನ ಮೇಲೂ ಕಣ್ಣಿಟ್ಟು ಆಯೋಗದ ಅಧಿಕಾರಿಗಳು ಕೆಲಸ ಮಾಡಿದರು.

**ಮತದಾನದ ವಿಶೇಷತೆ:**

ಮತದಾನದ ದಿನದಂದು ಮತದಾರರು ಸಡಗರದಿಂದ ಮತದಾನ ಮಾಡಿದರು. ಬೆಳಗಿನಿಂದಲೇ ತಮ್ಮ ಹಕ್ಕು ಚಲಾಯಿಸಿ ಸಂಭ್ರಮಿಸಿದರು. ವ್ಯಾಪಕ ಬಿಗಿಭದ್ರತೆ ನಡುವೆ ಮತದಾರರನ್ನು ಸೆಳೆಯಲು ಸಖಿಮತಗಟ್ಟೆ, ಚಿತ್ರದುರ್ಗದಲ್ಲಿ ಒನಕೆ ಓಬವ್ವ, ಮೈಸೂರಿನಲ್ಲಿ ಅರಮನೆ, ಮೈಸೂರು ಮಲ್ಲಿಗೆಯ ತೋರಣ, ಬಾಗಲಕೋಟೆಯಲ್ಲಿ ಇಳಕಲ್‌ಸೀರೆ, ಕರಾವಳಿಯಲ್ಲಿ ಯಕ್ಷಗಾನ, ಕಂಬಳ, ಬೀದರ್‌ನಲ್ಲಿ ಬಿದರಿಕಲೆ, ವಿವಿಧೆಡೆ ಬುಡಕಟ್ಟು ಜನಾಂಗವನ್ನು ಪ್ರತಿನಿಧಿಸುವ ಮತಗಟ್ಟೆಗಳನ್ನು ಸ್ಥಾಪಿಸಲಾಗಿತ್ತು. ಮತದಾನ ಕುರಿತು ಜಾಗೃತಿ ಮೂಡಿಸುವ ಚಿತ್ರಕಲೆಯನ್ನು ಬಹುತೇಕ ಕಡೆಗಳಲ್ಲಿ ಸರ್ಕಾರಿ ಶಾಲೆಯ ಚಿತ್ರಕಲಾ ಶಿಕ್ಷಕರು ರಚಿಸಿದ್ದರು.

ಹೊಸದಾಗಿ ಮದುವೆಯಾದ ಜೋಡಿಗಳು, ಮಗುವಿಗೆ ಜನ್ಮ ನೀಡಿದ ಹಸಿ ಬಾಣಂತಿಯರು, ಲಿಂಗತ್ವ ಅಲ್ಪ ಸಂಖ್ಯಾತರು, ದಿವ್ಯಾಂಗರು, ಶತಾಯುಷಿಗಳು, ಗಣ್ಯಾತಿಗಣ್ಯರು, ಮೊದಲ ಬಾರಿಗೆ ಮತದಾನ ಮಾಡುತ್ತಿರುವ ಯುವ ಸಮೂಹ. ಹೀಗೆ ಪ್ರತಿಯೊಬ್ಬರು ಸಂಭ್ರಮದಿಂದ ಭಾಗಿಯಾದರು. ಇನ್ನು ವೋಟ್ ಮಾಡಲು ವಿದೇಶದಿಂದಲೇ ಹಲವು ಮಂದಿ ಬಂದಿದ್ದು ವಿಶೇಷವಾಗಿತ್ತು.

**ಬೆಂಗಳೂರಿನಲ್ಲಿ ಕಡಿಮೆ:**

2018 ರ ಚುನಾವಣೆಯಲಿ ಒಟ್ಟು 34 ಚುನಾವಣಾ ಜಿಲ್ಲೆಗಳ ಪೈಕಿ 10 ಜಿಲ್ಲೆಗಳಲ್ಲಿ ಸರಾಸರಿ %72 ಕ್ಕೂ ಕಡಿಮೆ ಮತದಾನವಾಗಿತ್ತು. ಬೆಂಗಳೂರು, ಬೀದರ್, ರಾಯಚೂರು, ಕಲಬುರಗಿ, ಯಾದಗಿರಿ, ವಿಜಯಪುರ ಜಿಲ್ಲೆಗಳಲ್ಲೂ ಮತದಾನ ಪ್ರಮಾಣ ತಗ್ಗಿತ್ತು. ಇಂತಹ ಕಡೆಗಳಲ್ಲಿ ಬೀದಿನಾಟಕಗಳು, ಕಲಾತಂಡಗಳ ಮೂಲಕ ಜಾಗೃತಿ, ಬೈಕ್ ರ‍್ಯಾಲಿ ಹೀಗೆ ಹಲವಾರು ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಯಿತು. ಕಡಿಮೆ ಮತದಾನವಾಗಿರುವ ಮತಗಟ್ಟೆಗಳಿಗೆ ಮತಗಟ್ಟೆ ಅಧಿಕಾರಿಗಳು ತೆರಳಿ ಕಾರಣಗಳನ್ನು ತಿಳಿದು ಪರಿಹಾರ ಒದಗಿಸುವ ಪ್ರಯತ್ನದಲ್ಲಿ ತೊಡಗಿಕೊಂಡರು.

ಬೆಂಗಳೂರಿನಲ್ಲಿ ಮತದಾನ ಪ್ರಮಾಣ ಕಡಿಮೆಯಾಗಲು ವಲಸೆ ಪ್ರಮುಖ ಕಾರಣ.ಸಾಕಷ್ಟು ಮಂದಿ ತಮ್ಮ ಸ್ವಂತ ಊರುಗಳಲ್ಲಿ ಮತದಾನ ಮಾಡುತ್ತಿದ್ದು, ಬೆಂಗಳೂರು ನಗರದಲ್ಲೂ ಮತದಾರರಪಟ್ಟಿಯಲ್ಲಿ ತಮ್ಮ ಹೆಸರು ನೋಂದಣಿ ಮಾಡಿಕೊಂಡಿದ್ದಾರೆ. ಜೊತೆಗೆ ಒಂದು ಕಡೆಯಿಂದ ಮತ್ತೊಂದು ಬಡಾವಣೆಗೆ ಸ್ಥಳಾಂತರಗೊಳ್ಳುತ್ತಾರೆ. ಹೀಗೆ ಹತ್ತು ಹಲವು ಕಾರಣಗಳಿಂದಾಗಿ ಇತ್ತೀಚಿನ ವರ್ಷಗಳಲ್ಲಿ ಬೆಂಗಳೂರಿನಲ್ಲಿ ಮತದಾನ ಪ್ರಮಾಣ ಕಡಿಮೆಯಾಗುತ್ತಿದೆ.



Downloaded From:www.kpscvaani.com



# ಉತ್ತಮ ಮಾನಸಿಕ ಆರೋಗ್ಯಕ್ಕೆ ಜೀವನ ಕೌಶಲ್ಯಗಳು

ವಿಶ್ವ ಆರೋಗ್ಯ ಸಂಸ್ಥೆಯ ಪ್ರಕಾರ "ದೈನಂದಿನ ಜೀವನದಲ್ಲಿ ಎದುರಾಗುವ ಬೇಡಿಕೆಗಳು ಹಾಗೂ ಸವಾಲುಗಳನ್ನು ಸಕಾರಾತ್ಮಕ ವರ್ತನೆ ಹಾಗೂ ಹೊಂದಾಣಿಕೆಯೊಂದಿಗೆ ಉತ್ತಮವಾಗಿ ನಿರ್ವಹಿಸುವ ಕೌಶಲ್ಯವನ್ನು ಜೀವನ ಕೌಶಲ್ಯಗಳು ಎಂದು ಹೇಳಲಾಗುತ್ತದೆ."

ವಿಶ್ವ ಸಂಸ್ಥೆಯವರು ಪ್ರಮುಖವಾಗಿ ಹತ್ತು ಜೀವನ ಕೌಶಲ್ಯಗಳನ್ನು ತಿಳಿಸಿದ್ದಾರೆ. ಅವುಗಳು ಈ ಕೆಳಗಿನಂತಿವೆ:

**ಸಮಸ್ಯೆಗಳ ಪರಿಹಾರ:** ಸಮಸ್ಯೆ ಜೀವನದಲ್ಲಿ ಸರ್ವೇ ಸಾಮಾನ್ಯ. ಸಮಸ್ಯೆಗಳಿಲ್ಲದವರು ಈ ಜಗತ್ತಿನಲ್ಲಿ ಯಾರು ಇಲ್ಲ. ಸಮಸ್ಯೆ ಚಿಕ್ಕದಾಗಲಿ ದೊಡ್ಡದಾಗಲಿ ಒಂದಲ್ಲ ಒಂದು ಸಮಸ್ಯೆ ಎಲ್ಲರ ಜೀವನದಲ್ಲಿ ಇದ್ದೆ ಇರುತ್ತದೆ, ಸಮಸ್ಯೆ ಬಂತೆದ್ದು ಧೃತಿಗೆಟ್ಟು ಕಂಗಾಲಾಗಬಾರದು. ಆ ಸಮಸ್ಯೆಯ ಕುರಿತು ವಿಶ್ಲೇಷಿಸಬೇಕು. ಸಮಸ್ಯೆಗೆ ಕಾರಣಗಳೇನು ಎಂಬುದನ್ನು ಯೋಚಿಸಿದರೆ ಅದರ ಮೂಲವನ್ನು ತಿಳಿಯಲು ಸಹಾಯವಾಗುತ್ತದೆ. ಕಾರಣ ತಿಳಿದ ನಂತರ ಸಮಸ್ಯೆಯ ಪರಿಹಾರಕ್ಕೆ ಮುಂದಾಗಬೇಕು, ಒಂದು ಮಾರ್ಗದಿಂದಾಗದಿದ್ದರೆ ಮತ್ತೊಂದು ಮಾರ್ಗವನ್ನು ಹುಡುಕಬೇಕು. ಪ್ರತಿ ಸಮಸ್ಯೆಗೂ ಪರಿಹಾರ ಇದ್ದೇ ಇರುತ್ತದೆ. ನೀವು ಆತ್ಮ ವಿಶ್ವಾಸದಿಂದಿದ್ದರೆ ಯಾವ ಸಮಸ್ಯೆಯ ಪರಿಹಾರವು ಕ್ಲಿಷ್ಟಕರವಲ್ಲ. ಸಮಸ್ಯೆಗಳು ಮೋಡದಂತೆ ಸಾಗುತ್ತಿರುತ್ತವೆ, ಸಮಸ್ಯೆಗಳು ಶಾಶ್ವತವಲ್ಲ.

**ನಿರ್ಧಾರ ಮಾಡುವುದು:** ನಿರ್ಧಾರಗಳಿಗೆ ನಮ್ಮ ಜೀವನದ ದಿಕ್ಕನ್ನು ಬದಲಿಸುವ ಸಾಮರ್ಥ್ಯವಿದೆ. ಆದ್ದರಿಂದ ಜೀವನದಲ್ಲಿ ಆದಷ್ಟು ಸಕಾರಾತ್ಮಕ ನಿರ್ಧಾರಗಳನ್ನು ತೆಗೆದುಕೊಳ್ಳಬೇಕು. ನಮ್ಮ ನಿರ್ಧಾರಗಳಿಂದ ನಮಗೂ ಒಳ್ಳೆಯದಾಗಬೇಕು ಇತರರಿಗೂ ಒಳ್ಳೆಯದಾಗಬೇಕು. ಯಾವುದೇ ವಿಚಾರದ ಬಗ್ಗೆ ವಿಶ್ಲೇಷಣೆ ಮಾಡಿ ತೆಗೆದುಕೊಳ್ಳುವ ನಿರ್ಧಾರಗಳು ಉತ್ತಮವಾಗಿರುತ್ತದೆ. ಕೆಲವೊಮ್ಮ ನಾವು ನಿರ್ಧಾರಗಳನ್ನು ತೆಗೆದುಕೊಳ್ಳಲು ಇತರರ ಮೇಲೆ ಅವಲಂಬಿಸ ಬೇಕಾಗುತ್ತದೆ. ಇತರರ ಸಲಹೆ ಪಡೆದರು ಸಹ ನಮ್ಮ  ಸ್ವ-ಚಿಂತನೆ ಅತ್ಯಗತ್ಯ. ಕೆಟ್ಟ ಅಭ್ಯಾಸ ಅಥವಾ ಚಟಗಳನ್ನು ಬಿಡಲು ಸಕಾರಾತ್ಮಕ ನಿರ್ಧಾರಗಳನ್ನು ತೆಗೆದುಕೊಳ್ಳಬೇಕು. ನಕಾರಾತ್ಮಕ ನಿರ್ಧಾರಗಳು ಸುಲಭವಾಗಿದ್ದರು ಸಹ ಅಪಾಯಕಾರಿಯಾಗಿರುತ್ತದೆ, ಹಾಗೆಯೇ ಸಕಾರಾತ್ಮಕ ನಿರ್ಧಾರಗಳು ಕಷ್ಟವಾದರೂ ಅದು ಉಪಯುಕ್ತವಾಗಿರುತ್ತದೆ.

**ಜೀವನದಲ್ಲಿ ಬರುವ ಎಲ್ಲಾ ಸಮಸ್ಯೆಗಳಿಗೂ ಒಂದಲ್ಲ ಒಂದು ಜೀವನ ಕೌಶಲ್ಯಗಳು ಇದ್ದೇ ಇರುತ್ತದೆ.**

ಡಾ॥ ಮೋಹನ್ ಕುಮಾರ್. ಆರ್



Downloaded From:www.kpscvaani.com

**ವಿಮರ್ಶಾತ್ಮಕ ಚಿಂತನೆ:** ಪ್ರತಿ ವಿಷಯದ ಬಗ್ಗೆ ವಿಮರ್ಶಿಸಿ ನಂತರ ತೆಗೆದುಕೊಳ್ಳುವ ನಿರ್ಧಾರ ಪರಿಣಾಮಕಾರಿಯಾಗಿರುತ್ತದೆ. ಯಾರು ಏನೆ ಹೇಳಿದರೂ ಅದನ್ನು ಕಣ್ಣುಮುಚ್ಚಿ ಒಪ್ಪಿಕೊಳ್ಳುವ ಬದಲು ಅದರ ಬಗ್ಗೆ ವಿಮರ್ಶಿಸಬೇಕು. ತರ್ಕಬದ್ಧವಾದ ಹಾಗೂ ವೈಜ್ಞಾನಿಕ ಚಿಂತನೆಗಳು, ಮೂಢನಂಬಿಕೆ ಹಾಗೂ ತಪ್ಪುಕಲ್ಪನೆಗಳಿಗೆ ಒಳಗಾಗುವುದನ್ನು ತಡೆಯುತ್ತದೆ. ಯೋಚಿಸಿ, ವಿಮರ್ಶಿಸಿ ನಂತರ ನಿರ್ಧಾರ ಕೈಗೊಳ್ಳಿ.

**ಸೃಜನಾತ್ಮಕ ಯೋಚನೆ:** ಪ್ರತಿ ವಿಷಯದಲ್ಲೂ ಸೃಜನಾತ್ಮಕ ಚಿಂತನೆ ಇದ್ದರೆ ನಿಮ್ಮ ಕೆಲಸಗಳು ಉತ್ತಮವಾಗಿರುತ್ತವೆ, ಬೇರೆಯವರಿಗಿಂತ ವಿಭಿನ್ನ ಎನ್ನುವ ಭಾವನೆ ನಿಮ್ಮ ಆತ್ಮಗೌರವ ಹಾಗೂ ಆತ್ಮವಿಶ್ವಾಸವನ್ನು ಹೆಚ್ಚಿಸುತ್ತವೆ. ಸೃಜನಾತ್ಮಕ ಚಿಂತನೆಯಿಂದ ಮಾಡುವ ಕೆಲಸದಲ್ಲಿ ತೃಪ್ತಿ ಸಿಗುತ್ತದೆ ಹಾಗೂ ಕೀಳರಿಮೆ ಸಹ ದೂರವಾಗುತ್ತದೆ. ನಿಮ್ಮ ದೈನಂದಿನ ಜೀವನದಲ್ಲಿ ಹೊಸತನವಿರಲು ಯಾವುದಾದರೂ ಒಳ್ಳೆಯ ಹವ್ಯಾಸ ಉದಾ: ಕಲೆ, ಸಾಹಿತ್ಯ, ಸಂಗೀತ ಕಲಿತುಕೊಳ್ಳಿ, ನಿಮಗಿರುವ ಸೃಜನಾತ್ಮಕತೆಯಿಂದ ಈ ಕೌಶಲ್ಯಗಳನ್ನು ನೀವು ಇನ್ನು ಸುಂದರ ಪಡಿಸಬಲ್ಲಿರಿ. ಕ್ರಿಯೆಗಳಲ್ಲಿ ಸೃಜನಾತ್ಮಕತೆ ಇದ್ದರೆ ಅದು ನೀವು ಮಾನಸಿಕವಾಗಿ ಸಕ್ರಿಯರಾಗಿರುವಂತೆ ಮಾಡುತ್ತದೆ.

**ಪರಿಣಾಮಕಾರಿ ಸಂವಹನ:** ಮಾತು ಬಲ್ಲವನಿಗೆ ಜಗಳವಿಲ್ಲ ಎಂಬ ನುಡಿ ನಿಮಗೆಲ್ಲ ಗೊತ್ತೆ ಇದೆ. ನಮ್ಮ ಮಾತುಗಳು ನಮ್ಮ ವ್ಯಕ್ತಿತ್ವವನ್ನು ಬಿಂಬಿಸುತ್ತವೆ, ನಿಮ್ಮ ಮಾತುಗಳು ಸ್ನೇಹಿತರನ್ನು ಸಂಪಾದಿಸಬಹುದು ಇಲ್ಲವೆ ಕಳೆದುಕೊಳ್ಳುವಂತೆ ಮಾಡಬಹುದು. ಮನುಷ್ಯನನ್ನು ಇತರೆ ಪ್ರಾಣಿಗಳಿಂದ ಭಿನ್ನವಾಗಿಸಿರುವುದೇ ನಮ್ಮ ಭಾಷಾ ಕೌಶಲ್ಯ. ನಿಮ್ಮ ಮಾತು ಇತರರಿಗೆ ನೋವುಂಟು ಮಾಡದಿರಲಿ, ನಿಮ್ಮ ಅಭಿಪ್ರಾಯವನ್ನು ನೇರವಾಗಿ ಸ್ಪಷ್ಟವಾಗಿ ಮಾತಿನ ಮೂಲಕ ತಿಳಿಸಿ. ಇದರಿಂದ ಬೇರೆಯವರು ನಿಮ್ಮ ಮಾತನ್ನು ಆಲಿಸುತ್ತಾರೆ ಹಾಗೂ ನಿಮ್ಮ ಗೌರವ ಸಹ ಹೆಚ್ಚುತ್ತದೆ. ನಕಾರಾತ್ಮಕ ಭಾಷಾ ಪ್ರಯೋಗಗಳು ಬಾಂಧವ್ಯದಲ್ಲಿ ಬಿರುಕನ್ನುಂಟು ಮಾಡುತ್ತದೆ, ಆದ್ದರಿಂದ ಯೋಚಿಸಿ ಮತ್ತು ಒಳ್ಳೆಯ ಮಾತುಗಳನ್ನಾಡಿ.

**ಉತ್ತಮ ಬಾಂಧವ್ಯ:** ಮನುಷ್ಯ ಒಂಟಿಯಲ್ಲ, ನಮ್ಮೊಂದಿಗೆ ನಮ್ಮ ಕುಟುಂಬದವರಿದ್ದಾರೆ, ನೆರೆ ಹೊರೆಯವರಿದ್ದಾರೆ, ಸ್ನೇಹಿತರಿದ್ದಾರೆ ಇಡೀ ಸಮಾಜವೇ ಇದೆ. ಆದಷ್ಟು ನಾವು ಎಲ್ಲರೊಡನೆ ಉತ್ತಮ ಬಾಂಧವ್ಯವನ್ನು ಹೊಂದಬೇಕು. ನಮ್ಮ ಸಕಾರಾತ್ಮಕ ನಡೆ, ನುಡಿಗಳು ನಮಗೆ ಹೆಚ್ಚು ಬಾಂಧವ್ಯಗಳನ್ನು ಗಳಿಸಲು ಸಹಾಯ ಮಾಡುತ್ತದೆ. ಬಾಂಧವ್ಯಗಳು ಚೆನ್ನಾಗಿರುವ ವ್ಯಕ್ತಿ ಸದಾ ಸಂತಸದಿಂದಿರುತ್ತಾನೆ. ಕಷ್ಟಗಳು ಬಂದಾಗ ಅವನಿಗೆ ಚೈತನ್ಯ ತುಂಬಲು ಬಂಧುಗಳಿರುತ್ತಾರೆ. ಆದ್ದರಿಂದ ಸ್ವಾರ್ಥ, ದುರಾಸೆ, ದ್ವೇಷಗಳನ್ನು ಬದಿಗೊತ್ತಿ ಎಲ್ಲರೊಡನೆ ಪ್ರೀತಿ, ವಿಶ್ವಾಸದಿಂದಿರುವುದು ನಮ್ಮನ್ನು ಸಮಾಜಮುಖಿಯನ್ನಾಗಿಸುತ್ತದೆ.

**ಅನುಭೂತಿ:** ಅನುಭೂತಿ ಎಂದರೆ ಇತರರನ್ನು ನಮ್ಮಂತೆಯೇ ಭಾವಿಸಿ ಅವರ ಸಮಸ್ಯೆಯನ್ನು ಅರ್ಥಮಾಡಿಕೊಳ್ಳುವುದು. ನೋವಿನಲ್ಲಿರುವವರಿಗೆ ನಿಮ್ಮ ಕರುಣೆಯೊಂದಿಗೆ ಅನುಭೂತಿಯು ಇದ್ದರೆ ಅವರು ತಮ್ಮ ಸಮಸ್ಯೆಯಿಂದ ಹೊರ ಬರಲು ಸಾಧ್ಯವಾಗುತ್ತದೆ. ಇತರರ ಭಾವನೆಗಳಿಗೆ ಬೆಲೆಕೊಡುವುದು, ಅವರನ್ನು ಪ್ರತ್ಯೇಕಿಸದೆ ಒಪ್ಪಿಕೊಂಡು ನಮ್ಮಂತೆಯೆ ಕಾಣುವುದರಿಂದ ನಮ್ಮ ಬಾಂಧವ್ಯಗಳು ಸಹ ಸದೃಢವಾಗುತ್ತವೆ.

**ಸ್ವ–ಅರಿವು:** ಬೇರೆಯವರನ್ನು ಅರ್ಥಮಾಡಿಕೊಳ್ಳುವ ಮೊದಲು,



ನಮ್ಮನ್ನು ನಾವು ಅರ್ಥಮಾಡಿಕೊಳ್ಳಬೇಕು. ನಮ್ಮ ಸಾಮರ್ಥ್ಯ ಏನು ಎಂಬುದನ್ನು ತಿಳಿದರೆ ಅದನ್ನು ಇನ್ನು ಉತ್ತಮಗೊಳಿಸಲು ಸಾಧ್ಯವಾಗುತ್ತದೆ, ನಮ್ಮ ಕೊರತೆಗಳು ಏನು ಎಂಬುದನ್ನು ತಿಳಿದರೆ ಅದನ್ನು ನಿವಾರಿಸಲು ಅಥವಾ ಅದನ್ನು ನಮ್ಮ ಸಾಮರ್ಥ್ಯವನ್ನಾಗಿ ಮಾರ್ಪಾಡು ಮಾಡಲು ಸಹಾಯವಾಗುತ್ತದೆ. ನಮ್ಮ ಸ್ವ–ಅರಿವು ನಮ್ಮ ಸ್ವಗೌರವ ಹಾಗೂ ಸ್ವಾಭಿಮಾನವನ್ನು ಹೆಚ್ಚಿಸುತ್ತದೆ. ತನ್ನನ್ನು ತಾನು ಅರಿತ ವ್ಯಕ್ತಿ ಜಗತ್ತನ್ನು ಅರಿಯಬಲ್ಲ.

**ಭಾವನೆಗಳ ನಿರ್ವಹಣೆ:** ಭಾವನೆಗಳಲ್ಲಿ ಎರಡು ವಿಧ. ಸಕಾರಾತ್ಮಕ ಹಾಗೂ ನಕಾರಾತ್ಮಕ ಭಾವನೆ. ಸಕಾರಾತ್ಮಕ ಭಾವನೆಗಳಾದ ಪ್ರೀತಿ, ವಿಶ್ವಾಸ, ಸಹನೆ, ಧೈರ್ಯ ಇವು ಮನುಷ್ಯನನ್ನು ಸಬಲನನ್ನಾಗಿಸುತ್ತದೆ ಹಾಗೂ ಸ್ನೇಹಪರರನನ್ನಾಗಿಸುತ್ತದೆ. ನಕಾರಾತ್ಮಕ ಭಾವನೆಗಳಾದ ಸ್ವಾರ್ಥ, ದ್ವೇಷ, ಅಧೈರ್ಯ, ಅಸಹನೆ ಇತ್ಯಾದಿ ಮನುಷ್ಯನನ್ನು ಸಮಾಜಘಾತುಕರನ್ನಾಗಿಸುತ್ತದೆ ಹಾಗೂ ಮಾನಸಿಕವಾಗಿ ದುರ್ಬಲರನ್ನಾಗಿಸುತ್ತದೆ, ಆದ್ದರಿಂದ ಸಕಾರಾತ್ಮಕ ಭಾವನೆಗಳನ್ನು ಬೆಳೆಸಿಕೊಳ್ಳಿ. ನಿಮ್ಮ ಭಾವನೆಗಳನ್ನು ಇತರರೊಂದಿಗೆ ಹಂಚಿಕೊಳ್ಳಿ, ಭಾವನೆಗಳನ್ನು ವ್ಯಕ್ತ ಪಡಿಸಿದರೆ ಮನಸ್ಸು ಹಗುರವಾಗುತ್ತದೆ, ಭಾವನೆಗಳನ್ನು ಮನಸ್ಸಿನಲ್ಲಿ ಮುಚ್ಚಿಡುವುದರಿಂದ ಮಾನಸಿಕ ಚಿಂತೆ ಹಾಗೂ ಒತ್ತಡ ಹೆಚ್ಚುತ್ತದೆ ಇದರಿಂದ ಮಾನಸಿಕ ಅನಾರೋಗ್ಯ ಉಂಟಾಗಬಹುದು.

**ಒತ್ತಡ ನಿರ್ವಹಣೆ:** ಇತ್ತೀಚಿನ ದಿನದಲ್ಲಿ ಎಲ್ಲರು ಒತ್ತಡದ ಬಗ್ಗೆ ಮಾತನಾಡುತ್ತಾರೆ, ಈಗಿನ ಯಾಂತ್ರಿಕ ಜೀವನದಲ್ಲಿ ಪ್ರತಿಯೊಬ್ಬರಿಗೂ ಒತ್ತಡವಿದೆ. ಒತ್ತಡ ನಿರ್ವಹಿಸದಿದ್ದರೆ ಅದು ದೈಹಿಕ ಹಾಗು ಮಾನಸಿಕ ಹಾನಿಯನ್ನುಂಟು ಮಾಡಬಲ್ಲದು. ಸಮಯದ ಪರಿಪಾಲನೆ ಒತ್ತಡವನ್ನು ಕಡಿಮೆ ಮಾಡಲು ಸಹಕಾರಿ. ಪೌಷ್ಟಿಕಾಂಶವುಳ್ಳ ಆಹಾರ, ವ್ಯಾಯಾಮ, ಯೋಗ, ಧ್ಯಾನ, ಸರಿಯಾದ ನಿದ್ರೆ ಇವೆಲ್ಲವು ಒತ್ತಡ ನಿವಾರಣೆಗೆ ಸಹಾಯಕವಾಗಿದೆ.

ಈ ಎಲ್ಲಾ ಮೇಲ್ಕಂಡ ಕೌಶಲ್ಯಗಳು ನಿಮಗೆ ಹೊಸದೇನಲ್ಲ, ಪ್ರತಿನಿತ್ಯ ಗೊತ್ತೊ ಗೊತ್ತಿಲ್ಲದೆಯೋ ಇದನ್ನು ಉಪಯೋಗಿಸುತ್ತಿದ್ದೇವೆ. ಇವುಗಳನ್ನು ಜಾಗೃತ ಮನಸ್ಸಿನಿಂದ ಉಪಯೋಗಿಸುವುದು ಬಹಳ ಪರಿಣಾಮಕಾರಿಯಾಗಿದೆ. ನಮ್ಮ ಜೀವನದಲ್ಲಿ ಎದುರಾಗುವ ಕಷ್ಟ ಹಾಗೂ ಸವಾಲುಗಳನ್ನು ಈ ಎಲ್ಲ ಕೌಶಲ್ಯಗಳ ಉಪಯೋಗದಿಂದ ಸುಲಭವಾಗಿ ನಿರ್ವಹಿಸಬಹುದು. ಇದರಿಂದ ನಾವು ದೈಹಿಕವಾಗಿ ಅಷ್ಟೆ ಅಲ್ಲ ಮಾನಸಿಕವಾಗಿಯು ಸಹ ಸದೃಢರಾಗಿ ಹಾಗೂ ಆರೋಗ್ಯವಾಗಿರಲು ಸಾಧ್ಯ. ■



Downloaded From:www.kpscvaani.com



# ಪರಿಸರ ರಕ್ಷತಿ ರಕ್ಷಿತಃ

**ಪರಿಸರ ರಕ್ಷತಿ ರಕ್ಷಿತಃ ಎಂಬ ಮಾತನ್ನು ಅರಿತು ಪರಿಸರವನ್ನು ಕಾಪಾಡುವುದು ನಮ್ಮ ನಿಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ.**

ಮಹಾಂತೇಶ .ಅ. ಗುಡೋಡಗಿ

ಪರಿಸರ ಎಂಬ ವರ್ಣಿಸಲಾಗದ ಉಡುಗೊರೆಯನ್ನು ಇಡೀ ಜಗತ್ತಿಗೆ ನೀಡಿದ ತಾಯಿ ಭೂಮಾತೆ. ಈ ಭೂತಾಯಿಯೂ ಯಾರು ಮಾಡದಂತ ಮಹದೋಪಕಾರವನ್ನು ಮನುಜನಿಗೆ ಮಾಡಿದ್ದಾಳೆ. ಹಾಗಿದ್ದ ಮೇಲೆ ಜೀವ ಸಂಕುಲದಲ್ಲೇ ಅತಿ ಬುದ್ಧಿವಂತ ಪ್ರಾಣಿ ಎನಿಸಿಕೊಂಡಿರುವ ಮಾನವ ಈ ಭೂತಾಯಿಗೆ ಚಿರಋಣಿಯಾಗಿರಬೇಕಾದದ್ದು ಅತ್ಯವಶ್ಯಕವಾದದ್ದು.

"ಜನನಿ ಜನ್ಮ ಭೂಮಿಶ್ಚ ಸ್ವರ್ಗಾದಪಿ ಗರೀಯಸಿ" ಹೆತ್ತ ತಾಯಿ ಹೊತ್ತ ನೆಲ ಸ್ವರ್ಗಕ್ಕಿಂತ ಮಿಗಿಲಾದದ್ದು ಎನ್ನುತ್ತದೆ ಒಂದು ಉಕ್ತಿ. ಅದೇ ಭೂಮಾತೆ ಪರಿಸರವೆಂಬ ಅದ್ಭುತ ಸ್ವರ್ಗವನ್ನು ಭೂಮಿಯ ಮೇಲೆ ನಿರ್ಮಿಸಿದ್ದಾಳೆ. ಮನುಷ್ಯರು ಅಳಿದ ಮೇಲೆ ಸ್ವರ್ಗ-ನರಕವನ್ನು ಕಂಡವರಿಲ್ಲ. ಆದರೆ ಸುಂದರ ಪರಿಸರ ನಿರ್ಮಾಣವೆ ಭೂಮಿಯ ಮೇಲಿನ ನಿಜವಾದ ಸ್ವರ್ಗ ಅದನ್ನು ನರಕವನ್ನಾಗಿಸದೆ ಸ್ವಚ್ಛವಾಗಿರಿಸಿಕೊಳ್ಳುವುದು ಮನುಷ್ಯನ ಆದ್ಯ ಕರ್ತವ್ಯವಾಗಿದೆ.

ಪ್ರಕೃತಿಗೂ ಹಾಗೂ ಮನುಷ್ಯನಿಗೂ ಇರುವ ಸಂಬಂಧ ಅಗಾದವಾದದ್ದು. ಅದೊಂದು ಬಿಡಿಸಲಾರದ ಬಂಧನ. ಪರಿಸರವನ್ನು ನಾವು ರಕ್ಷಣೆ ಮಾಡಿದರೆ ಪರಿಸರವು ನಮ್ಮನ್ನು ರಕ್ಷಣೆ ಮಾಡುತ್ತದೆ. "Man is a child of Nature" ಮಾನವ ಪರಿಸರದ ಕೂಸು ಎಂದಿದ್ದಾರೆ ಆಂಗ್ಲ ಕವಿ ವಿಲಿಯಂ ವರ್ಡ್ಸ್‌ವರ್ತ್. ಪರಿಸರದ ಮಡಿಲಿನಲ್ಲಿಯೇ ಆತನ ವಾಸ. ಆದ್ದರಿಂದ ಮನುಷ್ಯರ ಸೌಖ್ಯ ಜೀವನಕ್ಕೆ ಸುಂದರ ಪರಿಸರ ನಿರ್ಮಾಣ ಅವಶ್ಯಕ. "ಕಾರ್ಲ್ ಮಾರ್ಕ್ಸ್ ಹೇಳುವಂತೆ ಮನುಷ್ಯ ಪ್ರಕೃತಿಯಿಂದ ಜೀವಿಸುತ್ತಾನೆ. ಪ್ರಕೃತಿಯು ಅವನ ದೇಹದಲ್ಲಿಯೇ ಅಂತರ್ಗತವಾಗಿದೆಯಾದ್ದರಿಂದ, ಅವನು ಪೃಥ್ವಿಯಲ್ಲಿ ಬದುಕುಳಿಯಬೇಕಾದರೆ ನಿಸರ್ಗದೊಡನೆ ನಿರಂತರ ಸಂವಾದದಲ್ಲಿ ತೊಡಗಿರಬೇಕಾಗುತ್ತದೆ.

ಮಾನವ ಪ್ರಕೃತಿಯ ಅವಿಭಾಜ್ಯ, ಅಭೇದ್ಯ ಅಂಗವಾಗಿರುವುದರಿಂದ ಮನುಷ್ಯನ ಭೌತಿಕ ಮತ್ತು ಮಾನಸಿಕ ಅಸ್ತಿತ್ವವು ಪ್ರಕೃತಿಯನ್ನೇ ಅವಲಂಬಿಸಿರುತ್ತದೆ". ಆದ್ದರಿಂದ ಪ್ರಕೃತಿಯ ಸಮತೋಲನ ಕಾಯ್ದುಕೊಳ್ಳುವತ್ತ ಕ್ರಮ ವಹಿಸಬೇಕಿದೆ. ಸುಂದರ ಪರಿಸರ ನಿರ್ಮಾಣ ಅದು ಕೇವಲ ಒಬ್ಬರ



Downloaded From:www.kpscvaani.com

ಕಾರ್ಯವಲ್ಲ ಸರ್ವರ ಸಮಪಾಲು ಇದೆ. ಪರಿಸರ ಸಂರಕ್ಷಣೆ ನಾನೊಬ್ಬನೇ ಮಾಡಿದರೆ ಆಗುತ್ತಾ? ಮರಗಳನ್ನು ನಾನೊಬ್ಬನು ಕಡಿದರೆ ಏನಾಯಿತು? ಈ ತರಹದ ಅಸಡ್ಡೆತನದ ಮನಸ್ಥಿತಿ ಪರಿಸರದ ದುಸ್ಥಿತಿಗೆ ಕಾರಣವಾಗಿದೆ. ಎಲ್ಲರು ಸ್ವಯಂ ಅರಿವು ಹೊಂದಿ ಮುಂದಿನ ಪೀಳಿಗೆಗೆ ಆರೋಗ್ಯಕರ ಪರಿಸರವನ್ನು, ನಿಸರ್ಗದತ್ತ ಕೊಡುಗೆಗಳಾದ ಎಲ್ಲ ಸಂಪನ್ಮೂಲಗಳನ್ನು ಉಳಿಸಿಕೊಂಡು ಹೋಗುವುದು ಇಂದಿನ ಆಧುನಿಕ ಮಾನವನ ಗುರುತರ ಜವಾಬ್ದಾರಿಯಾಗಿದೆ.

ಸ್ವಚ್ಛ ಪರಿಸರ ನಿರ್ಮಾಣಕ್ಕೆ ಮರವೆಂಬ ಉಸಿರ ದೇವರ ಉಳಿಸಿ ಬೆಳೆಸಬೇಕಿದೆ. ಮರಗಳು ಭೂಮಿಯ ಮೇಲಿನ ಜೀವಂತ ದೇವರುಗಳು, ಮರಗಳ ಹಸಿರಿನೊಳಗಡೆ ಮನುಜನ ಉಸಿರು ಅಡಗಿದೆ. ಮನುಷ್ಯನ ಉಸಿರಾಟದ ಆಮ್ಲಜನಕದ ಮೂಲ ಆಕರವೆಂದರೆ ಗಿಡ-ಮರಗಳು. ಮರಗಳೇ ಮನುಜನ ಮಾಣಿಕ್ಯ. ಭೌತಿಕ ಜಗತ್ತಿನಲ್ಲಿ ಪರಿಸರದ ಮೇಲೆ ಮನುಷ್ಯನ ಹಸ್ತಕ್ಷೇಪ ಮಿತಿಮೀರತೊಡಗಿದೆ. ಇಂದಿನ ಆಧುನಿಕ ಸ್ಪರ್ಷಕ್ಕೆ ಮನುಷ್ಯ ಮೈಯೊಡ್ಡಿಕೊಂಡಂತೆ ಹೆಚ್ಚು ಹಣಗಳಿಸುವ ಹುಂಬತನದಲ್ಲಿ ಭೂಮಿಯ ಒಡಲನ್ನು ಬಗೆದು ವಿವೇಚನಾರಹಿತವಾಗಿ ಸಂಪನ್ಮೂಲಗಳನ್ನು ಬರಿದು ಮಾಡುತ್ತಿದ್ದಾನೆ.

ನಿಸರ್ಗದತ್ತ ಕೊಡುಗೆಗಳಾದ ಕಾಡುಗಳನ್ನು ಕಡಿದು ನಿರ್ನಾಮ ಮಾಡುತ್ತಿದ್ದಾನೆ. ಅವುಗಳ ಸ್ಥಾನದಲ್ಲಿ ಕಾಂಕ್ರಿಟ್ ಕಾಡುಗಳು ಆಕಾಶದೆತ್ತರದಲ್ಲಿ ತಲೆ ಎತ್ತಿ ನಿಲ್ಲುತ್ತಿವೆ. ಕೈಗಾರೀಕರಣ, ನಗರೀಕರಣ ಹಾಗೂ ರಸ್ತೆ ಅಗಲೀಕರಣ ಮುಂತಾದ ನಿರ್ಮಾಣದ ಹಂತದಲ್ಲಿ ಸಾಲು-ಸಾಲು ಮರಗಳು ಧರೆಗೆ ಉರುಳುತ್ತಿವೆ. ಹೀಗೆಯೇ ಕಾಡುಗಳ ಸಂಖ್ಯೆ ಕ್ಷೀಣಿಸುತ್ತಾ ಸಾಗಿದರೆ ಮುಂಬರುವ ಕರಾಳ ದಿನಗಳನ್ನು ಅನುಭವಿಸಬೇಕಾಗುತ್ತದೆ.

"ಮಾನವ ನಾಗರಿಕತೆ, ಸಂಸ್ಕೃತಿ ಅರಣ್ಯಗಳ ನೆರಳಿನಲ್ಲಿ ಬೆಳೆದಿವೆಯಾದರೂ, ಮನುಕುಲದ ಒಳಿತಿಗೆ ನೈಸರ್ಗಿಕ ಕೊಡುಗೆಯಾದ ಅರಣ್ಯಗಳು ಮತ್ತು ಅವುಗಳಲ್ಲಿ ವಾಸಿಸುತ್ತಿರುವ ಜೀವಜಾಲದ ಭವಿಷ್ಯ ಇಂದಿನ ಮಾನವನ ನಡವಳಿಕೆಯಿಂದ ಅತ್ಯಂತ ಕರಾಳವಾದುದಾಗಿದೆ" ಎಂದು ಪರಿಸರವಾದಿಯಾಗಿರುವ ಬರ್ಟನ್ ಅಭಿಪ್ರಾಯಪಟ್ಟಿದ್ದಾರೆ. ನಾಡಿನ ಮರಗಳ ನಾಶದಿಂದ ಹಾಗೂ ಅರಣ್ಯಗಳು ಕ್ಷೀಣಿಸುತ್ತಿರುವುದರಿಂದ ಮಳೆಯ ಪ್ರಮಾಣ ಕಡಿಮೆಯಾಗುತ್ತಿದೆ. ಇದರಿಂದ ನೀರಿನ ಮೂಲ ಆಕರಗಳು ಬತ್ತಿಹೋಗುವುದರಿಂದ ನೀರಿನ ಬವಣೆ ಉಂಟಾಗುತ್ತಿದೆ. ನೀರಿಲ್ಲದಿದ್ದರೆ ಬೆಳೆ ಬೆಳೆಯುವ ರೈತ ಕಂಗಾಲಾಗುತ್ತಾನೆ. ನೀರು ಸಕಲ ಜೀವಿಗಳ ಸಂಜೀವಿನಿ. ಆದ್ದರಿಂದ ನೀರಿನ ಸರಿಯಾದ ಬಳಕೆಯನ್ನು ಎಲ್ಲರು ಅರಿಯಬೇಕಿದೆ.

ಎಲ್ಲೆಂದರಲ್ಲಿ ನೀರಿನ ಅತಿಯಾದ ಬಳಕೆ ಹಾಗೂ ಪೋಲಾಗುವುದನ್ನು ನಿಲ್ಲಿಸಬೇಕು. ಊರುಗಳ ಹಾಗೂ ನಗರಗಳ ಚರಂಡಿ ನೀರು ಹಳ್ಳಗಳ ಮುಖಾಂತರ ನದಿಯನ್ನು ಸೇರುತ್ತಿವೆ. ಅಲ್ಲದೆ ಕಾರ್ಖಾನೆಗಳಿಂದ ಬರುವ ರಾಸಾಯನಿಕಯುಕ್ತ ನೀರು ನದಿಗಳನ್ನು ಸೇರುವುದರಿಂದ ಅಲ್ಲಿನ ನೀರು ಮಲಿನಗೊಳ್ಳುತ್ತಿದೆ. "ಕೈಗಾರಿಕೆಗಳ ಕೊಚ್ಚೆ ನೀರು ಕೈಗಾರಿಕೀಕರಣದ ಒಂದು ಅನಿವಾರ್ಯ ಫಲ" ಎಂಬುದು ಪರಿಸರವಾದಿಗಳ ಇಂಗಿತ. ವಿಷಯುಕ್ತ ರಾಸಾಯನಿಕಗಳಿಂದ ಜಲಚರಗಳ ಮಾರಣಹೋಮವಾಗುತ್ತಿದೆ. ಮನುಷ್ಯನ ಕ್ರೂರತನಕ್ಕೆ ಜಲಸಂಪತ್ತು ನಾಶ ಹೊಂದುತ್ತಿದೆ. ಬೆಳೆಗಳಿಗೆ ಹಾಯಿಸುವುದರಿಂದ ಭೂಮಿಗೆ ರಾಸಾಯನಿಕಗಳು ಸೇರ್ಪಡೆಯಾಗಿ ನದಿ ಪಾತ್ರದ ಜಮೀನುಗಳು ಭಂಜರು ಭೂಮಿಯಾಗಿ ನಿರ್ಮಾಣವಾಗುತ್ತಿವೆ.

ಭೂಮಿಯ ಮೇಲಿನ ಎಲ್ಲ ನೀರು ಕುಡಿಯಲು ಯೋಗ್ಯವಾಗಿಲ್ಲ. ಕೇವಲ 2.7% ಮಾತ್ರ ಕುಡಿಯಲು ಯೋಗ್ಯವಾಗಿದೆ. ವಸುಂದರೆಯ ಅನರ್ಘ್ಯ ರತ್ನ ನೀರನ್ನು ಸರಿಯಾಗಿ ಸದ್ಬಳಕೆ ಮಾಡಿಕೊಳ್ಳದಿದ್ದರೆ ಮುಂಬರುವ ದಿನಗಳಲ್ಲಿ ಬಹುದೊಡ್ಡ ನೀರಿನ ಸಮಸ್ಯೆಯನ್ನು ಎದುರಿಸಬೇಕಾಗುತ್ತದೆ. ಎಲ್ಲರು ಇನ್ನಾದರು ಎಚ್ಚರ ವಹಿಸಬೇಕಿದೆ. ಏಪ್ರಿಲ್ 14, 2023 ರ ನಂತರ ದಕ್ಷಿಣ ಆಫ್ರಿಕಾ ಸರಕಾರ ನೀರು ಸರಬರಾಜು ಮಾಡಲು ಸಾಧ್ಯವಾಗದ ಕಾರಣ ರಾಜಧಾನಿ "ಕೇಪ್ ಟೌನ್ ವಿಶ್ವದ ಮೊದಲ ನೀರು ಮುಕ್ತ ನಗರ" ಎಂದು ಘೋಷಿಸಿದೆ. ಮುಂದೊಂದು ದಿನ ಇಂತಹ ಪರಿಸ್ಥಿತಿ ನಮ್ಮ ನಾಡಿಗೂ ಬರುವ ಮುನ್ನ ಈಗಲೇ ಎಚ್ಚೆತ್ತುಕೊಳ್ಳಬೇಕಿದೆ. "ಮನುಷ್ಯನ ಚಟುವಟಿಕೆಗಳಿಂದ ಪ್ರಪಂಚದ ಕೆಲವು ಪ್ರದೇಶಗಳು ಚಂದ್ರನ ಮೇಲ್ಮೈಯಷ್ಟೇ ಬರಿದಾಗಿವೆ, ಜಗತ್ತು ಅತಿವೇಗವಾಗಿ ಮಾನವನ ವಾಸಸ್ಥಾನಕ್ಕೆ ಅಯೋಗ್ಯವಾಗುತ್ತಿದೆ"ಎಂದು ಜಾರ್ಜ್ ಪರ್ಕಿನ್ ಮಾರ್ಷ್‌ರವರು ಅಭಿಪ್ರಾಯಪಟ್ಟಿದ್ದಾರೆ.

ಇತ್ತೀಚಿನ ದಿನಗಳಲ್ಲಿ ಉದ್ಯೋಗ ಸೃಷ್ಟಿಯಲ್ಲಿ ಬಹುಪಾಲು ಹೊಂದಿರುವ ಮೂಲ ನೆಲೆಗಳೆಂದರೆ ಕೈಗಾರಿಕೆಗಳು. ಆದರೆ ಮುಗಿಲೆತ್ತರಕ್ಕೆ ಮುಖಮಾಡಿನಿಂತ ಕಾರ್ಖಾನೆಗಳ ಕೊಳುವೆಗಳಿಂದ ಹೊರಹೊಮ್ಮುವ ಹೊಗೆ ವಾತಾವರಣವನ್ನು ಕಲುಷಿತಗೊಳಿಸಿದೆ. ಮಾನವ ತನ್ನ ಆರ್ಥಿಕತೆಯ ಸುಧಾರಣೆಗಾಗಿ ಕೈಗಾರೀಕರಣದ ಹೆಸರಿನಲ್ಲಿ ಎಲ್ಲೆಂದರಲ್ಲಿ ಕಾರ್ಖಾನೆಗಳನ್ನು ನೆಲೆಗೊಳಿಸುತ್ತಿದ್ದಾನೆ. ಆದರೆ ಅದರಿಂದ ಹೊರಹೊಮ್ಮುವ ಕೊಚ್ಚೆ ಹಾಗೂ ಹೊಗೆಯಿಂದ ತನ್ನ ವಾಸಯೋಗ್ಯ ಮನೆಯನ್ನೇ ಕಲುಷಿತಗೊಳಿಸುತ್ತಿದ್ದಾನೆ. ಕಾರ್ಖಾನೆಗಳ, ವಾಹನಗಳ ಹಾಗೂ ಕೃಷಿ ತ್ಯಾಜ್ಯಗಳನ್ನು ಸುಡುವುದರಿಂದ ಬರುವ ಅತಿಯಾದ ಹೊಗೆಯಿಂದ ವಾತಾವರಣದ ಕಾರ್ಬನ್ ಡೈಆಕ್ಸೈಡ್‌ನ ಪ್ರಮಾಣ ಹೆಚ್ಚಾಗತೊಡಗಿದೆ. ಹಸಿರು ಮನೆ ಪರಿಣಾಮದಿಂದ ಓಜೋನ್ ಪದರು ರಂಧ್ರಗೊಂಡು ಸೂರ್ಯನ ನೇರಳಾತೀತ ಕಿರಣಗಳು ಭೂಮಿಯನ್ನು ನೇರವಾಗಿ ತಲುಪುತ್ತವೆ. ಕಾರ್ಬನ್ ಡೈಆಕ್ಸೈಡ್ ಆ ಕಿರಣಗಳು ಪ್ರತಿಫಲನಗೊಳ್ಳುವುದನ್ನು ತಡೆಹಿಡಿಯುವುದರಿಂದ ಭೂಮಿಯ ತಾಪಮಾನ ಹೆಚ್ಚಾಗತೊಡಗಿದೆ. ಇದರಿಂದ ಧ್ರುವಗಳ ಮೇಲಿನ ಮಂಜುಗಡ್ಡೆಗಳು ಕರಗುತ್ತಿವೆ. ಪ್ರತಿವರ್ಷ ಸಮುದ್ರ ಮಟ್ಟವು ಹೆಚ್ಚಾಗುತ್ತಿದೆ. ಜಾಗತಿಕ ತಾಪಮಾನ ಏರಿಕೆಯು ಇಂದು ವಿಶ್ವ ಮಟ್ಟದ ಬಹುದೊಡ್ಡ ಸಮಸ್ಯೆಯಾಗಿದೆ. ಆದ್ದರಿಂದ ಮಾಲಿನ್ಯವೆಂಬ ಪೆಡಂಭೂತದ ಅಟ್ಟಹಾಸಕ್ಕೆ ಬಹುಬೇಗ ಇತಿಶ್ರೀ ಹಾಡಬೇಕಿದೆ.

ಸರ್ವರಿಗೂ ಅನ್ನವನ್ನು ನೀಡುವ ಭೂಮಾತೆಯ ಒಡಲಿಗಿಂದು ಮನುಷ್ಯ ವಿಷವನ್ನು ತುಂಬುತ್ತಿದ್ದಾನೆ. ರೈತರು ಹೆಚ್ಚು ಬೆಳೆ ಬೆಳೆಯಬೇಕೆಂದು ಪೈಪೋಟಿಗಿಳಿದು ರಾಸಾಯನಿಕ ಗೊಬ್ಬರದ ಬಳಕೆಯ ಜೊತೆಗೆ ಕೀಟನಾಶಕಗಳ ಸಿಂಪಡಣೆಯನ್ನು ಮಾಡುತ್ತಿದ್ದಾರೆ. ಇದರಿಂದ ಆಹಾರವೆಲ್ಲ ವಿಷಮಯಗೊಂಡು ಕ್ರಮೇಣ ಮನುಷ್ಯನ ದೇಹವನ್ನು ಸೇರತೊಡಗಿದೆ. ಆರೋಗ್ಯವು ಕ್ಷೀಣಿಸುವುದರೊಂದಿಗೆ ಆಯುಷ್ಯವು



Downloaded From:www.kpscvaani.com



ಕಡಿಮೆಯಾಗುತ್ತಲಿದೆ. ಸಾವಯವ ಇಂಗಾಲದ ಪ್ರಮಾಣ ಕಡಿಮೆಯಾಗುವುದಲ್ಲದೆ ಜೈವಿಕ ಸೂಕ್ಷ್ಮಾಣು ಜೀವಿಗಳು ಸಾಯುತ್ತಿವೆ. ಆದ್ದರಿಂದ ಫಲವತ್ತಾದ ಭೂಮಿಯು ತನ್ನ ಸ್ವರೂಪವನ್ನು ಕಳೆದುಕೊಂಡು ಬರಡು ಭೂಮಿಯಾಗಿ ಮಾರ್ಪಾಡಾಗುತ್ತಿದೆ.

ಮಣ್ಣು ತನ್ನ ಸತ್ವವನ್ನು ಕಳೆದುಕೊಂಡರೆ ಬೆಳೆ ಸರಿಯಾಗಿ ಬರದಿದ್ದರೆ ತಿನ್ನುವ ಆಹಾರದ ಕೊರತೆಯು ಉಂಟಾಗುವುದು. ಮುಂದಿನ 20–30 ವರ್ಷಗಳಲ್ಲಿ ಸುಮಾರು 200 ಕೋಟಿ ಜನರಿಗೆ ಆಹಾರದ ಕೊರತೆಯುಂಟಾಗಿ ಹಸುವಿನಿಂದ ಬಳಲಿ ಅಸುನೀಗುವ ಸಾಧ್ಯತೆಯಿದೆ ಎಂದು ವಿಶ್ವಸಂಸ್ಥೆ ಮತ್ತು ವಿಜ್ಞಾನಿಗಳು ಹೇಳುತಿದ್ದಾರೆ. ಆದ್ದರಿಂದ ಸರಕಾರವು ಮಣ್ಣು ಪುನಶ್ಚೇತನ ಕಾನೂನು ಜಾರಿಗೆ ತಂದು ರೈತರ ಬೆನ್ನೆಲುಬಾಗಿ ನಿಲ್ಲಬೇಕು."ಕೃಷಿ ಸಂಪತ್ತೇ ರೈತನ ಸಂಪತ್ತು; ರೈತನ ಸಂಪತ್ತೇ ನಾಡಿನ ಸಂಪತ್ತು". ಮಣ್ಣು ಪರಿಸರ ವ್ಯವಸ್ಥೆಯ ಕಣ್ಣು, ಅದಕ್ಕಾಗಿ ರೈತರು ಸಾವಯವ ಕೃಷಿಯನ್ನು ಅನುಸರಿಸಿ ಮುಂದಿನ ಪೀಳಿಗೆಗೆ ಫಲವತ್ತಾದ ಮಣ್ಣು ಉಳಿಸಬೇಕಿದೆ.

ನಗರಗಳಿಂದ ಬರುವ ನೂರಾರು ಟನ್‌ಗಳಷ್ಟು ತ್ಯಾಜ್ಯವಸ್ತುಗಳು, ಎಲೆಕ್ಟ್ರಾನಿಕ್ ತ್ಯಾಜ್ಯಗಳು ಹಾಗೂ ಮನುಷ್ಯನ ಪ್ರಸ್ತುತ ಜೀವನವನ್ನು ಆವರಿಸಿಕೊಂಡಿರುವ ಅತೀ ಹೆಚ್ಚು ಪ್ಲಾಸ್ಟಿಕ್ ವಸ್ತುಗಳು ಇಂದು ಭೂಮಿಯ ಮಡಿಲನ್ನು ಸೇರುತ್ತಿವೆ. 2023 ರ ವಿಶ್ವ ಪರಿಸರ ದಿನವನ್ನು "ಪ್ಲಾಸ್ಟಿಕ್ ಮಾಲಿನ್ಯಕ್ಕೆ ಪರಿಹಾರಗಳು" ಎನ್ನುವ ತತ್ವದಡಿಯಲ್ಲಿ "Beat plastic pollution" (ಬೀಟ್ ಪ್ಲಾಸ್ಟಿಕ್ ಪೊಲುಶನ್) ಎನ್ನುವ ಅಭಿಯಾನದೊಂದಿಗೆ ಕೋಟ್ ಡಿ ಐವೊರ್, ನೆದರ್‌ಲ್ಯಾಂಡ್ ಸಹಭಾಗಿತ್ವದಡಿಯಲ್ಲಿನ ವಿಶ್ವ ಪರಿಸರದ 50 ನೇ ವಾರ್ಷಿಕೋತ್ಸವವನ್ನು ಆಯೋಜಿಸಲಾಗಿದೆ.

ಪ್ರತಿವರ್ಷ 400 ಮಿಲಿಯನ್ ಟನ್‌ಗಳಿಗಿಂತ ಹೆಚ್ಚು ಪ್ಲಾಸ್ಟಿಕ್‌ನ್ನು ಉತ್ಪಾದಿಸಲಾಗುತ್ತದೆ. ಅದರಲ್ಲಿ ಅರ್ಧದಷ್ಟು ಒಮ್ಮೆ ಮಾತ್ರ ಬಳಸಲು ವಿನ್ಯಾಸಗೊಳಿಸಲಾಗುತ್ತದೆ. 10% ಮರು ಬಳಕೆ ಮಾಡಲಾಗುತ್ತದೆ. ಅಂದಾಜು 19–23 ಮಿಲಿಯನ್ ಟನ್‌ಗಳಷ್ಟು ನದಿ, ಸಾಗರ ಮತ್ತು ಸಮುದ್ರಗಳನ್ನು ಸೇರಿಹೋಗುತ್ತದೆ. ಅಲ್ಲದೆ ಸೂಕ್ಷ್ಮ ಪ್ಲಾಸ್ಟಿಕ್ ಕಣಗಳು ತಿನ್ನುವ ಆಹಾರ, ಕುಡಿಯುವ ನೀರು ಮತ್ತು ಉಸಿರಾಡುವ ಗಾಳಿಯೊಂದಿಗೆ ಮನುಷ್ಯನ ದೇಹವನ್ನು ಸೇರಿ ಆರೋಗ್ಯದ ಮೇಲೆ ಪರಿಣಾಮವನ್ನುಂಟು ಮಾಡುತ್ತವೆ. ಆದ್ದರಿಂದ ಪ್ಲಾಸ್ಟಿಕ್ ಬಳಕೆಯನ್ನು ನಿಯಂತ್ರಿಸಬೇಕಿದೆ.

ಮನುಷ್ಯ ಪರಿಸರದ ಮೇಲೆ ತೋರಿಸುವ ಕ್ರೌರ್ಯದ ಪ್ರತಿರೂಪಗಳೆ ಅಕಾಲಿಕ ಮಳೆ, ಚಂಡಮಾರುತ, ನದಿಗಳ ಪ್ರವಾಹ, ಸಾಂಕ್ರಾಮಿಕ ಕೊರೊನಾದಂತಹ ಮಹಾಮಾರಿ ರೋಗಗಳು ಉಲ್ಬಣಿಸಲು ಕಾರಣವಾಗಿದೆ. ಕರ್ನಾಟಕ ರಾಜ್ಯ ಕಂಡ ಶತಮಾನದ ಸಂತ, ನಡೆದಾಡುವ ದೇವರೆನಿಸಿಕೊಂಡ ಲಿಂಗೈಕ್ಯ ಶ್ರೀ ಸಿದ್ದೇಶ್ವರ ಮಹಾಸ್ವಾಮಿಗಳು "ನನ್ನನ್ನು ಪ್ರಕೃತಿಯಲ್ಲಿ ಕಾಣಿ" ಎಂಬ ಮಾತನ್ನು ಹೇಳುವ ಮೂಲಕ " ಪ್ರಕೃತಿ ಉಳಿದರೆ ಮಾತ್ರ ಮನುಕುಲ ಉಳಿಯಲು ಸಾಧ್ಯ ಎನ್ನುವ ಸಂದೇಶವನ್ನು ನೀಡಿದ್ದಾರೆ. "ಮರು ಜನ್ಮವೆಂಬುದೊಂದಿದ್ದರೆ ನನ್ನನ್ನು ಮರವನ್ನಾಗಿ ಹುಟ್ಟಿಸು" ಎನ್ನುವುದು ವೃಕ್ಷಮಾತೆ ಸಾಲುಮರದ ತಿಮ್ಮಕ್ಕನ ಆಶೆ. ಮರಗಳೇ ತನ್ನ ಮಕ್ಕಳೆಂದು ಪೋಷಿಸಿದವಳು ತಿಮ್ಮಕ್ಕ, ಆ ತಾಯಿಯ ಆದರ್ಶ ಎಲ್ಲರಿಗೂ ಮಾದರಿಯಾಗಬೇಕು.

ಹೆಚ್ಚು-ಹೆಚ್ಚು ಮರಗಳನ್ನು ಬೆಳೆಸುವುದರ ಮೂಲಕ ಪರಿಸರದ ಸ್ವಾಸ್ಥ್ಯವನ್ನು ಕಾಪಾಡಬೇಕು. ಪರಿಸರಕ್ಕೆ ಸಂಬಂಧಿಸಿದಂತೆ ಜನರಲ್ಲಿ ಜಾಗೃತಿಯನ್ನು ಮೂಡಿಸುವುದು, ಪರಿಸರ ಪ್ರತಿಯೊಂದು ಜೀವಿಗೆ ಎಷ್ಟು ಮುಖ್ಯ ಎನ್ನುವುದನ್ನು ಅರಿವು ಮೂಡಿಸುವುದು ಪರಿಸರ ದಿನಾಚರಣೆಯ ಉದ್ದೇಶವಾಗಿದೆ. ಆದರೆ ವಿಶ್ವ ಪರಿಸರ ದಿನದ ಆಚರಣೆಯು ಕೇವಲ ಒಂದು ದಿನಕ್ಕೆ ಸೀಮಿತವಾಗದೆ ಪ್ರತಿ ದಿನಗಳು ಪರಿಸರ ಸಂರಕ್ಷಣೆಯ ದಿನಗಳಾಗಬೇಕು. ಪ್ರತಿಯೊಬ್ಬ ವ್ಯಕ್ತಿಯು ಪರಿಸರ ಸ್ನೇಹಿ ಜೀವನ ಶೈಲಿಯನ್ನು ಅನುಸರಿಸಬೇಕು. ನಿರ್ಮಲ ಪರಿಸರ ನಿಸರ್ಗದ ಕೊಡುಗೆ, ಆದರೆ ಅದರ ರಕ್ಷಣೆ ನಮ್ಮೆಲ್ಲರ ಹೊಣೆ ಎಂದು ಭಾವಿಸಬೇಕು. ಪರಿಸರದ ಗಂಭೀರ ಸಮಸ್ಯೆಗಳೇನೇ ಇದ್ದರು ಅದಕ್ಕೆ ಪರಿಹಾರ ಒಂದೇ ಮರ ಬೆಳೆಸುವುದು ಮತ್ತು ಪರಿಸರ ಕಾಪಾಡುವುದು.

ಮಳೇ ಇಲ್ಲವೇ?–ಮರಬೆಳೆಸಿ, ವಾಯು ಮಾಲಿನ್ಯವೇ?–ಮರಬೆಳೆಸಿ, ನೀರಿಗೆ ಆಹಾಕಾರವೇ? –ಮರಬೆಳೆಸಿ, ಜಾಗತಿಕ ತಾಪಮಾನ ಹೆಚ್ಚುತ್ತಿದೆಯೇ?–ಮರಬೆಳೆಸಿ, ಹವಾಮಾನ ವೈಪರಿತ್ಯವೇ? – ಮರಬೆಳೆಸಿ, ಜೀವವೈವಿಧ್ಯತೆ ಅಪಾಯದಲ್ಲಿದೆಯೇ?–ಮರಬೆಳೆಸಿ. ಒಟ್ಟಿನಲ್ಲಿ ಈ ಎಲ್ಲಾ ಸಮಸ್ಯೆಗೂ ಮರ ಬೆಳೆಸುವುದೊಂದೇ ಪರಿಹಾರ.

ವೃಕ್ಷೋ ರಕ್ಷತಿ ರಕ್ಷಿತಃ.


Downloaded From:www.kpscvaani.com





# ಸಾಲಿ ಮಾಸ್ತರರ ಪರಿಸರ ಪಾಠ

**ಪರಿಸರ ದಿನಾಚರಣೆಗಾಗಿ ಕೊಪ್ಪಳದ ಶಿಕ್ಷಕರ ಕಲಾಸಂಘದ ಸದಸ್ಯರಿಂದ ವಿನೂತನ ಜಾಥಾ ಕಾರ್ಯಕ್ರಮ.**

ಸೋಮಲಿಂಗಪ್ಪ ಬೆಣ್ಣಿ ಗುಳದಳ್ಳಿ

ಮೈಮೇಲೆ ಹಸಿರು ಟೀಶರ್ಟ್, ತಲೆ ಮೇಲೊಂದು ಹಸಿರು ಟೋಪಿ, ಕೈಯಲ್ಲೊಂದು ಸೈಕಲ್, ಹಿಂದೊಂದು ಟಂಟಂ, ಅದರ ತುಂಬೆಲ್ಲಾ ವಿಧ ವಿಧದ ಸಸಿಗಳು, ಗುದ್ದಲಿ, ಸಲಾಕೆ ಇತ್ಯಾದಿ...

ಇದು ಯಾವುದೋ ಕ್ಯಾಮರಾ ಕಣ್ಣಿಗೆ ಫೋಸು ನೀಡಲು ನಿಂತ ಭಂಗಿಯಲ್ಲ. ಇಲ್ಲೊಂದಿಷ್ಟು ಜನರ ತಂಡ ಹಸಿರು ಟೀಶರ್ಟ್ ತೊಟ್ಟು ಬಿಸಿಲು, ಮಳೆ, ಗಾಳಿ ಎನ್ನದೇ ಸೈಕಲ್ ಏರಿ ದಾರಿಯುದ್ದಕ್ಕೂ ಜನರಿಗೆ ಸಸಿ ವಿತರಿಸುತ್ತ ಪರಿಸರ ಉಳಿವಿಗಾಗಿ ಮನವಿ ಮಾಡುವ ಮೂಲಕ ಜನರಲ್ಲಿ ಪರಿಸರ ಜಾಗೃತಿ ಮೂಡಿಸುವ ವಿನೂತನ ಪ್ರಯತ್ನ ಮಾಡಿ ಜನರಿಂದ ಸೈ ಎನಿಸಿಕೊಂಡಿದ್ದಾರೆ. ಅಂದ ಹಾಗೆ ಇವರು ಯಾವುದೋ ಅರಣ್ಯ ಇಲಾಖೆಯ ಸಿಬ್ಬಂದಿಯಲ್ಲ, ದಾರಿಯುದ್ದಕ್ಕೂ ಸಸಿ ನೆಡಲು ಗುತ್ತಿಗೆ ಪಡೆದ ಕಾರ್ಮಿಕರೂ ಅಲ್ಲ. ಇವರೆಲ್ಲರೂ ಶಾಲೆಯಲ್ಲಿ ಮಕ್ಕಳಿಗೆ ಪಾಠ ಮಾಡುವ ಶಿಕ್ಷಕರು. ತಮ್ಮ ವಿಭಿನ್ನ ಪ್ರವೃತ್ತಿ ಮೂಲಕ ಜನರಿಗೂ ಪರಿಸರ ಪಾಠ ಮಾಡುತಿದ್ದಾರೆ.

ಹೌದು! 'ಹಸಿರೇ ಉಸಿರು' ಎಂಬ ಧ್ಯೇಯವಾಕ್ಯದಡಿಯಲ್ಲಿ ಸಂಘಟಿತಗೊಂಡ ಕೊಪ್ಪಳದ ಶಿಕ್ಷಕರ ಕಲಾವಿದರ ತಂಡದ ಸದಸ್ಯರು ಕೇವಲ ಮಕ್ಕಳಿಗೆ ಪಾಠ ಮಾಡಿ ಮನೆ ಸೇರಿ ನೆಮ್ಮದಿಯಿಂದ ಕಾಲ ಕಳೆದರಾಯಿತು ಎಂಬ ಸಂಕುಚಿತ ವಿಚಾರವನ್ನು ಬದಿಗಿಟ್ಟು ಹಲವು ವರ್ಷಗಳಿಂದ ವಿಭಿನ್ನವಾಗಿ ಸಮಾಜ ಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಂಡು ಬಂದಿದ್ದಾರೆ.

ಅದರಂತೆ ಕಳೆದ ವರ್ಷದ 'ಪರಿಸರ ದಿನ'ದ ಪ್ರಯುಕ್ತ ಕೊಪ್ಪಳದ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿಯಿಂದ ಸುಮಾರು 35 ಕಿಲೋಮೀಟರ್ ದೂರ ಸೈಕಲ್ ಜಾಥಾ ನಡೆಸುತ್ತ ಮಾರ್ಗ ಮಧ್ಯೆ ಹಲವು ಹಳ್ಳಿಗಳನ್ನು ಸಂಪರ್ಕಿಸಿ ಜನರಿಗೆ ಸಸಿ ವಿತರಿಸಿ ಪರಿಸರ ಬೆಳೆಸುವಂತೆ ಮನವಿ ಮಾಡಿಕೊಂಡರು. ಕೊನೆಗೆ ಕವಳಿ ಎಂಬ ಕುಗ್ರಾಮದ ಸರ್ಕಾರಿ ಶಾಲಾ ಆವರಣದಲ್ಲಿ ಖುದ್ದು ತಾವೇ ಸಸಿ ನೆಟ್ಟು ಪರಿಸರ ದಿನಾಚರಣೆಯನ್ನು ಅರ್ಥಪೂರ್ಣವಾಗಿ ಆಚರಿಸಿದರು. ಈ ಮೂಲಕ ಏರುತ್ತಿರುವ ಇಂಧನ ಬೆಲೆಯ ಬಿಸಿಯಿಂದ ಸ್ವಲ್ಪ ತಣ್ಣಗಾಗಲು,





Downloaded From:www.kpscvaani.com






ವಾಯುಮಾಲಿನ್ಯ ನಿಯಂತ್ರಿಸಲು ಹಾಗೂ ದೈಹಿಕ ಆರೋಗ್ಯ ಕಾಪಾಡಿಕೊಳ್ಳಲು ಸೈಕಲ್ ಬಳಕೆ ಒಳ್ಳೆಯದು ಎಂಬ ಸಂದೇಶವನ್ನೂ ನೀಡಿದ್ದಾರೆ.

"ಸೈಕಲ್ ಜಾಥಾಕ್ಕೆ ಸಾರ್ವಜನಿಕರಿಂದ ಉತ್ತಮ ಸ್ಪಂದನೆ ವ್ಯಕ್ತವಾಗಿತ್ತು, ಜನರ ಮನಸಲ್ಲಿ ಕೊಂಚ ಪರಿಸರ ಕಾಳಜಿ ಮೂಡಿದರೆ ಸಾಕು ನಮ್ಮ ಶ್ರಮ ಸಾರ್ಥಕ. ನಾವು ಶಿಕ್ಷಕ ವೃತ್ತಿಯ ಜೊತೆಗೆ ಪರಿಸರ ಉಳಿವಿಗಾಗಿ ಶ್ರಮಿಸುತ್ತೇವೆ" ಎನ್ನುತ್ತಾರೆ ಶಿಕ್ಷಕರ ಕಲಾಸಂಘದ ಅಧ್ಯಕ್ಷ ರಾಮಣ್ಣ ಶ್ಯಾವಿ. "ಇತ್ತೀಚಿನ ಯಾಂತ್ರಿಕ ಬದುಕಿನ್ಯಾಗ ಮೈ ಚಾಳಿ ಬಿಟ್ಟು ದುಡಿಯೋದು ಬಾಳ ಕಡಿಮೆ ಆಗ್ಯೈತಿ. ಇದ್ರಿಂದ ರೋಗ–ರುಜಿನಗಳು ಬಂದು ಬೇಗನೇ ಮುದುಕರ ಹಾಂಗೆ ಕಾಣ್ತೇವಿ. ಇದನ್ನ ತಪ್ಪಿಸಬೇಕಂದ್ರ ಸೈಕಲ್ ಬಳಕೆ ಮಾಡೋದು ಬಾಳ ಒಳ್ಳೇದು" ಅಂತಾರೆ ಸೈಕಲ್ ಜಾಥಾ ಸಂಚಾಲಕರಾಗಿದ್ದ ಪ್ರಾಣೇಶ ಪೂಜಾರ್.

ಅಂದಹಾಗೆ ಈ ಜಾಥಾದಲ್ಲಿ ರಾಮಣ್ಣ ಶ್ಯಾವಿ, ಪ್ರಾಣೇಶ ಪೂಜಾರ್, ದೇವರಾಜ ಮೇಟಿ, ಸುರೇಶ ಕಂಬಳಿ, ಕಲ್ಲೇಶ ಎತ್ತಿನಮನಿ, ಮಂಜುನಾಥ ಪೂಜಾರ್, ಯೋಗನರಸಿಂಹ, ಮೌನೇಶ ಬಡಿಗೇರ, ಬಸವರಾಜ ಜೆಲ್ಲಿ, ಗಂಗಾಧರ, ಶರಣಪ್ಪ ಸೇರಿದಂತೆ ಸುಮಾರು ಇಪ್ಪತ್ತಕ್ಕೂ ಹೆಚ್ಚು ಜನರು ಅಲ್ಲದೇ ಸ್ಕೌಟ್ಸ್ ಮತ್ತು ಗೈಡ್ಸ್ ವಿದ್ಯಾರ್ಥಿಗಳು ಸ್ವಯಂಪ್ರೇರಿತವಾಗಿ ಪಾಲ್ಗೊಂಡಿದ್ದರು. ಇವರ ಈ ಪ್ರಯತ್ನಕ್ಕೆ ಇಲಾಖೆಯ ಅಧಿಕಾರಿಗಳೂ ಸಾಥ್ ನೀಡಿದ್ದರು.


ಒಟ್ಟಾರೆ ಇತ್ತೀಚಿನ ದಿನಗಳಲ್ಲಿ ಆಚರಣೆಗಳೆಂದರೆ ಸಾಮಾಜಿಕ ಜಾಲತಾಣಗಳಲ್ಲಿ ರಂಗುರಂಗಿನ ಶುಭಾಶಯ ಕೋರುವುದಕ್ಕೆ ಹಾಗೂ ಸಭೆ ಸಮಾರಂಭಗಳಲ್ಲಿ ಕೇವಲ ಅದ್ದೂರಿ ಭಾಷಣಗಳಿಗೆ ಸೀಮಿತವಾಗಿವೆ. ಇಂತಹ ಸಂದರ್ಭದಲ್ಲಿ ದೂರದೂರಿನವರೆಗೆ ಸೈಕಲ್ ತುಳಿದು ಸ್ವತಃ ತಾವೇ ಸಸಿ ನೆಟ್ಟು ಸದ್ದಿಲ್ಲದೇ ಪರಿಸರ ಪೋಷಣೆಗೆ ನಿಂತ ಕೊಪ್ಪಳದ ಶಿಕ್ಷಕರ ಕಲಾಸಂಘದ ಸದಸ್ಯರ ಕಾರ್ಯ ನಿಜಕ್ಕೂ ಶ್ಲಾಘನೀಯ ಹಾಗೂ ಮಾದರಿ ಕೂಡ.

**ಈ ಶಿಕ್ಷಕರ ಕಲಾವಿದರ ತಂಡದ ಸದಸ್ಯರು ಕಳೆದ ಒಂದೆರಡು ವರ್ಷಗಳಿಂದ ಸಸಿ ನೆಡುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳುತ್ತಿರುವುದರಿಂದ ಕೊಪ್ಪಳ ಜಿಲ್ಲೆಯ ಕವಳಿ ಗ್ರಾಮದ ಸುತ್ತಮುತ್ತಲಿನಲ್ಲಿ ಹಸಿರು ವಾತಾವರಣ ನಿರ್ಮಾಣವಾಗಿದೆ.**

ಈ ವರ್ಷ ಕೂಡ ಪರಿಸರ ದಿನಾಚರಣೆ ನಿಮಿತ್ತ ಇವರೆಲ್ಲರು ಸೈಕಲ್ ಜಾಥಾ ಜೊತೆಗೆ ಸಸಿ ವಿತರಣೆ ಮತ್ತು ಸಸಿ ನೆಡುವ ಕಾರ್ಯಕ್ರಮಗಳನ್ನು ಕಳೆದ ವರ್ಷಕ್ಕಿಂತಲೂ ವಿನೂತನವಾಗಿ ಆಚರಿಸಲು ಸಿದ್ಧತೆಯನ್ನು ಮಾಡಿಕೊಳ್ಳುತ್ತಿದ್ದಾರೆ. ಇವರಂತೆ ನಾವು ನೀವೆಲ್ಲರೂ ಕೂಡ ಪರಿಸರ ದಿನಾಚರಣೆಯಂದು ಮೊಬೈಲ್‌ನಲ್ಲಿ ಪರಿಸರ ಉಳಿಸಿ ಎಂದು ಸ್ಟೇಟಸ್ ಹಾಕಿಕೊಳ್ಳುವ ಬದಲು ಒಂದು ಸಸಿಯನ್ನು ನೆಟ್ಟು ಪೋಷಿಸೋಣ. ಆ ಮೂಲಕ ಪರಿಸರದಲ್ಲಿ ಹಸಿರನ್ನು ಹೆಚ್ಚಿಸೋಣ.



Downloaded From:www.kpscvaani.com



## ನೇತ್ರದಾನ ಕ್ರಾಂತಿಯ ಹರಿಕಾರ

# ಡಾ. ಕೆ ಭುಜಂಗ ಶೆಟ್ಟಿ


ಡಿ.ಪಿ.ಮುರಳೀಧರ್

**ಹೆ**ಸರಾಂತ ನೇತ್ರ ತಜ್ಞ ಹಾಗೂ ನೇತ್ರದಾನ ಕ್ರಾಂತಿಯ ಹರಿಕಾರ ಡಾ. ಕಟಕೇರಿ ಭುಜಂಗ ಶೆಟ್ಟಿ ಇನ್ನಿಲ್ಲ ಎಂಬ ಸುದ್ದಿ ಮೇ 19 ರಂದು ರಾತ್ರಿ ಹರಿದಾಡಲು ಪ್ರಾರಂಭಿಸಿದೊಡನೆಯೇ ಲಕ್ಷಾಂತರ ಜನರು ತಮ್ಮ ಕಣ್ಣುಗಳಲ್ಲಿ ಕಣ್ಣೀರ ಧಾರೆ ಸುರಿಸಿದರು.

ಅಷ್ಟೊಂದು ಜನರ ಬದುಕಿನಲ್ಲಿ ಈ ಪರಿಯ ಪ್ರಭಾವ ಬೀರಿದ ಡಾ.ಕೆ. ಭುಜಂಗ ಶೆಟ್ಟಿ ಅವರ ಜೀವನದ ಒಂದು ನೋಟ ನೋಡೋಣ ಬನ್ನಿ...

**ಹತ್ತು ವರ್ಷಕ್ಕೆ ಒಂದನೇ ತರಗತಿ !**

ಅಂದಿನ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯ (ಇಂದಿನ ಉಡುಪಿ ಜಿಲ್ಲೆಯ) ಕುಂದಾಪುರ ತಾಲ್ಲೂಕಿನ ಶಂಕರನಾರಾಯಣ ಎಂಬ ಹಳ್ಳಿಯ ರೈತ ಕುಟುಂಬದಲ್ಲಿ ಜನಿಸಿದ ಭುಜಂಗ ಶೆಟ್ಟಿ ಅವರ ತಂದೆ ಅದೇ ಗ್ರಾಮದಲ್ಲಿ ಒಂದು ಸಣ್ಣ ಅಂಗಡಿಯನ್ನು ಇಟ್ಟುಕೊಂಡು ವ್ಯಾಪಾರ ಮಾಡುತ್ತಿದ್ದರು. ಭುಜಂಗ ಶೆಟ್ಟಿ ಅವರ ದೊಡ್ಡಪ್ಪ ಸಣ್ಣ ಪ್ರಮಾಣದ ಗುತ್ತಿಗೆದಾರರಾಗಿದ್ದರು. ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲೂಕಿನ ಜೋಗ್ ಫಾಲ್ಸ್ ಬಳಿಯ ಕಾರ್ಗಲ್ ನಲ್ಲಿ ವಾಸಿಸುತ್ತಿದ್ದ ಭುಜಂಗ ಶೆಟ್ಟಿ ಅವರ ದೊಡ್ಡಪ್ಪ ತಮ್ಮ ವೃತ್ತಿಗೆ ಪೂರಕವಾಗಿ ಲಾರಿಗಳನ್ನು ಖರೀದಿಸಿದಾಗ ಪ್ರತಿ ಬಾರಿಯೂ ತಮ್ಮ ಹುಟ್ಟೂರು ಶಂಕರನಾರಾಯಣ ಗ್ರಾಮಕ್ಕೆ ಬಂದು ಅಲ್ಲಿನ ದೇವಸ್ಥಾನದಲ್ಲಿ ತಮ್ಮ ವಾಹನಗಳಿಗೆ ಪೂಜೆ ಮಾಡಿಸಿಕೊಂಡು ಹೋಗುತ್ತಿದ್ದರು.



ಹಳ್ಳಿಯ ಶಾಲೆಯಲ್ಲಿ ನಾಲ್ಕನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದ ಸಂದರ್ಭ. ಕೂಪ ಮಂಡೂಕದಂತೆ ಇದ್ದ ಭುಜಂಗ ಶೆಟ್ಟಿ ಅವರಿಗೆ ಒಮ್ಮೆ ಹೊರ ಪ್ರಪಂಚ ನೋಡುವ ಆಸೆಯಾಯಿತು. ಒಂದು ಸಣ್ಣ ಚೀಲದಲ್ಲಿ ಮೂರು ಜೊತೆ ಬಟ್ಟೆ ಇಟ್ಟುಕೊಂಡು ತಂದೆಯ ಅಂಗಡಿಯಲ್ಲಿ ಕುಳಿತು, ದೊಡ್ಡಪ್ಪನ ಆಗಮನಕ್ಕಾಗಿ ಕಾಯುತ್ತಿದ್ದರು. ಪ್ರತಿದಿನವೂ ಅಂಗಡಿಯಲ್ಲೇ ಲಂಗರು ಹಾಕಿ ದೊಡ್ಡಪ್ಪನ ಆಗಮನದ ನಿರೀಕ್ಷೆಯಲ್ಲಿದ್ದ ಭುಜಂಗ ಶೆಟ್ಟಿ ಅವರಿಗೆ ಎಂಟನೇ ದಿನದಂದು ಪೂಜೆಗಾಗಿ



Downloaded From:www.kpscvaani.com

> ದೃಷ್ಟಿ ಪಡೆದವರಿಗೆ ಅನಗತ್ಯವಾಗಿ ತೊಂದರೆಯಾಗುತ್ತದೆ ಎಂಬ ಕಾರಣಕ್ಕೆ ವೈದ್ಯರು ಯಾವುದೇ ಕಾರಣಕ್ಕೂ ನೇತ್ರದಾನ ಮಾಡಿದ ಕುಟುಂಬದ ಸದಸ್ಯರಿಗೆ ಯಾವುದೇ ಕಾರಣಕ್ಕೂ ಯಾರಿಗೆ ದೃಷ್ಟಿಯನ್ನು ನೀಡಲಾಗಿದೆ ಎಂಬುದನ್ನು ತಿಳಿಸುವುದಿಲ್ಲ. ಈ ಗೌಪ್ಯತೆಯನ್ನು ಪತ್ರಿ ವೈದ್ಯರು ಕಾಪಾಡಿಕೊಂಡು ಬರುತ್ತಾರೆ.



ಆಗಮಿಸಿದ ತನ್ನ ದೊಡ್ಡಪ್ಪನ ಹೊಸ ಲಾರಿಯನ್ನು ಕಂಡು ಎಲ್ಲಿಲ್ಲದ ಸಂತಸವಾಯಿತು. ವಾಹನದ ಪೂಜೆ ಮುಗಿಸಿಕೊಂಡು ತನ್ನ ದೊಡ್ಡಪ್ಪ ಲಾರಿ ಹತ್ತುವ ಮುನ್ನವೇ ಬಾಲಕ ಭುಜಂಗ ಶೆಟ್ಟಿ ವಾಹನ ಏರಿ ಕುಳಿತು ಬಿಟ್ಟಿದ್ದು ತಂದೆ-ತಾಯಿಗೆ ಅಸಮಾಧಾನ ತಂದಿತ್ತಾದರೂ, "ಮಗು ತನ್ನೊಡನೆ ಬರಲಿ" ಎಂಬ ದೊಡ್ಡಪ್ಪನ ಮಾತು ಮೀರಲು ಯಾರಿಗೂ ಸಾಧ್ಯವಾಗಲಿಲ್ಲ.

ಕಾರ್ಗಲ್‌ನಲ್ಲಿ ದೊಡ್ಡಪ್ಪನ ಮಕ್ಕಳೊಂದಿಗೆ ಆಟವಾಡುತ್ತಾ ಕೆಲ ದಿನಗಳು ಕಳೆದ ಭುಜಂಗ ಶೆಟ್ಟಿ ಅವರಿಗೆ ದೊಡ್ಡಪ್ಪ ತಮ್ಮ ಗೆಳೆಯನೊಂದಿಗೆ ತಿರುಪತಿಗೆ ಹೋಗುವಾಗ ತಾವೂ ಜೊತೆಗೂಡುವ ಅವಕಾಶ ಲಭಿಸಿತು. ತಿರುಪತಿಗೆ ತೆರಳುವ ಮಾರ್ಗ ಮಧ್ಯದಲ್ಲಿ ಬೆಂಗಳೂರಿನ ಉಡ್‌ಲ್ಯಾಂಡ್ಸ್ ಹೋಟೆಲ್‌ನಲ್ಲಿ ವಾಸ್ತವ್ಯ ಹೂಡಿದ್ದಾಗ ದೊಡ್ಡಪ್ಪನ ಗೆಳೆಯ ತನ್ನ ಮಗನಿಗೆ ಬೆಂಗಳೂರಿನ ಬಾಲ್ಡ್‌ವಿನ್ ಬಾಲಕರ ಶಾಲೆಯಲ್ಲಿ ಪ್ರವೇಶ ದೊರಕಿಸಿಕೊಡಲು ಅಲ್ಲಿನ ಪ್ರಾಂಶುಪಾಲರ ಜೊತೆ ಮಾತುಕತೆ ನಡೆಸುತ್ತಿದ್ದಾಗ, "ನಮ್ಮ ಹುಡುಗನಿಗೂ ಪ್ರವೇಶ ಕೊಡಿಸಿ" ಎಂಬ ಮನವಿ ಮಾಡಿ, ಇಂಗ್ಲೀಷ್ ಭಾಷೆಯ ಗಂಧ-ಗಾಳಿ ಗೊತ್ತಿಲ್ಲದ ಹಳ್ಳಿ ಹುಡುಗ ಭುಜಂಗ ಶೆಟ್ಟಿ ಅವರಿಗೆ ಆಂಗ್ಲ ಮಾಧ್ಯಮದ ಪ್ರತಿಷ್ಠಿತ ಶಾಲೆಯಲ್ಲಿ ಪ್ರವೇಶ ದೊರಕಿಸಿಕೊಟ್ಟರು.

ಹಳ್ಳಿಯಲ್ಲಿಯೇ ಕನ್ನಡ ಭಾಷಾ ಮಾಧ್ಯಮದಲ್ಲಿ ವ್ಯಾಸಂಗ ಮುಂದುವರೆಸಿದ್ದರೆ ಐದನೇ ತರಗತಿಗೆ ಪ್ರವೇಶ ಪಡೆಯುತ್ತಿದ್ದರು. ಆದರೆ, ಹಳ್ಳಿಯ ಹಿನ್ನೆಲೆಯ ಹತ್ತು ವರ್ಷದ ಈ ಹುಡುಗನಿಗೆ ಆಂಗ್ಲ ಭಾಷಾ ಮಾಧ್ಯಮದ ಈ ಶಾಲೆಯಲ್ಲಿ ಪ್ರವೇಶ ದೊರೆತದ್ದು ಒಂದನೇ ತರಗತಿಗೆ. ಆ ಕಾಲದಲ್ಲಿ ಎಲ್ ಕೆ ಜಿ, ಯು ಕೆ ಜಿ ಪರಿಕಲ್ಪನೆ ಇನ್ನೂ ಚಿಗುರೊಡೆದಿರಲಿಲ್ಲ. ಇಲ್ಲವಾದಲ್ಲಿ ತಮಗೆ ಎಲ್ ಕೆ ಜಿ ತರಗತಿಗೇ ಪ್ರವೇಶ ಕಲ್ಪಿಸುತ್ತಿದ್ದರೇನೋ..... ಎಂದು ಡಾ. ಭುಜಂಗ ಶೆಟ್ಟಿ ಅವರು ಹೇಳುತ್ತಿದ್ದರು.

ಮನೆ ಬಿಟ್ಟು ಎಂದೂ ಹೊರಗಿನ ಜಗತ್ತನ್ನೇ ಕಾಣದ ಭುಜಂಗ ಶೆಟ್ಟಿ ಅವರಿಗೆ ವಸತಿ ನಿಲಯದ ಬದುಕು ಬರ್ಬರ ಎನಿಸಿತು. ದೊಡ್ಡಪ್ಪ ತಮ್ಮನ್ನು ಕಾಣಲು ಬಂದಾಗ ಅವರ ಕಾಲನ್ನಾದರೂ ಹಿಡಿದು ಮತ್ತೆ ಹಳ್ಳಿಗೆ ಮರಳಬೇಕು ಎಂದು ನಿಶ್ಚಯಿಸಿದ್ದ ಭುಜಂಗ ಶೆಟ್ಟಿ ಅವರು ಪ್ರತಿದಿನವೂ ಅವಕಾಶ ದೊರೆತಾಗಲೆಲ್ಲಾ ವಸತಿ ನಿಲಯದ ಪ್ರವೇಶ ದ್ವಾರದ ಬಳಿ ಬಂದು ನಿಲ್ಲುತ್ತಿದ್ದರು. ಆದರೆ, ದೊಡ್ಡಪ್ಪ ಮಾತ್ರ ಬರಲೇ ಇಲ್ಲ. ಹೀಗಾಗಿ, ತಮ್ಮ ವ್ಯಾಸಂಗ ಬೆಂಗಳೂರಿನಲ್ಲಿ ಮುಂದುವರೆಯಿತು ಎಂದು ಭುಜಂಗ ಶೆಟ್ಟಿ ಆಗಾಗ ಸ್ಮರಿಸುತ್ತಿದ್ದರು.

ಕ್ರಿಕೆಟ್, ಫುಟ್‌ಬಾಲ್, ಹಾಕಿ ಹೀಗೆ ಎಲ್ಲಾ ಕ್ರೀಡೆಗಳಲ್ಲಿ ಪಠ್ಯ ಮತ್ತು ಪಠ್ಯೇತರ ಚಟುವಟಿಕೆಗಳಲ್ಲಿ ಮುಂಚೂಣಿಯಲ್ಲಿದ್ದ ಭುಜಂಗ ಶೆಟ್ಟಿ ಅವರು ನಾಯಕತ್ವ ಗುಣಗಳನ್ನು ಬೆಳೆಸಿಕೊಂಡು ತರಗತಿ ನಾಯಕ ಕೂಡಾ ಆದರು. ಪ್ರತಿ ಕ್ಷೇತ್ರಕ್ಕೂ ಸೇರಿ ಇದ್ದ ಎಂಟು ಪದಕಗಳಲ್ಲಿ ಒಮ್ಮೆಲೇ ಏಳು ಪದಕಗಳನ್ನು ತನ್ನದಾಗಿಸಿಕೊಂಡದ್ದು 150 ವರ್ಷಗಳ ಇತಿಹಾಸವಿರುವ ಈ ಶಾಲೆಯಲ್ಲಿ ಇಂದಿಗೂ ಒಂದು ದಾಖಲೆಯೇ.


ಸೇಂಟ್ ಜೋಸೆಫ್ ಮಹಾವಿದ್ಯಾಲಯದಲ್ಲಿ ಪದವಿ ಪೂರ್ವ ತರಗತಿ, ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯದಲ್ಲಿ ಎಂ.ಬಿ.ಬಿ.ಎಸ್, ಮಂಗಳೂರಿನಲ್ಲಿ ಒಂದು ವರ್ಷ ವೈದ್ಯನಾಗಿ ತರಬೇತಿ.

ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯದಲ್ಲಿ ಎಂ ಎಸ್ ಆಪ್ತಾಲ್ಮೋಲಜಿ, ಮಿಂಟೋ ಕಣ್ಣಾಸ್ಪತ್ರೆಯಲ್ಲಿ ಆರಂಭಿಕ ಸೇವೆಯ ನಂತರ ಬ್ಯಾಂಕ್‌ನಿಂದ ಸಾಲ ಪಡೆದು 1982 ರ ಡಿಸೆಂಬರ್‌ನಲ್ಲಿ ಬೆಂಗಳೂರಿನ ಶ್ರೀರಾಮಪುರ ಬಡಾವಣೆಯ ದೇವಯ್ಯ ಪಾರ್ಕ್ ಬಳಿ ಒಂದು ಸಣ್ಣ ಚಿಕಿತ್ಸಾಲಯ ಪ್ರಾರಂಭ. ಕೇವಲ ಎರಡು ಕೊಠಡಿಯ ನೇತ್ರ ಚಿಕಿತ್ಸಾಲಯ. ಬೆಳಿಗ್ಗೆ 9-00 ಗಂಟೆಯಿಂದ ಮಧ್ಯಾಹ್ನ 1-00 ಗಂಟೆಯವರೆಗೆ ಹಾಗೂ ಸಂಜೆ 4-00 ಗಂಟೆಯಿಂದ ರಾತ್ರಿ 8-00 ಗಂಟೆಯವರೆಗೆ ಎರಡು ಪಾಳಿಯಲ್ಲಿ ಕಾರ್ಯ ನಿರ್ವಹಣೆ. ನೇತ್ರ ಚಿಕಿತ್ಸಾಲಯ ಕಟ್ಟಡದ ಮೇಲೆಯೇ ಮನೆ. ಮಧ್ಯಾಹ್ನ 1-00 ಗಂಟೆಯಿಂದ 4-00 ಗಂಟೆಯವರೆಗೆ ಬಿಡುವು. ಮನೆಯಲ್ಲಿಯೇ ವಿಶ್ರಾಂತಿ. ಇದು ಡಾ. ಭುಜಂಗ ಶೆಟ್ಟಿ ಅವರ ದೈನಂದಿನ ಕಾರ್ಯ ಚಟುವಟಿಕೆಯಾಗಿತ್ತು.

**ಜೀವನದಲ್ಲಿ ಹೊಸ ತಿರುವು !**

ಕೆಲವೇ ವರ್ಷಗಳಲ್ಲಿ ಬಡವರ ವೈದ್ಯ


Downloaded From:www.kpscvaani.com



(ಪೂರ್ ಮ್ಯಾನ್ಸ್ ಡಾಕ್ಟರ್) ಎಂದೇ ಜನಪ್ರಿಯತೆ ಗಳಿಸಿದ್ದ ಡಾ. ಭುಜಂಗ ಶೆಟ್ಟಿ ಅವರು ಒಂದು ದಿನ ಮಧ್ಯಾಹ್ನ ಮನೆಯಲ್ಲಿ ಊಟ ಮಾಡಿ ವಿಶ್ರಾಂತಿ ಪಡೆಯುತ್ತಿದ್ದಾಗ ಯಾರೋ ಬಾಗಿಲು ತಟ್ಟುತ್ತಾರೆ. ಬಿಡುವಿನ ವೇಳೆಯಲ್ಲೇ ಓರ್ವ ಗಣ್ಯ ವ್ಯಕ್ತಿಗೆ ನೇತ್ರ ತಪಾಸಣೆ ಮಾಡ ಬೇಕೆಂದು ವಿನಂತಿಸುತ್ತಾರೆ.

ಡಾ.ಭುಜಂಗ ಶೆಟ್ಟಿ ಅವರು "ನೇತ್ರ ತಪಾಸಣೆಗೆ ಒಳಪಡಬೇಕಾದವರನ್ನು ಸಂಜೆ 4-00 ಗಂಟೆಯ ನಂತರ ಕರೆತನ್ನಿ" ಎಂದಾಗ, "ಜನ ಸೇರುತ್ತಾರೆ, ಅನಗತ್ಯವಾಗಿ ಇತರರಿಗೆ ತೊಂದರೆಯಾಗುತ್ತದೆ" ಎಂದು ಆ ವ್ಯಕ್ತಿ ಹೇಳುತ್ತಾರೆ. ಆ ಗಣ್ಯ ವ್ಯಕ್ತಿ ಯಾರು ? ಎಂದು ಡಾ. ಭುಜಂಗ ಶೆಟ್ಟಿ ಅವರು ಪ್ರಶ್ನಿಸಿದಾಗ, ಆ ವ್ಯಕ್ತಿಯಿಂದ ಬಂದ ಉತ್ತರ ಅವರನ್ನು ಪುಳಕಗೊಳಿಸುತ್ತದೆ. ಕೂಡಲೇ ಮನೆಯ ಕೆಳಗೆ ಇಳಿದು ನೇತ್ರ ಚಿಕಿತ್ಸಾಲಯದ ಬಾಗಿಲು ತೆರೆಯುತ್ತಾರೆ. ಕೆಲವೇ ನಿಮಿಷಗಳಲ್ಲಿ ನಟಸಾರ್ವಭೌಮ ಡಾ. ರಾಜ್ ಕುಮಾರ್ ಅವರು ನೇತ್ರ ತಪಾಸಣೆಗೆ ಒಳಪಡಲು ಅಲ್ಲಿಗೆ ಆಗಮಿಸುತ್ತಾರೆ. ನೇತ್ರ ತಪಾಸಣೆಯ ನಂತರ ಹೊಸ ಕನ್ನಡಕವನ್ನು ಪಡೆದು ನಗುನಗುತ್ತಾ ಅಲ್ಲಿಂದ ತೆರಳುತ್ತಾರೆ. ಅಂದಿನಿಂದ ಇಬ್ಬರಲ್ಲೂ ಪ್ರೀತಿ ಮತ್ತು ವಿಶ್ವಾಸದ ಮೊಳಕೆಯೊಡೆಯುತ್ತದೆ.

ಚಿಕಿತ್ಸಾಲಯಕ್ಕೆ ಬರುವ ರೋಗಿಗಳ ಸಂಖ್ಯೆ ಹೆಚ್ಚಾದಂತೆ, ಬೆಂಗಳೂರಿನ ರಾಜಾಜಿನಗರದ ಪಶ್ಚಿಮ ಕಾರ್ಡ್ ರಸ್ತೆಗೆ ಡಾ. ಭುಜಂಗ ಶೆಟ್ಟಿ ಅವರ ನೇತ್ರ ಚಿಕಿತ್ಸಾಲಯ ಸ್ಥಳಾಂತರಗೊಳ್ಳುತ್ತದೆ. ನಾರಾಯಣ ನೇತ್ರಾಲಯ ಹೆಸರಿನ ಈ ದೃಷ್ಟಿ ಧಾಮಕ್ಕೆ ಡಾ. ರಾಜ್ ಕುಮಾರ್ ಅವರ ಸಹೋದರಿ ಕಣ್ಣಿನ ಪೊರೆ ಶಸ್ತ್ರ ಚಿಕಿತ್ಸೆಗೆ ದಾಖಲಾಗುತ್ತಾರೆ. ಶಸ್ತ್ರ ಚಿಕಿತ್ಸೆಯ ಮರು ದಿನ ಸಹೋದರಿಯ ಕಾಣಲು ಡಾ. ರಾಜ್ ಕುಮಾರ್ ಆಗಮಿಸುತ್ತಾರೆ. ಆ ದಿನ ಅವರು ಡಾ ರಾಜ್ ಕುಮಾರ್ ಅವರೊಂದಿಗೆ ನಡೆಸಿದ ಅರ್ಧ ಗಂಟೆಯ ಮಾತುಕತೆ ಇಡೀ ಭಾರತದಲ್ಲಿಯೇ ನೇತ್ರದಾನದ ಪರಿಕಲ್ಪನೆಗೆ ಹೊಸ ಜೀವ ನೀಡುತ್ತದೆ. ಅಲ್ಲದೆ, ನೇತ್ರದಾನದ ಕ್ರಾಂತಿಗೆ ನಾಂದಿಯಾಗುತ್ತದೆ.


**ನೇತ್ರದಾನ : ಅಂದು ಹೇಗಿತ್ತು ? ಈಗ ಹೇಗೆ ?**

ಈ ಜಗತ್ತಿನ ಪುಟ್ಟ ದೇಶಗಳಲ್ಲೊಂದಾದ ಸಿಲೋನ್‌ನಲ್ಲಿ (ಶ್ರೀಲಂಕಾದಲ್ಲಿ) ಹೊರತುಪಡಿಸಿದರೆ ವಿಶ್ವದ ಯಾವುದೇ ರಾಷ್ಟ್ರಗಳಲ್ಲಿ ನೇತ್ರದಾನದ ಪರಿಕಲ್ಪನೆಯೇ ಅಸ್ತಿತ್ವಕ್ಕೆ ಬಂದಿರಲಿಲ್ಲ. ಬೌದ್ಧ ಧರ್ಮದಲ್ಲಿ ವ್ಯಕ್ತಿ ಸತ್ತ ಮೇಲೆ ಅಂಗಾಂಗ ದಾನ ಮಾಡಿದರೆ, ಸತ್ತ ವ್ಯಕ್ತಿಗೆ ಮೋಕ್ಷ ದೊರೆಯುತ್ತದೆ ಎಂಬ ನಂಬಿಕೆ ಇದೆ.

ಬೌದ್ಧರೇ ಬಹು ಸಂಖ್ಯಾತರಾಗಿರುವ ಶ್ರೀಲಂಕಾದಲ್ಲಿ ನೇತ್ರದಾನ ಉದಾರವಾಗಿ ನಡೆಯುತ್ತಿತ್ತು. ನೇತ್ರದಾನದ ಪ್ರಮಾಣ ಎಷ್ಟಿತ್ತು ಎಂದು ಶ್ರೀಲಂಕಾದಲ್ಲಿನ ಬೇಡಿಕೆ ಪೂರೈಸಿದ ನಂತರವೂ ಅತ್ಯಧಿಕ ಪ್ರಮಾಣದಲ್ಲಿ ದಾನಿಗಳ ಕಣ್ಣುಗಳು ಉಳಿಯುತ್ತಿತ್ತು. ಆದ ಕಾರಣ, ಶ್ರೀಲಂಕಾದಿಂದ ಜಗತ್ತಿನ ಒಂದು ನೂರು ರಾಷ್ಟ್ರಗಳಿಗೆ ಕಣ್ಣುಗಳು ಪೂರೈಕೆಯಾಗುತ್ತಿದ್ದವು.

ನೇತ್ರದಾನ ಎಂಬುದು ವ್ಯಕ್ತಿ ಸತ್ತ ನಂತರವೇ ಹೊರತು ಜೀವಂತವಾಗಿರುವಾಗ ಅಲ್ಲ. ನೇತ್ರದಾನಕ್ಕೆ ಗಂಡು, ಹೆಣ್ಣು, ಜಾತಿ, ಮತ, ಧರ್ಮ ಅಥವಾ ವಯಸ್ಸು ಅಡ್ಡ ಬರುವುದಿಲ್ಲ. ರಕ್ತದೊತ್ತಡ ಇದ್ದವರೂ, ಮಧುಮೇಹಿಗಳಾಗಿದ್ದರೂ ಹೃದ್ರೋಗಿಗಳೂ ನೇತ್ರದಾನ ಮಾಡಲು ಅರ್ಹರು. ಕಣ್ಣುಪೊರೆ ಶಸ್ತ್ರಚಿಕಿತ್ಸೆಗೆ ಒಳಗಾದವರೂ, ಕನ್ನಡಕ ಧರಿಸುತ್ತಿದ್ದವರ ಕಣ್ಣುಗಳನ್ನೂ ಕೂಡಾ ನೇತ್ರದಾನ ಮಾಡಬಹುದು.

ನೇತ್ರದಾನ ಎಂಬುದು ಉಚಿತ ಪ್ರಕ್ರಿಯೆ. ದಾನಿಗಳಲ್ಲಿ ಪ್ರತಿಫಲಾಪೇಕ್ಷೆ ಇರಕೂಡದು. ಅಂತೆಯೇ, ಅನಗತ್ಯ ಸಂಬಂಧ ಮತ್ತು ಬಾಂಧವ್ಯಗಳನ್ನು ಬೆಳೆಸಿಕೊಂಡು ಉಂಟಾಗಬಹುದಾದ ನೋವು ಮತ್ತು ದುಃಖವನ್ನು ತಡೆಗಟ್ಟಲು ಯಾರ ಕಣ್ಣುಗಳನ್ನು ಯಾರಿಗೆ ಅಳವಡಿಸಲಾಗಿದೆ ಎಂಬುದನ್ನು ವೈದ್ಯರು ಗೌಪ್ಯವಾಗಿಡುತ್ತಾರೆ ಎಂಬ ಅಂಶವನ್ನು ಡಾ.ಭುಜಂಗ ಶೆಟ್ಟಿ ಅವರು ಗಮನಕ್ಕೆ ತಂದಾಗ, ಡಾ ರಾಜ್ ಕುಮಾರ್ ಅವರು ಸ್ಥಳದಲ್ಲಿಯೇ ತಮ್ಮ ಕಣ್ಣುಗಳನ್ನು ನೇತ್ರದಾನ ಮಾಡಲು ಸಮ್ಮತಿ ಸೂಚಿಸಿದರು. ಇದು ಡಾ. ರಾಜ್ ಕುಮಾರ್ ನೇತ್ರ ಭಂಡಾರ ಸ್ಥಾಪನೆಗೆ ಪ್ರೇರಕವಾಯಿತು.





Downloaded From:www.kpscvaani.com

**ಡಾ. ರಾಜ್ ಕುಮಾರ್ ಐ ಬ್ಯಾಂಕ್**

ನಂತರ, 1994 ರಲ್ಲಿ ನಾರಾಯಣ ನೇತ್ರಾಲಯದ ಆವರಣದಲ್ಲಿಯೇ ಡಾ. ರಾಜ್ ಕುಮಾರ್ ನೇತ್ರ ಭಂಡಾರ (ಐ ಬ್ಯಾಂಕ್) ಸ್ಥಾಪಿಸಲಾಯಿತು. ನೇತ್ರ ಭಂಡಾರದ ಉದ್ಘಾಟನೆಗೆ ಆಗಮಿಸಿದ್ದ ಡಾ. ರಾಜ್ ಕುಮಾರ್ ಅವರು ತಾವು ನೇತ್ರದಾನ ಮಾಡುವುದಾಗಿ ವಾಗ್ದಾನ (ಪ್ಲೆಡ್ಜ್) ಮಾಡಿದರಲ್ಲದೆ, ತಮ್ಮ ಮಡದಿ ಹಾಗೂ ತಮ್ಮ ಮಕ್ಕಳೂ ನೇತ್ರದಾನ ಮಾಡುತ್ತಾರೆ ಎಂದು ಘೋಷಿಸಿದರು.

ಕೆಲವೇ ತಿಂಗಳಲ್ಲಿ ಡಾ. ರಾಜ್ ಕುಮಾರ್ ಅವರ ಘೋಷಣೆಯಿಂದ ಪ್ರೇರಣೆ ಪಡೆದ ಸಾವಿರಾರು ಮಂದಿ ನೇತ್ರದಾನದ ವಾಗ್ದಾನ ಮಾಡಿದ್ದಾರೆ. ಡಾ. ರಾಜ್ ಕುಮಾರ್, ಅವರ ಧರ್ಮ ಪತ್ನಿ ಡಾ. ಪಾರ್ವತಮ್ಮ ರಾಜ್ ಕುಮಾರ್ ಹಾಗೂ ಅವರ ಪುತ್ರ ಡಾ. ಪುನೀತ್ ರಾಜ್ ಕುಮಾರ್ ಮೃತರಾದಾಗ ದೊಡ್ಡಮನೆಯ ಕುಟುಂಬ ನೇತ್ರದಾನ ಮಾಡಿ ದೊಡ್ಡತನ ಮೆರೆದಿದೆ. ಈ ಮೂವರ ಕಣ್ಣುಗಳನ್ನೂ ಸ್ವತಃ ಡಾ. ಭುಜಂಗ ಶೆಟ್ಟಿ ಅವರೇ ಸಂಗ್ರಹಿಸಿದ್ದಾರೆ. ಪುನೀತ್ ಅವರ ಕಣ್ಣುಗಳನ್ನು ಇಬ್ಬರ ಬದಲಾಗಿ ಹೊಸ ತಂತ್ರಜ್ಞಾನದ ಅಳವಡಿಕೆಯ ಮೂಲಕ ನಾಲ್ವರಿಗೆ ಜೋಡಿಸಿ ನಾರಾಯಣ ನೇತ್ರಾಲಯ ಅಕ್ಷಿಲೋಕದಲ್ಲಿ ನೂತನ ದಾಖಲೆ ಸ್ಥಾಪಿಸಿದೆ.

ತಮ್ಮ ತಂದೆ ಮೃತರಾದಾಗ, ತಮ್ಮ ಸಹೋದರ ಸಹೋದರಿಯರಿಗೆ ಮನವೊಲಿಸಿ ನೇತ್ರದಾನ ಮಾಡಿದ ಕೀರ್ತಿ ಡಾ. ಭುಜಂಗ ಶೆಟ್ಟಿ ಅವರದು. ಅಷ್ಟೇ ಅಲ್ಲ! ಡಾ ಭುಜಂಗ ಶೆಟ್ಟಿ ಅವರು ಮೃತರಾದಾಗ, ಐವತ್ತು ಸಾವಿರಕ್ಕೂ ಹೆಚ್ಚು ಮಂದಿಗೆ ದೃಷ್ಟಿಕೊಟ್ಟ ಲಕ್ಷಾಂತರ ಕುಟುಂಬಗಳಿಗೆ ಬೆಳಕು ಕೊಟ್ಟ ಆ ಪುಣ್ಯಾತ್ಮನ ಕಣ್ಣುಗಳನ್ನೂ ಅವರ ಕುಟುಂಬ ದಾನ ಮಾಡಿದೆ.

ವ್ಯಕ್ತಿ ಸತ್ತ ಆರು ಗಂಟೆಗಳೊಳಗೆ ನೇತ್ರದಾನ ಮಾಡಬೇಕು. ಸತ್ತ ವ್ಯಕ್ತಿಯ ಕಣ್ಣುಗಳು ತೆರೆದಿದ್ದರೆ, ಅದನ್ನು ಕೂಡಲೇ ಮುಚ್ಚಬೇಕು. ಕಣ್ಣುಗಳ ಮೇಲೆ ಒದ್ದೆ ಬಟ್ಟೆ ಇಡುವುದು ಸೂಕ್ತ, ಪಾರ್ಥಿವ ಶರೀರ ಇರಿಸಿರುವ ಸ್ಥಳದಲ್ಲಿ ಫ್ಯಾನ್ ಮತ್ತು ಏರ್ ಕಂಡಿಷನ್ ವ್ಯವಸ್ಥೆ ಇದ್ದಲ್ಲಿ, ಕಣ್ಣಿನಲ್ಲಿನ ತೇವಾಂಶ ಒಣಗಿಹೋಗುವ ಸಾಧ್ಯತೆ ಇರುತ್ತದೆ. ಆದಕಾರಣ, ಅವುಗಳನ್ನು ಬಂದ್ ಮಾಡಬೇಕು.

ವ್ಯಕ್ತಿ ಮರಣ ಹೊಂದಿದ ಕೂಡಲೇ ಸಮೀಪದ ನೇತ್ರ ಭಂಡಾರಕ್ಕೆ ದೂರವಾಣಿ ಕರೆ ಮಾಡಿ ತಿಳಿಸಬೇಕು. ಶವವನ್ನು ಆಸ್ಪತ್ರೆಗೆ ತೆಗೆದುಕೊಂಡು ಹೋಗುವ ಅವಶ್ಯಕತೆ ಇಲ್ಲ. ನೇತ್ರ ಭಂಡಾರದ ತಂತ್ರಜ್ಞರೇ ಮನೆಗೆ ಬಂದು ಕಣ್ಣುಗಳನ್ನು ಸಂಗ್ರಹಿಸಿಕೊಂಡು ಹೋಗುತ್ತಾರೆ. ವಾಗ್ದಾನ ಪತ್ರ ಸಹಿ ಮಾಡಿರುವವರು ಸತ್ತಾಗ ಅವರ ನೇತ್ರದಾನಕ್ಕೆ ಅವಕಾಶ ಎಂದೇನಲ್ಲ. ವಾಗ್ದಾನ ಪತ್ರ ಸಹಿಮಾಡದವರು ಸತ್ತಾಗಲೂ, ಅವರ ಕುಟುಂಬದವರು ಸಮಾಲೋಚಿಸಿ ನಿರ್ಧರಿಸಿ ತಿಳಿಸಿದರೂ ನೇತ್ರದಾನಕ್ಕೆ ಅವಕಾಶವಿದೆ.

ಕಣ್ಣುಗಳನ್ನು ಹೊರ ತೆಗೆದಾದ ಮುಖ ಕುರೂಪಗೊಳ್ಳುತ್ತದೆ ಅಥವಾ ವಿರೂಪಗೊಳ್ಳುತ್ತದೆ ಎಂಬ ಮಾತು ಸುಳ್ಳು. ದೇಹ ಮಣ್ಣಾಗುವ ಮುನ್ನ, ದೇಹ ಸುಟ್ಟು ಭಸ್ಮವಾಗುವ ಮುನ್ನ, ನೇತ್ರದಾನ ಮಾಡಿದರೆ, ಕನಿಷ್ಠ ಇಬ್ಬರಿಗೆ ದೃಷ್ಟಿ ಲಭಿಸುತ್ತದೆ. ಎರಡು ಜೀವಿಗಳ ಬಾಳಿಗೆ ಬೆಳಕು ದೊರೆಯುತ್ತದೆ.

**ಆನ್ ಲೈನ್ ವ್ಯವಸ್ಥೆ**

ನೇತ್ರದಾನ ಮಾಡಲು ಇಚ್ಚಿಸುವವರು ಮೊಬೈಲ್ ಸಂಖ್ಯೆ 88840 18800 ಕರೆ ಮಾಡಬೇಕಿಲ್ಲ. ಮಿಸ್ಡ್ ಕಾಲ್ ಕೊಟ್ಟರೂ ಸಾಕು. ತಮ್ಮ ಮೊಬೈಲ್‌ಗೆ ನೇತ್ರದಾನ ಮಾಡಲು ಸಿದ್ಧ ಎನ್ನುವ ವಾಗ್ದಾನದ ಅರ್ಜಿ ನಮೂನೆಯನ್ನು ಕಳುಹಿಸಲಾಗುತ್ತದೆ. ಅದನ್ನು ಭರ್ತಿ ಮಾಡಿ ಕಳುಹಿಸಿದರೆ, ನೇತ್ರದಾನ ವಾಗ್ದಾನ ಪ್ರಮಾಣ ಪತ್ರವನ್ನು ಕಳುಹಿಸಲಾಗುತ್ತದೆ. ತಾವು ಇದ್ದಲೇ ಅದನ್ನು ಡೌನ್ ಲೋಡ್ ಮಾಡಿಕೊಳ್ಳಬಹುದು.

**ಮರೆಯದಿರಿ**

ತಾವು ಮೃತರಾದಾಗ, ನೇತ್ರ ಭಂಡಾರಕ್ಕೆ ಕೂಡಲೇ ತಿಳಿಯುವುದಿಲ್ಲ. ತಮ್ಮ ವಾಗ್ದಾನ ಪ್ರಮಾಣ ಪತ್ರದ ಆಧಾರದ ಮೇರೆಗೆ ಕಣ್ಣುಗಳನ್ನು ಸಂಗ್ರಹಿಸಲು ನೇತ್ರ ಭಂಡಾರದ ತಂತ್ರಜ್ಞರು ಪಾರ್ಥಿವ ಶರೀರ ಇರುವಲ್ಲಿಗೆ ಬರಲು ಸಾಧ್ಯವಿಲ್ಲ. ಇದರಿಂದ ತಮ್ಮ ಇಚ್ಛೆ ಈಡೇರುವುದಿಲ್ಲ. ಆದಕಾರಣ, ತಾವು ನೇತ್ರದಾನ ವಾಗ್ದಾನ ಮಾಡಿದರೆ, ತಮ್ಮ ಹತ್ತಿರದ ಬಂಧು-ಮಿತ್ರರಿಗೆ ತಿಳಿಸಿ. ಅಲ್ಲದೇ, ತಾವು ಇಹಲೋಕ ತ್ಯಜಿಸಿದಾಗ ತಮ್ಮ ಅಗಲಿಕೆಯ ಮಾಹಿತಿಯನ್ನು ನೇತ್ರ ಭಂಡಾರದೊಂದಿಗೆ ಹಂಚಿಕೊಳ್ಳಲು ಹೇಳಿ.

ಹೆಸರಾಂತ ನೇತ್ರ ತಜ್ಞ, ಪದ್ಮ ಭೂಷಣ ಡಾ.ಮುರುಗಪ್ಪ ಚೆನ್ನವೀರಪ್ಪ ಮೋದಿ (ಡಾ.ಎಂ.ಸಿ.ಮೋದಿ) ಅವರಿಂದ ಪ್ರಭಾವಿತರಾಗಿದ್ದ ಡಾ.ಭುಜಂಗ ಶೆಟ್ಟಿ ಅವರು ಒಂದು ಸಣ್ಣ ಚಿಕಿತ್ಸಾಲಯದಿಂದ ತಮ್ಮ ವೈದ್ಯ ವೃತ್ತಿಯನ್ನು ಪ್ರಾರಂಭಿಸಿ ಇದೀಗ ಒಂದು ಬೃಹತ್ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯನ್ನು ಸಮಾಜಕ್ಕೆ ಕೊಡುಗೆಯಾಗಿ ನೀಡಿದ್ದಾರೆ. ನಾರಾಯಣ ನೇತ್ರಾಲಯ ಎಂಬ ಈ ಹೆಮ್ಮರದ ಅಡಿಯಲ್ಲಿ ಡಾ. ಭುಜಂಗ ಶೆಟ್ಟಿ ಅವರ ಮಗ ಮತ್ತು ಅಳಿಯ ಒಳಗೊಂಡಂತೆ 150 ನೇತ್ರ ತಜ್ಞರು ಕಾರ್ಯ ನಿರ್ವಹಿಸುತ್ತಿದ್ದಾರೆ. ಪ್ರತಿದಿನವೂ ಎರಡು ಸಾವಿರಕ್ಕೂ ಹೆಚ್ಚು ಮಂದಿಗೆ ಹೊರ ರೋಗಿಗಳಾಗಿ ನೇತ್ರ ತಪಾಸಣೆ ಮತ್ತು ಸಮಾಲೋಚನೆಗೆ ಆಗಮಿಸುವ ನಾರಾಯಣ ನೇತ್ರಾಲಯದಲ್ಲಿ ದಿನಕ್ಕೆ ಕನಿಷ್ಠ ಎರಡು ನೂರು ಮಂದಿಗೆ ನೇತ್ರ ಶಸ್ತ್ರ ಚಿಕಿತ್ಸೆಗಳೂ ನಡೆಯುತ್ತಿವೆ.

ಹಣವಿಲ್ಲದೆಯೇ ಆಗಮಿಸುವ ತೀರಾ ಕಡು ಬಡವರಿಗೆ ಚಿಕಿತ್ಸೆಯನ್ನು ನಿರಾಕರಿಸದೆಯೇ, ದಾನಿಗಳನ್ನು ವ್ಯವಸ್ಥೆ ಮಾಡಿಯಾದರೂ ರಿಯಾಯಿತಿಯಲ್ಲಿಯೋ ಅಥವಾ ಉಚಿತವಾಗಿಯೋ ಶಸ್ತ್ರ ಚಿಕಿತ್ಸೆಗೊಳಪಡಿಸಿ ದೃಷ್ಟಿಕೊಟ್ಟು ತನ್ನ ಸಾಮುದಾಯಿಕ ಜವಾಬ್ದಾರಿಯನ್ನು ನಿರ್ವಹಿಸುತ್ತಿರುವ ನಾರಾಯಣ ನೇತ್ರಾಲಯವು ಕರ್ನಾಟಕ ರಾಜ್ಯದಲ್ಲಿ ಮೊದಲನೆಯ ಹಾಗೂ ಇಡೀ ಭಾರತದಲ್ಲಿ ಐದನೆಯ ಬಹು ವಿಶೇಷತಾ ನೇತ್ರ ಚಿಕಿತ್ಸಾ ಮತ್ತು ಸಂಶೋಧನಾ ಆಸ್ಪತ್ರೆ ಎಂಬ ಕೀರ್ತಿ ಮತ್ತು ಗೌರವಕ್ಕೆ ಪಾತ್ರವಾಗಿದೆ.

ಇಂತಹ ಆಸ್ಪತ್ರೆಯ ಸಂಸ್ಥಾಪಕರಾದ ಡಾ.ಕೆ.ಭುಜಂಗ ಶೆಟ್ಟಿ ಅವರು ನಾರಾಯಣ ನೇತ್ರಾಲಯದಲ್ಲಿ ಎಂದಿನಂತೆ ಮೇ 19 ರಂದು ತಮ್ಮಲ್ಲಿ ಆಗಮಿಸಿದ್ದ ರೋಗಿಗಳ ನೇತ್ರ ತಪಾಸಣೆ ಹಾಗೂ ಸಮಾಲೋಚನೆ ನಡೆಸಿ ಸಂಜೆ ಮನೆಗೆ ಮರಳಿದ ಕೆಲವೇ ಗಂಟೆಗಳಲ್ಲಿ ಹೃದಯಾಘಾತಕ್ಕೆ ಒಳಗಾಗಿ ತಮ್ಮ 69 ರ ವಯೋಮಾನದಲ್ಲಿ ಅಸುನೀಗಿದ್ದು ಲಕ್ಷಾಂತರ ಮಂದಿಗೆ ಆಘಾತವನ್ನು ಉಂಟು ಮಾಡಿದೆ.

ಡಾ. ಭುಜಂಗ ಶೆಟ್ಟಿ ಅವರ ಹೃದಯಕ್ಕೆ ಹತ್ತಿರವಾದ ನೇತ್ರದಾನವನ್ನು ಮುಂದುವರೆಸುವುದೇ ನಾವು ಅವರಿಗೆ ಸಲ್ಲಿಸಬಹುದಾದ ಬಹು ದೊಡ್ಡ ಗೌರವ ಹಾಗೂ ಶ್ರದ್ಧಾಂಜಲಿ. ■



Downloaded From:www.kpscvaani.com





# ದಾಗಿನಕಟ್ಟೆ ಗ್ರಾಮದ ವೀರಮ್ಮ: ರಾಜ್ಯದ ಮೊದಲ ಜಲಯೋಧೆ

**ದಾವಣಗೆರೆ ಜಿಲ್ಲೆ ಚನ್ನಗಿರಿ ತಾಲೂಕಿನ ದಾಗಿನಕಟ್ಟೆ ಗ್ರಾಮದ ಕೆ.ಎಂ.ವೀರಮ್ಮ ಬರದ ನಾಡನ್ನು ಹಸಿರ ವನವಾಗಿ ರೂಪಿಸಿದ ಛಲಗಾತಿ.**

ಕೆ.ಎಸ್.ರಾಜಮನ್ನಾರ್

ಬೆಟ್ಟ-ಗುಡ್ಡದಿಂದ ಕೂಡಿದ ಗಂಧದಮಟ್ಟಿ ಗುಡ್ಡ, ಕೆಂಗಣ್ಣನಾಯಕನ ಗುಡ್ಡ, ತಿಮ್ಮಪ್ಪನ ಗುಡ್ಡ ಮತ್ತು ಜಾನುವಾರು ಗುಡ್ಡಗಳಲ್ಲಿ ಟ್ರೆಂಚ್‌ಗಳನ್ನು ತೆಗೆದು ಸೀತಾಫಲ, ಬಿದಿರು, ಹೊಂಗೆ, ಬೇವು, ಹುಣಸೆ ಸೇರಿದಂತೆ ವಿವಿಧ ಕಾಡು ಹಣ್ಣುಗಳ 25 ಸಾವಿರ ಸಸಿಗಳನ್ನು ನೆಟ್ಟು ಬೆಳೆಸಿದ್ದಾರೆ ವೀರಮ್ಮ.

ಕೆರೆಯ ನೀರನ್ನು ಕೆರೆಗೆ ಚೆಲ್ಲಿ ಎಂಬಂತೆ ಮಾನವ ನಿರ್ಮಿತ ಸಮಸ್ಯೆಗಳಿಗೆ ಪ್ರಕೃತಿಯ ಮೂಲಕ ಪರಿಹಾರ ಕಂಡುಕೊಂಡಿದ್ದಾರೆ. ಮಳೆಯ ನೀರು ವ್ಯರ್ಥವಾಗಿ ಹರಿದು ಪೋಲಾಗದಂತೆ ಹಿಡಿದಿಡುವ ಮೂಲಕ ಜನರ ಮತ್ತು ಪ್ರಾಣಿಗಳ ನೀರಿನ ಅವಶ್ಯಕತೆ ಪೂರೈಸಿದ್ದಾರೆ. ಇದರಿಂದ ಗ್ರಾಮಗಳ ಸುತ್ತಲಿನ ಕೆರೆಗಳು, ಕೊಳವೆಬಾವಿಗಳ ಮರುಪೂರಣದಿಂದ 20 ಲಕ್ಷ ಲೀಟರ್ ನೀರು ಸಂಪಾದನೆ ಮಾಡಿರುವುದು ಸಾಮಾನ್ಯ ಸಂಗತಿಯಲ್ಲ. ಕೇಂದ್ರ ಸರ್ಕಾರದ 'ಜಲ ಯೋಧೆ' ಪ್ರಶಸ್ತಿ ಗರಿ ಮುಡಿಗೇರಿಸಿಕೊಂಡ ರಾಜ್ಯದ ಮೊದಲ ಮಹಿಳೆ ಎಂಬ ಹೆಗ್ಗಳಿಕೆಗೂ ಭಾಜನರಾಗಿದ್ದಾರೆ.

ಭವಿಷ್ಯದಲ್ಲಿ ನೀರಿನ ಬವಣೆ ನೀಗಲು ಪ್ರತಿ ಮನೆಯ ಮಗ, ಮಗಳು ಜಲಯೋಧ ಇಲ್ಲವೇ ಜಲಯೋಧೆ ಆಗಬೇಕಿರುವ ಅಗತ್ಯವಿದೆ ಮತ್ತು ಅನಿವಾರ್ಯತೆಯಿದೆ. ವೀರಮ್ಮನಂತಹ ಒಬ್ಬ ಮಹಿಳೆಯನ್ನಾದರೂ ಪ್ರತಿ ಗ್ರಾಮ ಸೃಷ್ಟಿಸಿದರೆ ನಾಡಿನ ಬದುಕು, ವಾತವರಣ ಸದಾ ಹಸಿರಾಗಿರಲಿದೆ.

ಗ್ರಾಮೀಣ ಭಾರತವನ್ನು ಬಡತನದಿಂದ ಮೇಲೆತ್ತುವ ಮತ್ತು ಸ್ಥಳೀಯ ಮಟ್ಟದಲ್ಲಿ ದುಡಿಯುವ ಕೈಗೆ ಉದ್ಯೋಗ ಒದಗಿಸುವ, ಕಾರ್ಮಿಕರು ಉದ್ಯೋಗ ಆರಸಿ ತಮ್ಮ ಊರು ಬಿಟ್ಟು ಬೇರೆ, ಬೇರೆ ಸ್ಥಳಗಳಿಗೆ ಹೋಗುವುದನ್ನು ತಪ್ಪಿಸಲು ರಾಜ್ಯದಲ್ಲಿ 2006 ರಿಂದ ಜಾರಿಗೊಂಡ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ. ಈ ಯೋಜನೆಯು ಗ್ರಾಮೀಣ ಜನರ ಬದುಕಿನ ಸುಧಾರಣೆಗೆ ನೆರವಾಗಿದೆ. ಮನರೇಗಾ ಯೋಜನೆ ಅಡಿ ಸುಮಾರು 25 ಸಾವಿರ ಸಸಿಗಳನ್ನು ನೆಟ್ಟು ಪ್ರಕೃತಿಗೆ ಹಸಿರು ಸೀರೆ ಉಡಿಸಲು ನೆರವಾಗಿರುವ ಕೃಷಿ ಕಾರ್ಮಿಕ ಮಹಿಳೆ, ದಾವಣಗೆರೆ ಜಿಲ್ಲೆ ಚನ್ನಗಿರಿ ತಾಲೂಕಿನ ದಾಗಿನಕಟ್ಟೆ ಗ್ರಾಮದ



Downloaded From:www.kpscvaani.com

ಕೆ.ಎಂ.ವೀರಮ್ಮ. ಕಲ್ಲು ಮಣ್ಣುಗಳ ಗುಡ್ಡವನ್ನು ಗ್ರಾಮೀಣ ಜನರ ಬೆವರಿನ ಶ್ರಮದಿಂದಲೇ ನಂದನವನವನ್ನಾಗಿ ಮಾಡಿದ್ದಾರೆ.

ಸುಡು ಬೇಸಿಗೆಯಲ್ಲಿ ನೀರಿನ ಬವಣೆ ತಮ್ಮ ಸುತ್ತಮುತ್ತಲ ಗ್ರಾಮಗಳನ್ನು ಬಾಧಿಸದಂತೆ ಹಾಗೂ ಕಾಡುಪ್ರಾಣಿಗಳಿಗೆ, ಜಾನುವಾರುಗಳಿಗೂ ಸಮಸ್ಯೆ ತಲೆದೋರದಂತೆ ನೋಡಿಕೊಂಡಿದ್ದಾರೆ. ಹಾಗಿದ್ದರೆ ಅವರು ಮಾಡಿದ್ದಾದರೂ ಏನು? ಗ್ರಾಮದ 1500ಕ್ಕೂ ಹೆಚ್ಚು ಮಹಿಳೆಯರನ್ನು ಒಗ್ಗೂಡಿಸಿಕೊಂಡು ಗ್ರಾಮದ ಸುತ್ತಲೂ ಇರುವ ಗಂಧದಮಟ್ಟಿ ಗುಡ್ಡ, ಕೆಂಗಣ್ಣನಾಯಕನ ಗುಡ್ಡ, ತಿಮ್ಮಪ್ಪನ ಗುಡ್ಡ ಮತ್ತು ಜಾನುವಾರು ಗುಡ್ಡಗಳಲ್ಲಿ ಟ್ರೆಂಚ್‌ಗಳನ್ನು ತೆಗೆದು ಸೀತಾಫಲ, ಬಿದಿರು, ಹೊಂಗೆ, ಬೇವು, ಹುಣಸೆ, ಕಾಡು ಗೋಡಂಬಿ ಹಾಗೂ ವಿವಿಧ ಕಾಡು ಹಣ್ಣುಗಳ ಸಸಿಗಳನ್ನು ಕೂಲಿಕಾರರ ನೆರವಿನೊಂದಿಗೆ ನೆಟ್ಟು ಬೆಳೆಸಿದ್ದಾರೆ. ಗುಡ್ಡದಿಂದ ಮಣ್ಣು ಜರಿಯದಂತೆ ತಡೆಯುವ, ಮಳೆ ನೀರು ಸಂರಕ್ಷಿಸುವ ಹಾಗೂ ಅಂತರ್ಜಲ ಮಟ್ಟ ಹೆಚ್ಚಿಸುವ ಉದ್ದೇಶದೊಂದಿಗೆ ಬದು ನಿರ್ಮಿಸಿ ಮಳೆ ನೀರು ಹರಿದು ಹೋಗದಂತೆ ತಡೆಯುವಲ್ಲಿ ಯಶಸ್ವಿಯಾಗಿದ್ದಾರೆ.

ಕಲ್ಲು, ಮಣ್ಣು, ಬೆಟ್ಟ ಮತ್ತು ಗುಡ್ಡಗಳ ನಡುವೆ ಇರುವ ಗ್ರಾಮಗಳಲ್ಲಿ ಮಳೆ ನೀರನ್ನು ಸಂಗ್ರಹ ಮಾಡುವ ಯಾವುದೇ ವಿಧಾನ ಇರಲಿಲ್ಲ. ನೀರಿನ ಬವಣೆ ತಪ್ಪಿಸಲು ಯಾವುದಾದರೂ ಒಂದು ಉಪಾಯವನ್ನು ನೈಸರ್ಗಿಕವಾಗಿಯೇ ಮಾಡಬೇಕು ಎಂಬ ಆಲೋಚನೆಯಿಂದ ಮತ್ತು ಕಳೆದ ವರ್ಷ ದಾವಣಗೆರೆ ಜಿಲ್ಲೆಯಲ್ಲಿ ಹೆಚ್ಚಾಗಿ ಮಳೆ ಆಗಿರುವುದನ್ನು ಪರಿಗಣಿಸಿ, ಮಳೆಯ ನೀರನ್ನೇ ಭವಿಷ್ಯದ ಬದುಕಿಗೆ ವರವಾಗುವಂತೆ ಮಾಡುವಲ್ಲಿ ವೀರಮ್ಮ ವಹಿಸಿದ ಪಾತ್ರ ಮಹತ್ತರವಾಗಿದೆ ಎಂದರೆ ಅದು ಅತಿಶಯೋಕ್ತಿಯೇನಲ್ಲ.

ಇವರು ಮಾಡಿದ ಕಾರ್ಯದಿಂದ ಅಂತರ್ಜಲ ಹೆಚ್ಚಾಗಿ ಸುತ್ತಮುತ್ತಲ ಕೆರೆಗಳು ತುಂಬಿಕೊಂಡಿವೆ. ಬೆಟ್ಟ ಗುಡ್ಡಗಳು ಹಚ್ಚ ಹಸಿರಿನಿಂದ ನಳನಳಿಸುತ್ತಿವೆ. ಕಲ್ಲುಗುಡ್ಡದಲ್ಲೂ ಉತ್ತಮ ಫಸಲು ತೆಗೆಯಬಹುದು ಎಂಬ ವಾತವರಣ ನಿರ್ಮಾಣವಾಗಿದೆ. ಬತ್ತಿ ಹೋಗಿದ್ದ ನೂರಾರು ಕೊಳವೆ ಬಾವಿಗಳಲ್ಲಿ ಅಂತರ್ಜಲ ಮರುಪೂರಣಗೊಂಡಿದೆ. ಗಿಡ ನೆಡುವ ಕೆಲಸದಿಂದ ಸುಮಾರು 20 ಲಕ್ಷ ಲೀಟರ್ ಮಳೆ ನೀರು ಸಂಗ್ರಹವಾಗಿದೆ.



**ಜಲಯೋಧೆ ಪ್ರಶಸ್ತಿ ಪಡೆದ ಏಕೈಕ ಮಹಿಳೆ**

ವೀರಮ್ಮ ಅವರು ಕೇಂದ್ರದ 'ಜಲಯೋಧೆ' ಪ್ರಶಸ್ತಿಗೆ ಆಯ್ಕೆಯಾದ ರಾಜ್ಯದ ಏಕೈಕ ಮಹಿಳೆ ಎಂಬ ಹೆಗ್ಗಳಿಕೆಗೆ ಭಾಜನರಾಗಿದ್ದಾರೆ.

ಅರಣ್ಯ ಇಲಾಖೆ ಕೈಗೊಂಡ ಕಾರ್ಯಕ್ರಮದ ಮಾದರಿಯಲ್ಲೇ ನರೇಗಾ ಯೋಜನೆಯಡಿ 11 ಅಡಿ ಉದ್ದ, 2 ಅಡಿ ಅಗಲ ಮತ್ತು 2 ಅಡಿ ಆಳದ 70 ಸಾವಿರ ಟ್ರೆಂಚ್‌ಗಳನ್ನು ತೋಡಿ, ಗಂಧದಮಟ್ಟಿ ಗುಡ್ಡದಲ್ಲಿ 12,500 ಟ್ರೆಂಚ್‌ಗಳಲ್ಲಿ 25 ಸಾವಿರ ಸಸಿಗಳನ್ನು ನೆಡಲಾಗಿದೆ. ಇನ್ನೂ ಮೂರು ಗುಡ್ಡಗಳಲ್ಲಿ ತೆಗೆದಿರುವ ಬಾಕಿ 57,500 ಟ್ರೆಂಚ್‌ಗಳಲ್ಲಿ ಮಳೆಗಾಲ ಆರಂಭ ಆಗುತ್ತಿದ್ದಂತೆಯೇ ಸಸಿ ನೆಡುವ ಕಾರ್ಯಕ್ರಮ ರೂಪಿಸಲಾಗಿದೆ.

ಕಳೆದ ವರ್ಷ ನೆಟ್ಟಿರುವ ಸಸಿಗಳು ನಳನಳಿಸುತ್ತಿವೆ. ಬೇಸಿಗೆಯಲ್ಲಿ ಟ್ಯಾಂಕರ್ ಮೂಲಕ ನೀರುಣಿಸಿ ಒಣಗದಂತೆ ಜೀವ ತುಂಬುತ್ತಿದ್ದಾರೆ. ಸಸ್ಯ ಸಂಕುಲ ಹೆಚ್ಚಳದೊಂದಿಗೆ ಕರಡಿ, ಮೊಲ, ಕಾಡು ಕುರಿಗಳಿಗೆ ಸುಲಭವಾಗಿ ಆಹಾರ ದೊರೆಯಲಿದೆ. ಮೇಲಾಗಿ ಪ್ರಾಣಿಗಳು ಕಾಡು ಬಿಟ್ಟು ಜನವಸತಿ ಪ್ರದೇಶಕ್ಕೆ ನುಗ್ಗುವ ಭಯ ದೂರವಾಗಿದೆ. ಗುಡ್ಡಗಳಲ್ಲಿರುವ ಕಾಡು ಹಂದಿ, ಚಿರತೆಗಳೂ ಗಿಡ-ಮರಗಳಲ್ಲಿ ವಾಸಿಸಲು ಅನುಕೂಲವಾಗಲಿದೆ.

ಇದುವರೆಗಿನ ಕಾಮಗಾರಿಗೆ ಅರಣ್ಯ ಇಲಾಖೆಯಿಂದ 10 ಲಕ್ಷ ರೂಪಾಯಿ ಮತ್ತು ನರೇಗಾ ಯೋಜನೆ ಅಡಿ 12 ಲಕ್ಷ ರೂಪಾಯಿ ವ್ಯಯಿಸಲಾಗಿದೆ. ಸ್ವಯಂ ಸೇವಾ ಸಂಘಗಳು, ಗ್ರಾಮ, ತಾಲ್ಲೂಕು, ಜಿಲ್ಲಾ ಪಂಚಾಯಿತಿ ಅಧಿಕಾರಿಗಳ ಪ್ರೋತ್ಸಾಹ ಮತ್ತು ಸಹಕಾರ ಒತ್ತಾಸೆಯಿಂದ ಇಷ್ಟೆಲ್ಲಾ ಸಾಧನೆ ಮಾಡಲು ಸಾಧ್ಯವಾಗಿದೆ ಎಂಬುದನ್ನು ವೀರಮ್ಮ ವಿನೀತ ಭಾವದಿಂದಲೇ ಸ್ಮರಿಸಿಕೊಳ್ಳುತ್ತಾರೆ. ಜಿಲ್ಲಾ ಕೃಷಿ ಕೂಲಿ ಕಾರ್ಮಿಕ ಸಂಘದ ಅಧ್ಯಕ್ಷೆಯಾಗಿರುವ ಕೆ.ಎಂ.ವೀರಮ್ಮ, ಕಾರ್ಮಿಕರ ಮನವೊಲಿಸಿ ಉತ್ತಮ ಕಾರ್ಯ ಕೈಗೊಂಡಿದ್ದಾರೆ. ಇವರ ನಿರಂತರ ಪ್ರಯತ್ನದಿಂದ ಅರಣ್ಯ ವ್ಯಾಪ್ತಿ, ಸಂಪತ್ತು ಹೆಚ್ಚಳವಾಗಿ, ಪರಿಸರ ಸಂರಕ್ಷಣೆ ಸಾಧ್ಯವಾಗುತ್ತಿದೆ.

ಕೇಂದ್ರದ 'ಜಲಯೋಧೆ' ಪ್ರಶಸ್ತಿಗೆ ಆಯ್ಕೆಯಾದ ರಾಜ್ಯದ ಏಕೈಕ ಮಹಿಳೆ ಎಂಬ ಹೆಗ್ಗಳಿಕೆಗೆ ಭಾಜನರಾಗಿದ್ದಾರೆ. ಮೊದಲಿಗೆ ಅವರು, ಚರಂಡಿ ದುರಸ್ತಿ ಮಾಡುವಂತಹ ಕೆಲಸದಲ್ಲಿ ತೊಡಗಿದ್ದರು. ಇದಕ್ಕೂ ಮುನ್ನ ಜೀವನ ನಿರ್ವಹಣೆಗಾಗಿ ಸಣ್ಣ ಅಂಗಡಿಯೊಂದನ್ನು ಇಟ್ಟು ಕೊಂಡಿದ್ದರು. ಆದರೆ ಏಕೋ ಅದರಿಂದ ಜೀವನ ನಿರ್ವಹಣೆ ಸಾಧ್ಯವಾಗಲಿಲ್ಲ. ನಂತರ ನೆರವಿಗೆ ಬಂದಿದ್ದು, ಸರ್ಕಾರದ ಮನ್ರೇಗಾ ಯೋಜನೆ. ಕೆರೆಗಳ ಹೂಳೆತ್ತುವ ಕಾರ್ಯದಲ್ಲಿ ತೊಡಗಿ, ಕೃಷಿ ಮಹಿಳಾ ಕಾರ್ಮಿಕರನ್ನು ಸಂಘಟಿಸಿದರು. ಓದಿದ್ದು ಕೇವಲ ಏಳನೇ ತರಗತಿ ಆದರೂ, ಗ್ರಾಮದಲ್ಲಿ ಕಾಡುತ್ತಿದ್ದ ನೀರಿನ ಸಮಸ್ಯೆಯನ್ನು ಹೇಗಾದರೂ ಮಾಡಿ, ಬಗೆಹರಿಸಬೇಕು ಎಂದು ಸಂಕಲ್ಪ ಮಾಡಿ, ಅರಣ್ಯ ಇಲಾಖೆಯೊಂದಿಗೆ ಸೇರಿ ಟ್ರಂಚ್ ತೆಗೆದು ಸಸಿಗಳನ್ನು ನೆಡುವ ಮೂಲಕ ಮಳೆಯ ನೀರು ವ್ಯರ್ಥವಾಗಿ ಹರಿದು ಪೋಲಾಗದಂತೆ ಮಾಡುವಲ್ಲಿ ಇವರ ಪ್ರಯತ್ನ ಫಲ ಕೊಟ್ಟಿದೆ.

ಇದರಿಂದ ಗ್ರಾಮದ ಸುತ್ತಮುತ್ತಲ ಪ್ರದೇಶಗಳಲ್ಲಿ ಅಂತರ್ಜಲ ಹೆಚ್ಚಾಗಿ, ನೀರಿನ ಬವಣೆ ತಪ್ಪಿದೆ. ಹನಿ ನೀರಿಗಾಗಿ ತಾವು ಮತ್ತು ಗ್ರಾಮದ ಜನತೆ ಪಟ್ಟ ಕಷ್ಟ ಬೇರೆಯವರಿಗೆ ಬರಬಾರದು ಎಂಬ ಮಹದುದ್ದೇಶ ಹೊಂದುತ್ತಾ, ನೀರಿನ ಹಾಹಾಕಾರವಾಗದಂತೆ ನೋಡಿಕೊಳ್ಳಲು


Downloaded From:www.kpscvaani.com



ಕೃಷಿ ಕಾರ್ಮಿಕರನ್ನು ಒಗ್ಗೂಡಿಸಿಕೊಂಡು ಕೆಲಸ ಮಾಡಿ, ಯಶಸ್ಸು ಗಳಿಸಿದ್ದಾರೆ. ಅಲ್ಲದೆ ಹೆಸರಿಗೆ ತಕ್ಕಂತೆ ವೀರಮ್ಮ ವೀರ ವನಿತೆಯೆನಿಸಿದ್ದಾರೆ.

**ಆಯ್ಕೆ ಮಾನದಂಡಗಳೇನು?:**

ಜಲಯೋಧ ಅಥವಾ ಜಲಯೋಧೆ ಎಂಬ ಪ್ರಶಸ್ತಿ ಆಯ್ಕೆಗೆ ನಿಯಮಗಳಿವೆ. ಕೇಂದ್ರ ಮತ್ತು ರಾಜ್ಯ ಸರ್ಕಾರದ ಹಿರಿಯ ಅಧಿಕಾರಿಗಳ ತಂಡ ಸ್ಥಳಕ್ಕೆ ಭೇಟಿ ನೀಡಿ, ಮಾಡಿದ ಕೆಲಸ ಪರಿಶೀಲಿಸಿ ನಂತರ ಅವರು ಮಾಡಿದ ಸಾಧನೆಗಳ ಆಧಾರದ ಮೇಲೆ ಜಲಯೋಧ/ಯೋಧೆ ಪ್ರಶಸ್ತಿ ಪ್ರಕಟಿಸಲಿವೆ.

ಮೊದಲಿಗೆ ರಾಜ್ಯ ಸರ್ಕಾರದ ಮಹಾತ್ಮ ಗಾಂಧಿ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ನಿರ್ದೇಶನಾಲಯದ ಕಚೇರಿಯಿಂದ ಇಂತಹ ಸಾಧಕರ ಪಟ್ಟಿಯನ್ನು ಕಳಿಸಿಕೊಡಬೇಕೆಂಬ ಪ್ರಸ್ತಾವನೆ ಜಿಲ್ಲೆಗಳಿಗೆ ಸೂಚಿಸಿದರ ಮೇರೆಗೆ, ಜಿಲ್ಲಾ ಪಂಚಾಯಿತಿ ಮೂಲಕ ರಾಜ್ಯ ಮತ್ತು ಕೇಂದ್ರಕ್ಕೆ ಪ್ರಸ್ತಾವನೆ ಕಳುಹಿಸಲಾಗಿದ್ದು ನಾಮ ನಿರ್ದೇಶನದ ಆಧಾರದ ಮೇಲೆ ಆಯ್ಕೆ ನಡೆಯಲಿದೆ.

ಇಂತಹ ಸಾಧಕರನ್ನು ಮಹಿಳಾ ಕಾಯಕ ಮಿತ್ರರು ಎಂದೂ ಸ್ಥಳೀಯ ಮಟ್ಟದಲ್ಲಿ ಕರೆಯಲಾಗುತ್ತಿದೆ. ಗ್ರಾಮೀಣ ಕೃಷಿ ಕಾರ್ಮಿಕರನ್ನು ಸಂಘಟಿಸಿ, ಕೆಲಸ ಮಾಡಿಸುವಲ್ಲಿ ವೀರಮ್ಮನವರ ಪಾತ್ರ ಮಹತ್ತರವಾಗಿದೆ. ಪ್ರತಿ ಗ್ರಾಮ ಪಂಚಾಯಿತಿಯಲ್ಲೂ ಇಂತಹ ಕೆಲಸ ನಡೆಯಬೇಕು ಎಂಬುದನ್ನು ಪ್ರೇರೇಪಿಸಲು ಜಿಲ್ಲಾ ಮಟ್ಟದಲ್ಲಿ ಮಹಿಳಾ ಕಾಯಕ ಮಿತ್ರರ ಸಮಾವೇಶವನ್ನು ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಹಮ್ಮಿಕೊಂಡು ಉದ್ಯೋಗ ಖಾತ್ರಿ ಯೋಜನೆಗೆ ಮತ್ತಷ್ಟು ಶಕ್ತಿ ತುಂಬಲಿದ್ದಾರೆ.

ದೇಶದಲ್ಲಿ ನೀರು ಚಿನ್ನದಷ್ಟೇ ಬೆಲೆಬಾಳುವ ಅಮೂಲ್ಯ ವಸ್ತು ಎಂದರೆ ಅದು ಅತಿಶಯೋಕ್ತಿಯೇನಲ್ಲ. ವಿಶ್ವದ ಜನಸಂಖ್ಯೆಯಲ್ಲಿ ನಮ್ಮ ಪಾಲು ಶೇಕಡ 18 ರಷ್ಟಿದೆ. ಆದರೆ ನಮ್ಮಲ್ಲಿರುವ ಜಲ ಸಂಪನ್ಮೂಲ ಶೇಕಡ 4ರಷ್ಟು. ಹೀಗಾಗಿ ನಮ್ಮ ಪಾಲಿಗೆ ಹನಿ, ಹನಿ ನೀರೂ ಸಹ ಚಿನ್ನ, ವಜ್ರವೇ ಆಗಿದೆ. ವಿಶ್ವದಲ್ಲಿ ಮೂರನೇ ಯುದ್ಧ ನಡೆದರೆ ಅದು ನೀರಿಗಾಗಿ ಎಂಬ ಮಾತು ನಿತ್ಯ ಮಂತ್ರವಾಗಿದೆ. ಇದರ ಜೊತೆಗೆ ಹವಾಮಾನ ಬದಲಾವಣೆ, ಜಲಸಂಪನ್ಮೂಲದ ಮೇಲಿನ ಒತ್ತಡವನ್ನು ಮತ್ತಷ್ಟು ಉಲ್ಬಣಗೊಳ್ಳುವ ರೀತಿಯಲ್ಲಿ ಮಾಡುವುದರಿಂದ ನಾಳಿನ ರಾತ್ರಿಗಳನ್ನು ಆತಂಕದಲ್ಲೇ ಕಳೆಯಬೇಕಿದೆ. ದೇಶವನ್ನು ಬಿಟ್ಟುಬಿಡದೇ ಕಾಡುವ ಬರಗಾಲ ಮತ್ತು ಪ್ರವಾಹ ನಮ್ಮ ಜಲ ಸಂಪನ್ಮೂಲವನ್ನು ಮತ್ತಷ್ಟು ಏರುಪೇರು ಮಾಡುತ್ತಿದೆ.

ದೇಶದಲ್ಲಿ ಜಲ ಯೋಧರು ಅಥವಾ ಯೋಧೆಯರು ನೀರಿನ ಸಮಸ್ಯೆಯನ್ನು ಬಗೆಹರಿಸಲು ಜನರನ್ನು ಒಟ್ಟುಗೂಡಿಸುತ್ತಾರೆ. ಅವರಲ್ಲಿ ಜಾಗೃತಿ ಮೂಡಿಸುತ್ತಾರೆ. ಅಂತರ್ಗತ ಮತ್ತು ಸಮಾನ ಪರಿಹಾರ ಹುಡುಕುತ್ತಾರೆ. ಎಂತಹ ಒತ್ತಡದ ಸನ್ನಿವೇಶದಲ್ಲೂ ಅವರು ತಮ್ಮ ಗುರಿ ಮತ್ತು ದಾರಿ ಬದಲಾಯಿಸುವುದಿಲ್ಲ. ಅವರ ಅಮೂಲ್ಯ ಕಾಣಿಕೆಯು ಜಲಯೋಧ ಅಥವಾ ಜಲಯೋಧೆ ಎಂಬ ಬಿರುದು ಅವರನ್ನು ದೇಶ ಮತ್ತು ಜನತೆ ಸದಾ ಸ್ಮರಿಸುವ ಅತಿ ಎತ್ತರದ ಸ್ಥಾನಕ್ಕೆ ತೆಗೆದುಕೊಂಡು ಹೋಗಲಿದೆ.

ರಾಜಸ್ಥಾನದಂತಹ ಬರಪೀಡಿತ ಪ್ರದೇಶಗಳಲ್ಲೂ ಅನೇಕರು ಚೆಕ್‌ಡ್ಯಾಮ್ ನಿರ್ಮಾಣ ಮಾಡಿ ಇದರ ಮೂಲಕ ಲಕ್ಷಾಂತರ ಜನರನ್ನು ದುಡಿಮೆಗೆ ಹಚ್ಚಿ ಅವರ ಆದಾಯ ಹೆಚ್ಚಿಸಲು ಕಾರಣಕರ್ತರಾಗಿದ್ದಾರೆ. ಹಣ ಖರ್ಚು ಮಾಡಿ ನೀರನ್ನು ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಹರಿಸಬಹುದು ಅಥವಾ ತೆಗೆದುಕೊಂಡು ಹೋಗಬಹುದೇ ವಿನಃ ಹಣ ಖರ್ಚು ಮಾಡಿ ನೀರನ್ನು ಉತ್ಪಾದನೆ ಮಾಡಲು ಸಾಧ್ಯವೇ ಇಲ್ಲ. ಮಳೆಯ ನೀರನ್ನು ಶೇಖರಣೆ ಮಾಡುವ ಅಥವಾ ಹಿಡಿದಿಡುವ ಪ್ರಯತ್ನ ಹೆಚ್ಚಾಗಬೇಕಿದೆ. ಹೀಗಾಗಿ ಭವಿಷ್ಯದಲ್ಲಿ ಪ್ರತಿಮನೆಯ ಮಗ, ಮಗಳು ಜಲಯೋಧ ಇಲ್ಲವೇ ಜಲಯೋಧೆ ಆಗಬೇಕಿದೆ. ಇದರಿಂದ ನಮಗೆ ಹಲವು ಪ್ರಯೋಜನ ದೊರೆಯಲಿದೆ. ಆಗಾಗ ಕಾಡುವ ಪ್ರವಾಹ ಮತ್ತು ಬರಗಾಲದ ಸಮಸ್ಯೆಗೂ ಪರಿಹಾರವಾಗಲಿದೆ. ಅಂತರ ಜಲ ಮರುಪೂರಣಗೊಂಡು ನಮ್ಮ ಜೊತೆ ವಾಸ ಮಾಡುವ ಜಾನುವಾರುಗಳು ಮತ್ತು ಕಾಡು ಪ್ರಾಣಿಗಳು ಸಹ ನೆಮ್ಮದಿಯಿಂದ ಬದುಕುವಂತಹ ವಾತಾವರಣ ಸೃಷ್ಟಿಯಾಗಲಿದೆ. ನಮ್ಮ ನೀರಿನ ಅವಶ್ಯಕತೆಯ ಅರ್ಧದಷ್ಟು ಪಾಲನ್ನು ಮಳೆ ನೀರು ಶೇಖರಣೆಯಿಂದಲೇ ಪೂರೈಸಿಕೊಳ್ಳಬಹುದಾಗಿದೆ.

ದೇಶದ ಮಹಾನಗರಗಳಲ್ಲಿನ ಕೋಟ್ಯಂತರ ಮನೆಗಳ ನಲ್ಲಿಗಳಲ್ಲಿ ರಾತ್ರಿಯಿಂದ ಬೆಳಗಿನವರೆಗೂ ತೊಟ್ಟಿಕ್ಕುವ ಹನಿಗಳಿಂದಲೇ ಲಕ್ಷಾಂತರ ಲೀಟರ್ ನೀರು ಉಳಿಸಬಹುದು ಎಂಬ ಅರಿವು ನಮಗಿದ್ದರೂ ಸಾಕು. ಅದು ಸಹ ಜಲ ಸಂರಕ್ಷಣೆಗೆ ಕೊಡಬಹುದಾದ ಅಮೂಲ್ಯ ಕೊಡುಗೆಯಾದೀತು. ಹೀಗಾಗಿ ಜೀವರಾಶಿಗಳಿಗೆ ಆಸರೆಯಾದ ಅಮೂಲ್ಯ ವಸ್ತುವಿನ ಅಪವ್ಯಯ, ದುರ್ಬಳಕೆ ತಡೆಗೆ ಇಡೀ ಮನುಕುಲವೇ ಕೈಜೋಡಿಸಬೇಕು. ಲಾಭ-ನಷ್ಟದ ಲೆಕ್ಕಚಾರದ ಆಲೋಚನೆ ಬದಿಗಿಟ್ಟು ಕೈಲಾದ ಪ್ರಯತ್ನವನ್ನೂ ಮಾಡಬೇಕು. ■



Downloaded From:www.kpscvaani.com







## ಜನರಿಗೆ ಆರೋಗ್ಯವಂತ ಬೆಳೆ ನೀಡುತ್ತಿರುವ

# ಮಲ್ಲೇಶಪ್ಪ

**ಚೆನ್ನೈನ ಕ್ಯಾನ್ಸರ್ ಆಸ್ಪತ್ರೆಯಲ್ಲಿ ಕೌನ್ಸಿಲರ್ ಆಗಿದ್ದ ಮಲ್ಲೇಶಪ್ಪ ಅವರು ಕೆಲಸ ಬಿಟ್ಟು ಸಾವಯವ ಕೃಷಿಯಲ್ಲಿ ತೊಡಗಿದ ಯಶೋಗಾಥೆ.**

ಜಿ.ಚಂದ್ರಕಾಂತ

ಕಲಬುರಗಿ ಜಿಲ್ಲೆಯ ಅಫಜಲಪುರ ತಾಲೂಕಿನ ಹಸರಗುಂಡಗಿಯ ಎಂ.ಎಸ್.ಡಬ್ಲ್ಯೂ ಓದಿರುವ ಹನುಮಂತಪ್ಪ ಮಲ್ಲೇಶಪ್ಪ ಬೆಳಗುಂಪಿ ಅವರು ತಮ್ಮ 15 ಎಕರೆ ಖುಷ್ಕಿ ಮತ್ತು 7 ಎಕರೆ ನೀರಾವರಿ ಭೂಮಿಯಲ್ಲಿ ಸಾವಯವ ಸುಸ್ಥಿರ ಕೃಷಿ ಪದ್ಧತಿ ಅಳವಡಿಸಿಕೊಂಡು ತೋಟಗಾರಿಕೆ ಮತ್ತು ಆಹಾರಧಾನ್ಯ ಬೆಳೆಗಳನ್ನು ಕಳೆದ 15 ವರ್ಷಗಳಿಂದ ಬೆಳೆದು ವರ್ಷಕ್ಕೆ 14 ಲಕ್ಷ ರೂ.ಗಿಂತ ಅಧಿಕ ಲಾಭ ಗಳಿಸುತ್ತಿರುವ ಜೊತೆಗೆ ಜನರಿಗೆ ವಿಷಮುಕ್ತ ಬೆಳೆಯನ್ನು ನೀಡುತ್ತಿದ್ದಾರೆ.

ಜೇನುಕೃಷಿ, ಕುರಿ ಸಾಕಾಣಿಕೆ, ಎರೆಹುಳು ಗೊಬ್ಬರ, ಜೀವಾಮೃತ, ಜೈವಿಕ ಕೀಟನಾಶಕ, ಸಾವಯವ ತೊಗರಿಬೇಳೆ ತಯಾರಿಕೆ ಮತ್ತು ರೈತರಿಗಾಗಿ ಕೃಷಿ ಪಾಠಶಾಲೆ ನಡೆಸುತ್ತಿದ್ದು, ರೈತರಿಗೆ ಮಾದರಿಯಾಗಿದ್ದಾರೆ.

ಇವರು ಇದಕ್ಕೂ ಮುನ್ನ ಚೆನ್ನೈನ ಕ್ಯಾನ್ಸರ್ ಆಸ್ಪತ್ರೆಯಲ್ಲಿ ಕೌನ್ಸಿಲರ್ ಆಗಿ ಸೇವೆಸಲ್ಲಿಸುತಿದ್ದರು. ದುಶ್ಚಟವಿಲ್ಲದವರೂ ಸಣ್ಣ ಮಕ್ಕಳಿಂದ ಹಿಡಿದು ಎಲ್ಲಾ ವಯೋಮಾನದವರು ಕ್ಯಾನ್ಸರ್ ಚಿಕಿತ್ಸೆಗೆ ಬರುವುದನ್ನು ಕಂಡು ಚಕಿತರಾಗಿ, ಆ ಕುರಿತು ಆಳ ಅಧ್ಯಯನ ನಡೆಸಿದರು. ಇದಕ್ಕೆ ವಿಷಾಹಾರ ಸೇವನೆಯೇ ಪ್ರಮುಖ ಕಾರಣವೆಂಬುದನ್ನರಿತು ವಿಷಮುಕ್ತ



Downloaded From:www.kpscvaani.com





ಆಹಾರೋತ್ಪಾದನೆಯ ದೃಢಸಂಕಲ್ಪ ಮಾಡಿ ನೌಕರಿಯನ್ನೇ ತ್ಯಜಿಸಿದರು. ತಮ್ಮ ಭೂಮಿಯಲ್ಲಿ ಸಾವಯವ ಕೃಷಿಯ ಹತ್ತಾರು ಪ್ರಯೋಗಗಳನ್ನು ನಡೆಸಿ ಸಾವಯವ ಸಂತ ಎಂದೇ ಬಿಂಬಿತರಾಗಿದ್ದಾರೆ. ಇವರ ಪತ್ನಿ ಜಗದೇವಿ ಕೂಡ ಇವರೊಂದಿಗೆ ಕೃಷಿಕಾರ್ಯ ಚಟುವಟಿಕೆಗಳಿಗೆ ಕೈಜೋಡಿಸಿದರು.

ಹನುಮಂತಪ್ಪ 2.22 ಎಕರೆಯಲ್ಲಿ ಮಾವು, ಸಪೋಟ, ಪೇರಲ, ಸೀತಾಫಲ, ತೆಂಗು, ಲಿಂಬೆ ಗಿಡಗಳನ್ನು ಹಾಗೂ ಹೊಲದ ಬದುಗಳಲ್ಲಿ 200 ಸಾಗುವಾನಿ ಮರಗಳನ್ನು ಬೆಳೆದಿದ್ದಾರೆ. ತೋಟಗಾರಿಕೆ ಬೆಳೆಗಳಿಗಾಗಿ ಆಳದ ಗುಂಡಿಗಳನ್ನು ತೋಡಿ ಜೀವಾಮೃತ, ಪಂಚಗವ್ಯ, ಗೋಪಜಲ, ವೇಸ್ಟ್ ಡಿಕಂಪೋಜರ್, ಎರೆಹುಳು ಗೊಬ್ಬರಗಳಿಂದ ಭೂಮಿಯ ಫಲವತ್ತತೆ ಹೆಚ್ಚಿಸಿದರು. ಸಸಿಗಳನ್ನು ಗಿಡದಿಂದ ಗಿಡಕ್ಕೆ ಮತ್ತು ಸಾಲಿನಿಂದ ಸಾಲಿಗೆ 20 x 20 ಅಡಿ ಅಂತರದಲ್ಲಿ ನಾಟಿ ಮಾಡಿದ್ದಾರೆ. ಉಳಿದ ಭೂಮಿಯಲ್ಲಿ ಕಬ್ಬು ಮತ್ತಿತರ ಆಹಾರಧಾನ್ಯ ಬೆಳೆಗಳನ್ನು ಬೆಳೆಯುತ್ತಿದಾರೆ.



ಕೃಷಿ ಹೊಂಡಕ್ಕೆ ಮತ್ತು ಹನಿ ನೀರಾವರಿಗೆ ಕೃಷಿ ಮತ್ತು ತೋಟಗಾರಿಕೆ ಇಲಾಖೆಗಳಿಂದ ಸಹಾಯಧನ ಪಡೆದಿದ್ದು, ಹನಿ ನೀರಾವರಿಯಿಂದ ಬೆಳೆಗಳಿಗೆ ವಾರಕ್ಕೊಮ್ಮೆ ನೀರುಣಿಸುವರು. ಅಗ್ನಿಅಸ್ತ್ರ, ಬ್ರಹ್ಮಾಸ್ತ್ರ, ನೇಮಾಸ್ತ್ರ, ದಶಪರಣಿ, ಮೀನೆಣ್ಣೆ, ಬೇವಿನೆಣ್ಣೆ ಜೈವಿಕ ಕೀಟನಾಶಕಗಳಿಂದ ಕಡಿಮೆ ಖರ್ಚಿನಲ್ಲಿ ಬೆಳೆ ಸಂರಕ್ಷಿಸಿಕೊಳ್ಳುತ್ತಿದ್ದಾರೆ.

ಇವರ ತೋಟಗಾರಿಕೆಯಲ್ಲಿ ಪ್ರತಿವರ್ಷ ಅಂದಾಜು 40 ಕ್ವಿಂಟಲ್ ಮಾವು, 20 ಕ್ವಿಂಟಲ್ ಸಪೋಟ, 40 ಕ್ವಿಂಟಲ್ ಪೇರಲ ಹಣ್ಣು ದೊರೆಯುತ್ತದೆ. ತಾವು ಬೆಳೆದ ಎಲ್ಲ ಹಣ್ಣು ಮತ್ತು ಆಹಾರಧಾನ್ಯಗಳೆಲ್ಲವನ್ನೂ ಸ್ವತಃ ತಾವೇ ಕಲಬುರಗಿಯ ಐವಾನ್‌ಶಾಹಿ ಪ್ರದೇಶದಲ್ಲಿ ಮಾರುತ್ತಿದ್ದಾರೆ. ಎಲ್ಲ ಬೆಳೆಗಳ ವಾರ್ಷಿಕ ನಿರ್ವಹಣೆಗಾಗಿ 3 ಲಕ್ಷ ರೂ. ಖರ್ಚಾದರೂ, ಒಟ್ಟು 14 ಲಕ್ಷ ರೂ. ನಿವ್ವಳ ಆದಾಯ ಗಳಿಸುತ್ತಿದ್ದಾರೆ.


ಐದು ಜಾನುವಾರು, 17 ಕುರಿ ಸಾಕಣೆಯಿಂದ ಜೀವಾಮೃತ ತಯಾರಿಸುತ್ತಾರೆ. ಎರೆಹುಳು ಗೊಬ್ಬರದ ಎಂಟು ಘಟಕಗಳಿಂದ ವರ್ಷಕ್ಕೆ 10 ಟನ್ ಎರೆಹುಳು ಗೊಬ್ಬರ ಉತ್ಪಾದಿಸಿ ಹೊಲದಲ್ಲೇ ಬಳಸುತ್ತಿದ್ದಾರಲ್ಲದೆ ರೈತರಿಗೂ ಮಾರುತ್ತಿದ್ದಾರೆ. ಜೇನುಕೃಷಿಯಿಂದ ವರ್ಷಕ್ಕೆ 100 ಕೆ.ಜಿ. ಜೇನು ಉತ್ಪಾದಿಸುವರು. ತೊಗರಿಬೇಳೆ ತಯಾರಿಕಾ ಕಿರುಘಟಕದಿಂದ ತೊಗರಿಬೇಳೆ ಉತ್ಪಾದಿಸಿ "ಬೆಳಗುಂಪಿ" ಬ್ರ್ಯಾಂಡ್ ಹೆಸರಿನಲ್ಲಿ ಮಾರಾಟ ಮಾಡುತ್ತಿದ್ದಾರೆ.

ಕಳೆದೊಂದು ವರ್ಷದಿಂದ ರಾಜ್ಯದ ವಿವಿಧ ಜಿಲ್ಲೆಗಳ 600 ರೈತರಿಗೆ, ಕೃಷಿ ವಿದ್ಯಾರ್ಥಿಗಳಿಗೆ ಸಾವಯವ ಕೃಷಿಯಲ್ಲಿ ಉತ್ಪಾದನೆಯಿಂದ ಮಾರುಕಟ್ಟೆಯವರೆಗೆ ಯೋಜನೆ ರೂಪಿಸಿಕೊಳ್ಳುವ ಮತ್ತು ಕಡಿಮೆ ವೆಚ್ಚದಿಂದ ಅಧಿಕ ಇಳುವರಿ ಪಡೆಯುವ, ಗೊಬ್ಬರ ಕೀಟನಾಶಕಗಳ ಬಳಕೆ, ಕೊಯ್ಲು ವಿಧಾನದ ಬಗ್ಗೆ ಕೃಷಿ ತರಬೇತಿಯನ್ನು ನೀಡುತ್ತಿದ್ದಾರೆ.

ಕೃಷಿ ಪಂಡಿತ ಪ್ರಶಸ್ತಿ ಸೇರಿದಂತೆ ವಿವಿಧ ಬ್ಯಾಂಕ್, ಟಿವಿ ಚಾನಲ್‌ಗಳು, ಪತ್ರಿಕೆಗಳು ಮತ್ತು ವಿವಿಧ ಸಂಘ ಸಂಸ್ಥೆಗಳು ನೀಡುವ ಪ್ರಶಸ್ತಿಗೆ ಭಾಜನರಾಗಿದ್ದಾರೆ. ಆಸಕ್ತರು ಇವರನ್ನು ಸಂಪರ್ಕಿಸಲು ಬಯಸಿದಲ್ಲಿ ಇವರ ದೂರವಾಣಿ ಸಂಖ್ಯೆ 9449125035 ಕ್ಕೆ ಕರೆ ಮಾಡಬಹುದು. ಎಲ್ಲಾ ಕೃಷಿಕರು ಇವರಂತೆ ಸಾವಯವ ಕೃಷಿ ಪದ್ಧತಿಯಲ್ಲಿ ಆಹಾರ ಬೆಳೆಗಳನ್ನು ಬೆಳೆದಲ್ಲಿ ಮಹಾಮಾರಿ ಕ್ಯಾನ್ಸರ್ ರೋಗ ಬಾರದಂತೆ ಮಾಡಬಹುದು. ■



Downloaded From:www.kpscvaani.com



# ದೇಹಕ್ಕೆ ಜೀವಂತಿಕೆ ತುಂಬುವ ಯೋಗ

ಡಾ.ಗುರುರಾಜ ಪೋಶೆಟ್ಟಿಹಳ್ಳಿ

Downloaded From:www.kpscvaani.com

ಯೋಗ ಮಾನವನ ಲೋಕ ಕಲ್ಯಾಣಕ್ಕೆ ಭಾರತವು ಕೊಟ್ಟಿರುವ ಅಮೂಲ್ಯವಾದ ಪ್ರಾಚೀನ ಕೊಡುಗೆ. ಅದು ನಮ್ಮ ಪೂರ್ವಾರ್ಜಿತ ವೈಭವೋಪೇತವಾದ ಸಂಪತ್ತು. ಆಧುನಿಕ ಮನೋವಿಜ್ಞಾನವನ್ನು ಅಭ್ಯಸಿಸಿದವರಿಗೆ ಯೋಗದ ಈ ಉನ್ನತ ಸ್ತರಗಳು ವಿಸ್ಮಯಕರವಾಗಿ ಕಾಣಬಹುದು. ಯೋಗವು ಭಾರತೀಯರ ಮನೋವಿಜ್ಞಾನಾತ್ಮಕವಾದ ಪ್ರಾಚೀನ ಸಿದ್ಧಿ.

ಯೋಗದ ಬಗ್ಗೆ ಸಮಗ್ರ ಚಿಂತನೆ ಮೂಡಿರುವುದೇ ಯೋಗಾನುಯೋಗ. ದೇಹ ಸ್ವಾಸ್ಥ್ಯದ ಜೊತೆಗೆ ಮಾನಸಿಕ ಸಮಚಿತ್ತತೆಯನ್ನು ಕಾಪಾಡಿಕೊಳ್ಳುವುದೇ ಯೋಗ ಸಾಧನೆಯ ಮೂಲೋದ್ದೇಶವಾಗಿದೆ. ಯೋಗ ಸಾಧನೆಯಿಂದ ಸಂಕಲ್ಪ ಶಕ್ತಿ, ವಿವೇಚನಾ ಶಕ್ತಿ ಬಲಯುತವಾಗುತ್ತದೆ.

ಯೋಗ ಎನ್ನುವ ಪದವು ಬೇರೆ ಬೇರೆ ಅರ್ಥವನ್ನು ಕೊಡುತ್ತದೆ. ಯೋಗ ಎಂದರೆ ಕೇವಲ ದೈಹಿಕವಾದ ವ್ಯಾಯಾಮವಲ್ಲ ಅಥವಾ ಆಸನಗಳಲ್ಲ. ಯೋಗ ಎನ್ನುವುದು ಪರಿಪೂರ್ಣವಾದ ಜ್ಞಾನ. ಅದು ದೇಹವನ್ನು, ಮನಸ್ಸನ್ನು, ಆತ್ಮವನ್ನು ಮತ್ತು ವಿಶ್ವವನ್ನು ಒಂದಾಗಿಸುತ್ತದೆ. ಪ್ರತಿ ವ್ಯಕ್ತಿಗೂ ಬೇಕಾದ ಶಾಂತಿಯನ್ನು ಯೋಗವು ತರುತ್ತದೆ. ಒಬ್ಬರ ವರ್ತನೆಯಲ್ಲಿ, ಆಲೋಚನಾ ಮಾದರಿಯಲ್ಲಿ ಮತ್ತು ಧೋರಣೆಯಲ್ಲಿ ದೊಡ್ಡ ವ್ಯತ್ಯಾಸವನ್ನು

**ಬದಲಾಗುತ್ತಿರುವ ಜೀವನ ಶೈಲಿ ಮತ್ತು ಈಗಿನ ಆಹಾರ ಪದ್ಧತಿಯಿಂದ ಅನಾರೋಗ್ಯದ ಗೂಡಾಗಿರುವ ದೇಹಕ್ಕೆ ಯೋಗವು ಜೀವಂತಿಕೆಯನ್ನು ತುಂಬುತ್ತದೆ.**

ಉಂಟುಮಾಡುತ್ತದೆ. ಹಾಗಾಗಿ ಯೋಗವು ಬಹಳ ಅನಿವಾರ್ಯವಾದದ್ದು ಎಂದೇ ಹೇಳಬಹುದು.

ಸಾಮಾನ್ಯ ಮನಸ್ಥಿತಿಯನ್ನು ಹೊಂದಲು, ಸೂಕ್ಷ್ಮವಂತರಾಗಲು, ವಿವೇಚನೆ ಹೊಂದಲು, ಬಲಿಷ್ಠರಾಗಿರಲು ಯೋಗ ಮಾರ್ಗ ಅತ್ಯವಶ್ಯವಾಗಿದೆ ಎಂದು ಯೋಗಪಟುಗಳು ಅಭಿಪ್ರಾಯಿಸುತ್ತಾರೆ. ಯೋಗ ರಹಸ್ಯವಾದ ಸಂಗತಿಯೇ? ಇಲ್ಲ... ಯೋಗವೆನ್ನುವುದು ರಹಸ್ಯವಾದ ವಿಷಯವಲ್ಲ. ಅದೇನಿದ್ದರು ಸ್ವಯಂ ಅನುಭವಕ್ಕೆ ಬರತಕ್ಕಂತಹದ್ದು. ಒಂದೊಮ್ಮೆ ಅದನ್ನು ರಹಸ್ಯ ವಿಷಯವೆಂದು ನೀವು ಭಾವಿಸಿದರೆ ಅದು ಸುಪ್ತವಾಗಿಯೇ ಉಳಿಯುತ್ತದೆ. ಹೊರಗೆಡಹಲು ಆಗುವುದಿಲ್ಲ. ಆದರೆ ಯಾವುದು ಸ್ವಯಂ ವೇದ್ಯವಾಗುವುದೋ ಅದುವೇ ಯೋಗ. ಯೋಗ ಜೀವನಕ್ಕೆ ಜೀವಂತಿಕೆಯನ್ನು ತುಂಬುತ್ತದೆ. ಆ ಜೀವಂತಿಕೆಯು ಅನೇಕ ಜನ್ಮಗಳವರೆಗೆ ಹರಿದು ಬರುತ್ತದೆ. ಪ್ರೇಮಭಾವದಿಂದ ಪೂರಿತವಾಗುವಂತೆ ಮಾಡುತ್ತದೆ.



**ಧ್ಯಾನವೂ ಯೋಗವೇ**

ಬಹಳಷ್ಟು ಜನರಲ್ಲಿ ಧ್ಯಾನವೇ ಬೇರೆ, ಯೋಗವೇ ಬೇರೆ ಎಂಬ ತಪ್ಪು ಅಭಿಪ್ರಾಯವಿದೆ. ಅದು ಸರಿಯಲ್ಲ. ಧ್ಯಾನ ಯೋಗದ ಒಂದು ಭಾಗ. ಯೋಗವು ಧ್ಯಾನಸ್ಥವಾಗಿರಬೇಕು, ಇಲ್ಲವಾದರೆ ಅದು ಮತ್ತೊಂದು ದೈಹಿಕ ವ್ಯಾಯಾಮದಂತೆ ಆಗುತ್ತದೆ.

ಯೋಗಾಭ್ಯಾಸದ ಕೊನೆಯ ಹಂತದಲ್ಲಿ ಶವಾಸನ ಮಾಡುವಾಗ ಕಾಲಿನ ಬೆರಳುಗಳಿಂದ ಪ್ರಾರಂಭಿಸಿ ನೆತ್ತಿಯ ತುದಿಯ ತನಕದ ಪ್ರತಿ ಭಾಗಗಳನ್ನು ಪ್ರತ್ಯೇಕವಾಗಿ ಹೆಸರಿಸುತ್ತ ಅವುಗಳಿಗೆ ವಿಶ್ರಾಂತಿ ಕೊಡಿ ವಿಶ್ರಾಂತಿ ಕೊಡಿ... ಎಂದು ಯೋಗ ಗುರು ಮೆಲುದನಿಯಲ್ಲಿ ಸೂಚಿಸುತ್ತಿರುತ್ತಾರೆ. ಆಧುನಿಕ ಬದುಕು ವಿಶ್ರಾಂತಿಯನ್ನು ಕಳೆದುಕೊಳ್ಳುವಷ್ಟು ಭಾರವಾಗಿ ಬಿಟ್ಟಿದೆ ಎಂಬುದರ ಸಂಕೇತವಿದು. ಸಾಮಾನ್ಯವಾಗಿ ಆರೋಗ್ಯ ಸಮಸ್ಯೆ ಕಾಣಿಸಿಕೊಂಡು, ಅಲೋಪತಿ ಮಾತ್ರೆಗಳಲ್ಲಿ ಅದನ್ನು ಶಮನಗೊಳಿಸುವುದು ಕಷ್ಟ ಎಂದು ಅರಿವಾದಾಗ ಜನ ಯೋಗದ ಮೊರೆ ಹೋಗುತ್ತಾರೆ. ಯೋಗದಿಂದ ದೈಹಿಕ ಮತ್ತು ಮಾನಸಿಕ ಪ್ರಯೋಜನಗಳಿವೆ ಎಂಬುದು ಬಹು ಹಿಂದೆಯೇ ಸಾಬೀತಾಗಿದೆ. ಯೋಗಾಭ್ಯಾಸದಿಂದ ಶಾರೀರಿಕ ಕ್ಷಮತೆ, ಭಾಷಾ ಶುದ್ಧಿ, ಶ್ರವಣ ಕೌಶಲ್ಯ, ಸಹಕಾರ ಮನೋಭಾವ ಮುಂತಾದ ಗುಣಗಳನ್ನು ಬೆಳೆಸಿಕೊಳ್ಳಲು ಸಹಕಾರಿ.

ಯೋಗಾಭ್ಯಾಸವು ದೈಹಿಕ ಮತ್ತು ಮಾನಸಿಕ ದೃಢತೆಗೆ ಸಹಕಾರಿ. ಮನಸ್ಸನ್ನು ನಿಯಂತ್ರಿಸಲೂ ಸಹಕಾರಿ. ಯೋಗದಿಂದ ಚಿತ್ತವೃತ್ತಿಗಳನ್ನು ನಿಯಂತ್ರಿಸಬಹುದು ಎಂದು ಪತಂಜಲಿ ಮುನಿಗಳು ಹೇಳಿದ್ದಾರೆ. ಯೋಗವು ಮನಸ್ಸನ್ನು ಶಾಂತಗೊಳಿಸುತ್ತದೆ ಎಂದು ಯೋಗವಾಸಿಷ್ಠ ಗ್ರಂಥದಲ್ಲಿ ಉಲ್ಲೇಖಿಸಲಾಗಿದೆ.

ಯೋಗವೆಂದರೆ ಗಡಚು, ಕಠಿಣ ಎಂದು ತಿಳಿಯಬೇಕಿಲ್ಲ. ಯೋಗವನ್ನು ಅತ್ಯಂತ ಸುಲಭವಾಗಿ ಹೇಳಿಕೊಡಬಹುದು. ಆಸನಗಳಿಂದ



Downloaded From:www.kpscvaani.com



ಸ್ನಾಯುಗಳ ಚಲನೆ, ಕೀಲು, ಎಲುಬುಗಳ ಚಲನೆಗೆ ಹೇಗೆ ಸಹಕಾರಿಯಾಗುತ್ತದೆ, ಧ್ಯಾನ, ಪ್ರಾಣಾಯಾಮ ಮತ್ತು ಆಸನಗಳಿಂದ ಹೇಗೆ ಪಚನಕ್ರಿಯೆ ಸುಗಮಗೊಳ್ಳುತ್ತದೆ, ಹೇಗೆ ನರಗಳು ಬಲಿಷ್ಠವಾಗುತ್ತವೆ, ಹೇಗೆ ದೇಹದಲ್ಲಿ ರೋಗನಿರೋಧಕ ಶಕ್ತಿ ಹೆಚ್ಚುತ್ತದೆ ಎಂಬುದನ್ನು ಮನವರಿಕೆ ಮಾಡಬಹುದು. ಜೊತೆಗೆ, ಅಧ್ಯಯನ ಮಾಡುವಾಗ ಮತ್ತು ಪರೀಕ್ಷೆ ಬರೆಯುವಾಗ ಯಾವ ರೀತಿ ಒತ್ತಡಗಳಿಂದ ಮುಕ್ತವಾಗಬಹುದು ಎಂಬ ಕುರಿತೂ ಅರಿವು ಮೂಡಿಸಬಹುದು.

ಯೋಗದಲ್ಲಿ ನಿರ್ದಿಷ್ಟ ಆಸನಗಳಿದ್ದು, ಅದರಲ್ಲಿ ಶರೀರದ ವಿವಿಧ ಅಂಗಗಳನ್ನು ಹಾಗೂ ಸ್ನಾಯುಗಳನ್ನು ನಿಧಾನವಾಗಿ ಮತ್ತು ನಿಯಮಿತ ಚಲನೆ ಮಾಡುವ ಮೂಲಕ ಸಡಿಲಗೊಳಿಸಲಾಗುತ್ತದೆ. ಮಾತ್ರವಲ್ಲ ಇದರಿಂದ ಅಂಗಾಗಳಿಗೆ ಮತ್ತು ಸ್ನಾಯುಗಳಿಗೆ ಮಸಾಜ್ ಮಾಡಿದಂತಾಗುತ್ತದೆ. ಕ್ರಮೇಣ ಇದರಿಂದ ಇಡೀ ದೇಹಕ್ಕೆ ಪ್ರಯೋಜನವಾಗುತ್ತದೆ.

**ಉತ್ಕರ್ಷದ ದಾರಿ ತೋರುವ ಯೋಗ**

ಯೋಗವನ್ನು ನಿಜಾರ್ಥದಲ್ಲಿ ನೋಡಿದರೆ ಅದು ಆತ್ಮದ ಅರಿವಿನ ಸಾಧನ. ಬದಲಾಗುತ್ತಿರುವ ಜೀವನಶೈಲಿ ಮತ್ತು ಈಗಿನ ಆಹಾರ ಪದ್ಧತಿಯಿಂದಾಗಿ ದೇಹವೆನ್ನುವುದು ಅನಾರೋಗ್ಯದ ಗೂಡು. ತಮ್ಮ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ನಿಧಾನವಾಗಿ ಅನೇಕ ಮಂದಿ ಆಯುರ್ವೇದ ಮತ್ತು ಯೋಗದತ್ತ ವಾಲುತ್ತಿದ್ದಾರೆ.

ವೇದ ಮತ್ತು ಉಪನಿಷತ್ತಿನಲ್ಲಿ ಯೋಗದ ಬೇರುಗಳಿವೆ. ಭಾರತೀಯರ ಹೆಮ್ಮೆಯ ಕೊಡುಗೆಯಾದ ಯೋಗವು ಪಾಶ್ಚಿಮಾತ್ಯ ದೇಶಗಳಲ್ಲೂ ಜನಪ್ರಿಯವಾಗಿದೆ. ವೈಜ್ಞಾನಿಕವಾಗಿ ಯೋಗದ ಮಹತ್ವ ದೃಢಪಟ್ಟಂತೆಲ್ಲ, ಯೋಗವನ್ನು ಅನುಸರಿಸುವವರ ಸಂಖ್ಯೆ ಹೆಚ್ಚುತ್ತಿದೆ. ಹೊಸ ಮಾದರಿಗಳಲ್ಲಿ ಯೋಗವನ್ನು ಯೋಗ ಗುರುಗಳು ಪರಿಚಯಿಸುತ್ತಿದ್ದಾರೆ.

ಪ್ರಪಂಚದ ಸಂಸ್ಕೃತಿಗೆ ಭಾರತ ದೇಶ ನೀಡಿರುವ ಶ್ರೇಷ್ಠ ಕಾಣಿಕೆ ಯೋಗ. ಇಂದು ಸಹಸ್ರಾರು ಯೋಗಾಭ್ಯಾಸಿಗಳು ನಾನಾ ನಾಡುಗಳಿಂದ ಭಾರತಕ್ಕೆ ಬಂದು ಯೋಗವನ್ನು ಕಲಿತು ತಮ್ಮ ದೇಶಗಳಲ್ಲಿ ಅದರ ಹಿರಿಮೆಯನ್ನು ಸಾರುತ್ತಿದ್ದಾರೆ. ಅಮೆರಿಕದ ನ್ಯೂಯಾರ್ಕ್, ಜಪಾನಿನ ಟೋಕಿಯೋ, ಇಸ್ರೇಲಿನ ಜೆರುಸಲೆಮ್ ನಲ್ಲೆಲ್ಲಾ ಯೋಗ ಶಾಲೆಗಳಿವೆ. ಹಾಗಾಗಿ ಜಗತ್ತಿನಾದ್ಯಂತ ಯೋಗದ ಜನಪ್ರಿಯತೆ ದಿನೇ ದಿನೇ ಹೆಚ್ಚುತ್ತಿದೆ. ಹಾಗೆಯೇ ಅದರ ಪ್ರಯೋಜನದ ಅರಿವೂ ಬೆಳೆಯುತ್ತಿದೆ.

**ಜೀವನ ಯೋಗ**

ಜನಸಾಮಾನ್ಯರ ನಿತ್ಯ ಜೀವನದಲ್ಲಿ ಯೋಗಾಭ್ಯಾಸವು ಅವಶ್ಯಕವೂ, ಉಪಯುಕ್ತವೂ ಆದುದು. ಈ ಮಾತು ಕೆಲವರಿಗೆ ಆಶ್ಚರ್ಯ ಎನಿಸಬಹುದು. ಪ್ರಪಂಚವನ್ನು ತ್ಯಜಿಸಿ, ವಾನಪ್ರಸ್ಥಾಶ್ರಮವನ್ನು ಹೊಕ್ಕವರಿಗೆ, ಸನ್ಯಾಸಿಗಳಿಗೆ ಮಾತ್ರ ಯೋಗಾಭ್ಯಾಸವು ಸರಿ. ಸಂಸಾರಸ್ಥರಿಗೆ ಯೋಗಾಭ್ಯಾಸವು ಹೇಗೆ ಉಪಯುಕ್ತ ಎಂಬುದೇ ಈ ಆಶ್ಚರ್ಯ. ವರಕವಿ ಕಾಳಿದಾಸನು ಕೂಡ “ಯೋಗೇನಾಂತೆ ತನುತ್ಯಜಾಂ” ಯೋಗಾಭ್ಯಾಸದ ಸಿದ್ಧಿಯಿಂದ ಶರೀರ ತ್ಯಾಗ ಮಾಡತಕ್ಕುದು ಎಂದು ಹೇಳುತ್ತಾನಷ್ಟೆ ಹೀಗಿರುವಲ್ಲಿ ಯೋಗಾಭ್ಯಾಸವು ಸಾಮಾನ್ಯ ಜನಕ್ಕೆ ಹೇಗೆ ಉಪಯೋಗವಾದೀತು? ನಿತ್ಯ ಜೀವನಕ್ಕೂ ಯೋಗಾಭ್ಯಾಸಕ್ಕೂ ಸಂಬಂಧ ಯಾವುವು? ಹೇಗೆ? ಎಂಬುದನ್ನು ಅರ್ಥ ಮಾಡಿಕೊಳ್ಳಬೇಕಾದರೆ ಯೋಗ ಎಂಬ ಮಾತಿಗೆ ಇರುವ ನಾನಾರ್ಥಗಳನ್ನು ಗ್ರಹಿಸಬೇಕು.

ಭಗವತ್‌ಗೀತೆಯಲ್ಲಿ ಶ್ರೀಕೃಷ್ಣ ಪರಮಾತ್ಮ ಕರ್ಮಯೋಗ, ಜ್ಞಾನಯೋಗ, ಸನ್ಯಾಸಯೋಗ ಮುಂತಾಗಿ ಹೇಳುತ್ತಾನೆ. ಸ್ವಾಮಿ ವಿವೇಕಾನಂದರು ರಾಜಯೋಗ ಭಕ್ತಿಯೋಗಗಳ ಕುರಿತು ಮಾಡಿದ ಪ್ರವಚನಗಳನ್ನು ಉಪನ್ಯಾಸಗಳನ್ನು ನೀವು ಓದಿರಲಿಕ್ಕೆ ಬೇಕು. ಇಹಲೋಕದ ಸಮಸ್ತ ವ್ಯಾಪಾರಗಳಿಗೂ ದೇಹವೇ ಸಾಧನ. ದೇಹ ಎಂದರೆ ಶರೀರ, ಇಂದ್ರಿಯಗಳು, ಮನಸ್ಸು, ಅಂತಸಾಕ್ಷಿ ಎನಿಸಿರುವ ಜೀವಾತ್ಮ ಪರಮಾತ್ಮ ಇವನ್ನು ಕುರಿತದ್ದು. ಶರೀರವಿದ್ದರೇನೋ ಇವೆಲ್ಲಾ. ಶರೀರದಿಂದ ಉಳಿದವೆಲ್ಲಾ ಸಾಧ್ಯ. ಹಠಯೋಗವು ಶರೀರವನ್ನೂ, ಇಂದ್ರಿಯಗಳನ್ನೂ ಮತ್ತು ಮನಸ್ಸನ್ನೂ ಮುಖ್ಯವಾಗಿ ಆಧರಿಸಿದ್ದು. ಶರೀರವು ಐಹಿಕ ಸುಖಭೋಗಗಳಿಗೂ ಪಾರಮಾರ್ಥಿಕಕ್ಕೂ ಏಕಪ್ರಕಾರವಾದ ಸಾಧನ. ಅದಕ್ಕಾಗಿಯೇ ದೇಹವನ್ನು ದೇವರಗುಡಿಯೆನ್ನುವುದು. ಹಾಗೆಂದು ಭಾವಿಸಿಕೊಂಡು ಅದರ ಪರಿಷ್ಕರಣಕ್ಕೆ ಪರಿಶುದ್ಧಿಗೆ ನಾವು ಯತ್ನಿಸಬೇಕು. ದಷ್ಟ ಪುಷ್ಟವಾದ ಶರೀರ, ಇಂದ್ರಿಯಗಳು, ಮನಸ್ಸು ಇದ್ದವನು ಏನು ತಾನೇ ಮಾಡಲಾರ? ಆದಕಾರಣ ಜೀವನದ ತಯಾರಿಯಲ್ಲಿ ಮೊದಲು ಚೊಕ್ಕಪಡಿಸಿ ಕೊಳ್ಳಬೇಕಾದದ್ದು ದೇಹವನ್ನು.

ಅಂದರೆ ಇದೊಂದು ಅಂಗಸಾಧನೆಯ ಕ್ರಮ ಎಂದು ಭಾವಿಸಿಕೊಳ್ಳಕೂಡದು. ಹಠಯೋಗದಲ್ಲಿ ಅಂಗಸಾಧನೆಯಿದ್ದರೂ ಅದು ಅಷ್ಟೇ ಅಲ್ಲ. ಅದು ಮನುಷ್ಯನ ಇಡೀ ಇರುವಿಕೆಯನ್ನು ಕುರಿತದ್ದು. ಮನುಷ್ಯ ಬದುಕುವುದು ದೈಹಿಕ ಕ್ರಿಯೆಗಳಿಂದ ಮಾತ್ರವೇ ಅಲ್ಲ, ಮಾನಸಿಕ ಕ್ರಿಯೆಗಳಿಂದಲೂ ಅವನು ಬದುಕುತ್ತಾನೆ. ಆಧ್ಯಾತ್ಮಿಕ ವಿಶೇಷಣಗಳಿಂದಲೂ ಅವನು ಬದುಕುತ್ತಾನೆ.

ಸಮಗ್ರ ಚಿಕಿತ್ಸೆಯನ್ನೂ ಬಲ್ಲ ಏಕೈಕ ಕ್ರಮವೆಂದರೆ ಯೋಗಾಭ್ಯಾಸ. ಅದು ಪ್ರಾಚೀನ ಕಾಲದಿಂದ ಮಾನವ ಕಲ್ಯಾಣವನ್ನು ನಡೆಸುತ್ತಾ ಬಂದಿದೆ. ಅದರ ಬಗ್ಗೆ ಆಧುನಿಕರಿಗೆ ಮನವರಿಕೆ ಆಗುತ್ತಿರುವುದು ಸಂತಸದ ವಿಚಾರ. ಪಾಶ್ಚಾತ್ಯರು ಅದರ ಉಪಯುಕ್ತತೆಯನ್ನು ಮನಗಂಡ ಮೇಲಾದರೂ ಈ ಜಾಗೃತಿಯು ಯೋಗಾಭ್ಯಾಸದ ತವರಾದ ಭಾರತದಲ್ಲಿ ಉಂಟಾಗುತ್ತಿರುವುದು ಸಮಾಧಾನದ ವಿಚಾರ.



Downloaded From:www.kpscvaani.com

ಯೋಗಾಭ್ಯಾಸ ಮಾಡಲು ಬೇಕಾಗುವುದು ದಿನಕ್ಕೆ ಕೆಲವು ನಿಮಿಷಗಳು ಮಾತ್ರ. ನಮ್ಮ ಜನಕ್ಕಿರುವ ಕೊರತೆ ಸಮಯದ್ದಲ್ಲ, ಮನಸ್ಸಿನ ಸಂಕಲ್ಪದ್ದು. ಎಲ್ಲ ಭಾರತೀಯರೂ ಯೋಗಾಭ್ಯಾಸ ಮಾಡಲು ತಕ್ಕ ಕಾಲಾವಕಾಶವನ್ನು ಪಡೆದಿದ್ದಾರೆ. ಮನಸ್ಸು ಮಾಡಬೇಕು ಅಷ್ಟೆ.

ಮೈಗೆ ನೆಮ್ಮದಿ, ಮನಸ್ಸಿಗೆ ಶಾಂತಿ, ಜೀವನಕ್ಕೆ ತಂಪು ಮಾಡಿದಾಗ ಉಸಿರಾಟ ನಿಧಾನವಾಗಿ ಕ್ರಮಬದ್ಧವಾಗಿ ಸಾಗುತ್ತದೆ. ಇದನ್ನು ಯಾರು ತಾನೇ ತಿಳಿಯರು? ಆದರೆ ಇದರ ಬಗ್ಗೆ ಮುಂದಿನ ಹೆಜ್ಜೆಯನ್ನು ಇಡುವುದಿಲ್ಲ. ಹಠಯೋಗ ಅದನ್ನು ಕಲಿಸಿಕೊಡುತ್ತದೆ. ನೆಮ್ಮದಿಯಿಂದ ಉಸಿರಾಟ ಹದವಾಗಿರುವಂತೆ, ಉಸಿರಾಟವನ್ನು ಹದಗೊಳಿಸಿಕೊಳ್ಳುವುದರಿಂದ ಮೈ-ಮನಸ್ಸಿಗೆ ಅಂತರಂಗ ಶುದ್ಧಿ ಉಂಟಾಗುತ್ತದೆಂಬ ಘನವಾದ ಸತ್ಯವನ್ನು ಅದು ಸಾರುತ್ತದೆ.



**ಕ್ರಿಯಾಶೀಲತೆಗೆ ಯೋಗವೇ ಬುನಾದಿ**

ಯೋಗ ವಿದ್ಯೆ ಎಂಬುದೊಂದು ಮಹಾಸಾಗರವಿದ್ದಂತೆ. ಸಾಗರದಲ್ಲಿ ಮೇಲೆ ತೋರುವ ತೆರೆನೊರೆಗಳನ್ನಷ್ಟೇ ಕಂಡು ಸಂತೃಪ್ತಿಗೊಂಡರೆ ಅದರ ಸಮೃದ್ಧತೆಯನ್ನು ಅರಿತಂತಾಗುವುದಿಲ್ಲ. ಅಲ್ಲೂ ಮನತಣಿಸುವ ಸೌಂದರ್ಯವನ್ನು ಕಾಣಬಹುದಾದರೂ ಸಮುದ್ರದ ಸಂಪತ್ತಿರುವುದು ಅದರ ತಳಪಾಯದಲ್ಲಿ. ಅಲ್ಲಿ ನಿಗೂಢವಾದ ಐಶ್ವರ್ಯದ ಖನಿಯೇ ಇದೆ. ಕೇವಲ ಹಡಗಿನಲ್ಲೋ, ನಾವೆಯಲ್ಲೋ ಸಾಗರದಲ್ಲಿ ಸಂಚರಿಸಿದ ಮಾತ್ರಕ್ಕೆ ಅದರಲ್ಲಿಯ ಸಂಪದ ಶ್ರೀಯನ್ನು ಹೊಂದಲು ಸಾಧ್ಯವೇ? ಅದೇ ರೀತಿಯಲ್ಲಿ ಯೋಗದ ವಿಷಯದಲ್ಲಿ ನಾಲ್ಕು ಪುಸ್ತಕಗಳನ್ನು ಓದಿದಾಕ್ಷಣ, ಕೆಲಕಾಲ ಆ ಕ್ಷೇತ್ರದಲ್ಲಿ ಸಾಧನೆ ಮಾಡಿದಾಕ್ಷಣ ಯೋಗ ಮಹಾಂಬುಧಿಯ ಆಳವನ್ನಾಗಲೀ ಅಥವಾ ಆದರ ಮಗತ್ವವನ್ನಾಗಲೀ ಅರಿಯಲು ಸಾಧ್ಯವೇ ಇಲ್ಲ. ಇಳಿಯಬೇಕು; ಆಳವಾಗಿ ಇಳಿದು ಅಧ್ಯಯನ ಮಾಡಬೇಕು; ಅದರ ಮಹತ್ವವನ್ನು ತಿಳಿಯುವ ಮಹತ್ವಾಕಾಂಕ್ಷೆಯಿಂದ ಜೀವನವನ್ನೇ ಮುಡುಪಾಗಿಟ್ಟು ಸಾಧನೆ ಮಾಡಬೇಕು. ಆಗ ಮಾತ್ರ ಯೋಗವಿದ್ಯೆಯ ಒಂದೊಂದು ದಿವ್ಯ ರತ್ನಗಳನ್ನು ಹೊಂದಲು ಸಾಧ್ಯ.



ಮಾನವ ಶರೀರವೆಂಬುದೊಂದು ಭಗವಂತನ ಅದ್ಭುತ ರಮ್ಯ ಸೃಷ್ಟಿ. ಮಹಾಶಿಲ್ಪಿಯಾದ ಆತನು ಮನುಷ್ಯನ ದೇಹದಲ್ಲೇ ಸೂಕ್ಷ್ಮವಾದ ಬ್ರಹ್ಮಾಂಡವನ್ನು ರಚಿಸಿ ತನ್ನೀರಚನೆಯ ಮೋಹಕ ಸೃಷ್ಟಿಯನ್ನು ಕಂಡು ತಾನೇ ಆಕರ್ಷಿತನಾಗಿ ಅಂಶರೂಪನಾಗಿ ಅಲ್ಲಿಯೇ ವಿರಾಜಮಾನನಾಗಿದ್ದಾನೆ. ಇದನ್ನೇ ಒಬ್ಬ ಕನ್ನಡ ಜಾನಪದಕವಿಯು "ದೇವಕಟ್ಟಿದ ಗುಡಿಯ ನೋಡಣ್ಣಾ" ಎಂದು ಅರ್ಥಗರ್ಭಿತವಾಗಿ ಮಾನವ ಶರೀರವನ್ನು ವರ್ಣಿಸಿದ್ದಾನೆ. ಸಾಕ್ಷಾತ್ ಭಗವಂತನೇ ವಾಸವಾಗಿರುವ ಈ ಮನುಷ್ಯ ದೇಹದಲ್ಲಿ ಸರ್ವಲೋಕ.

ಯೋಗಾಭ್ಯಾಸಿಗೆ ಆಹಾರ ನಿಯಮ, ವಿಹಾರ ನಿಯಮ, ವಾಕ್ ನಿಯಮ ಇತ್ಯಾದಿಗಳು ಮುಖ್ಯವಾಗಿರುತ್ತವೆ. ಆಹಾರ ವಿಹಾರಾದಿ ನಿಯಮಗಳಿಲ್ಲದವರು ಯೋಗಾಭ್ಯಾಸವನ್ನು ಮಾಡಿದರೂ ಯೋಗದ ಗುರಿಯನ್ನು ಸಾಧಿಸಲು ಸಾಧ್ಯವಾಗಲಾರದು. ಆದಕಾರಣ ಆಹಾರ ವಿಹಾರಾದಿಗಳು ಅತಿ ಮುಖ್ಯ. ಆಹಾರವು ಶುದ್ಧವಾಗಿದ್ದರೆ ಅಂತಃಕರಣವು ಶುದ್ಧವಾಗಿ ವಿಚಾರಜ್ಞಾನ ಉಂಟಾಗುವುದು. ವಿಚಾರಜ್ಞಾನದಿಂದ ಸ್ಮೃತಿಜ್ಞಾನವುಂಟಾಗುವುದು. ನಾವು ಯಾವ ವಿಧವಾದ ಆಹಾರವನ್ನು ಸೇವಿಸಿದರೆ ಆ ರೀತಿಯ ಮನವು ವೃದ್ಧಿಯಾಗುತ್ತದೆ. ಆಹಾರದಿಂದಲೇ ಮನಸ್ಸು ವೃದ್ಧಿ ಕ್ಷಯಗಳನ್ನು ಹೊಂದುತ್ತದೆ. ಆದ ಕಾರಣ ಆಹಾರ ಶುದ್ಧಿಯು ಮುಖ್ಯವಾದುದು. ಶುದ್ಧವಾದ ಆಹಾರ ಸೇವನೆಯಿಂದ, ವಿಚಾರಜ್ಞಾನದಿಂದ ಸ್ಮೃತಿಜ್ಞಾನ ಉಂಟಾಗುತ್ತದೆ. ಸ್ಮೃತಿಜ್ಞಾನದಿಂದ ಆತ್ಮಜ್ಞಾನಿಯಾಗಲು ಸಾಧ್ಯ. ಹಾಗಲ್ಲದೆ ಕೇವಲ ಭೌತಿಕ ವಾದದಲ್ಲಿಯೇ ನಿರತವಾದ ಮನವು ಭೌತಿಕ ವಿಜ್ಞಾನದಲ್ಲಿಯೇ ತೊಳಲಿ ಬೆಂಡಾಗಿ ಇಹಪರಗಳ ಸೌಖ್ಯವನ್ನು ತಿಳಿದು ಅನುಭವಿಸಲು ಶಕ್ತವಾಗಲಾರದು.



Downloaded From:www.kpscvaani.com



# ಮೋರೇರ ಶಿಲಾ ಸಮಾಧಿಗಳು

## ವಿಶ್ವ ಪಾರಂಪರಿಕ ತಾಣಗಳ ತಾತ್ಕಾಲಿಕ ಪಟ್ಟಿಗೆ

**ಕೊಪ್ಪಳ ಜಿಲ್ಲೆಯ ಗಂಗಾವತಿಯ ಹಿರೇಬೆಣಕಲ್‌ನ ಮೋರೇರ ಗುಡ್ಡದಲ್ಲಿರುವ ಆದಿಮಾನವರ ಶಿಲಾ ಸಮಾಧಿಗಳು ವಿಶ್ವ ಪಾರಂಪರಿಕ ತಾಣಗಳ ತಾತ್ಕಾಲಿಕ ಪಟ್ಟಿಗೆ ಸೇರ್ಪಡೆಗೊಂಡಿದೆ.**

ಡಾ. ವರ ಪ್ರಸಾದ್‌ರಾವ್ ಪಿ.ವಿ

ಹಿರೇಬೆಣಕಲ್ ಮೋರೇರ ಗುಡ್ಡ ಇಡೀ ದಕ್ಷಿಣ ಭಾರತದಲ್ಲೇ ಅತಿ ದೊಡ್ಡ ಮೆಗಾಲಿಥಿಕ್ ತಾಣವಾಗಿದೆ. ಇವು ಮೋರೇರ ಇತಿಹಾಸ ಹಾಗೂ ಕಬ್ಬಿಣಯುಗದ ಬೃಹತ್ ಶಿಲಾಯುಗದ ಸಂಸ್ಕೃತಿಯನ್ನು ನೆನಪಿಸುತ್ತದೆ. ಬೆಟ್ಟದ ತುದಿಯಲ್ಲಿ 600 ಕ್ಕೂ ಹೆಚ್ಚು ಸಮಾಧಿಗಳಿದ್ದು, ದೇಶ, ವಿದೇಶಿ ಪ್ರವಾಸಿಗರು ಆಗಾಗ ಇಲ್ಲಿಗೆ ಭೇಟಿ ಕೊಡುವುದರಿಂದ ಕಾಲುದಾರಿಯೇ ಚಾರಣಿಗರಿಗೆ ಅಚ್ಚುಮೆಚ್ಚಿನ ತಾಣವಾಗಿದೆ.

ವಿಶ್ವ ಪಾರಂಪರಿಕ ತಾಣಗಳ ತಾತ್ಕಾಲಿಕ ಪಟ್ಟಿಯಲ್ಲಿ ಸೇರಿರುವ ಕ್ರಿಸ್ತ ಪೂರ್ವ 10ನೇ ಶತಮಾನಗಳಷ್ಟು ಹಳೆಯದಾದ ಮೋರೇರ ಶಿಲಾ ಸಮಾಧಿಗಳು ಹಾಗೂ ಗುಹಾಚಿತ್ರಗಳು ಇದೀಗಾ ಕರ್ನಾಟಕ ಪ್ರವಾಸೋದ್ಯಮ ಇಲಾಖೆ ವ್ಯಾಪ್ತಿಯ ಕರ್ನಾಟಕದ ಏಳು ಅದ್ಭುತಗಳ ಪಟ್ಟಿಯಲ್ಲಿ ಸೇರ್ಪಡೆಗೊಂಡಿದೆ. ಇದರಿಂದ ಐತಿಹಾಸಿಕ ಸ್ಥಳಕ್ಕೆ ಜಾಗತಿಕ ಮನ್ನಣೆ ದೊರೆತಂತಾಗಿದೆ. ಪ್ರಪಂಚದ ಏಳು ಅದ್ಭುತಗಳಲ್ಲಿ ಹೇಗೋ, ನಮಗೆ ಕರ್ನಾಟಕದ ಏಳು ಅದ್ಭುತಗಳು ಹಾಗೆ. ಈ ತಾಣದ ಬಗ್ಗೆ ವಿಶೇಷ ಲೇಖನ ಇಲ್ಲಿದೆ.

ಮೌರ್ಯರ ಗುಡ್ಡ ಅಥವಾ ಮೋರೇರ ಗುಡ್ಡ ಎಂದು ಕರೆಯಲ್ಪಡುವ ಹಿರೇಬೆಣಕಲ್ ಬೆಟ್ಟವು ತಾಲ್ಲೂಕು ಕೇಂದ್ರವಾದ ಗಂಗಾವತಿಯಿಂದ ಸುಮಾರು 10 ಕಿ.ಮೀ ಅಂತರದಲ್ಲಿದೆ. ಕೊಪ್ಪಳ–ಗಂಗಾವತಿ ಮುಖ್ಯರಸ್ತೆಯಿಂದ ಸುಮಾರು 4 ಕಿ.ಮೀ ದೂರದಲ್ಲಿ ಈ ಹಿರೇಬೆಣಕಲ್ ಗ್ರಾಮವಿದ್ದು, ಸುಮಾರು 2 ಕಿ.ಮೀ ದೂರದಲ್ಲಿ ವಿಶಾಲವಾಗಿ ಹರಡಿಕೊಂಡಿರುವ ಎತ್ತರವಾದ ಬೆಟ್ಟದಲ್ಲೇ ಈ ಶಿಲಾ ಸಮಾಧಿಗಳಿವೆ. ಕೊಪ್ಪಳ ಜಿಲ್ಲಾ ಕೇಂದ್ರದಿಂದ ಸುಮಾರು 45 ಕಿ.ಮೀ ದೂರದಲ್ಲಿದೆ. ಬೆಂಗಳೂರಿನಿಂದ 360 ಕಿಮೀ ದೂರದಲ್ಲಿರುವ ಈ ಐತಿಹಾಸಿಕ ತಾಣವನ್ನು ರಸ್ತೆ ಸಾರಿಗೆಯ ಮೂಲಕ 5 ಗಂಟೆಗಳಲ್ಲಿ ತಲುಪಬಹುದು.


Downloaded From:www.kpscvaani.com







ಹಂಪಿಯ ಭವ್ಯ ಸ್ಮಾರಕಗಳಿಂದ ಸುಮಾರು 50 ಕಿಲೋಮೀಟರ್ ದೂರದಲ್ಲಿರುವ ಮಧ್ಯ ಕರ್ನಾಟಕದ ಬೆಟ್ಟಗಳಲ್ಲಿ ಇದು ಅಡಗಿದೆ.

ಮಹಾಶಿಲಾಯುಗದ ತಾಣಗಳು ದಕ್ಷಿಣ ಭಾರತದಾದ್ಯಂತ ಹರಡಿಕೊಂಡಿದ್ದು, ಇಲ್ಲಿ ಸುಮಾರು 600ಕ್ಕೂ ಅಧಿಕ ಶಿಲಾಸಮಾಧಿಗಳಿದ್ದವೆಂದು ಹೇಳಲಾಗುತ್ತಿದೆ. ಆದರೆ ಪ್ರಸ್ತುತವಾಗಿ ಸುಮಾರು 500 ಶಿಲಾಸಮಾಧಿಗಳು ಮಾತ್ರ ಉಳಿದಿರಬಹುದೆಂದು ಅಂದಾಜಿಸಲಾಗಿದೆ.

ಪ್ರಾಚೀನ ಸ್ಮಾರಕಗಳ ಮತ್ತು ಪುರಾತತ್ವ ಅಧಿನಿಯಮ 1958ರ ಪ್ರಕಾರ ರಾಷ್ಟ್ರೀಯ ಮಹತ್ವದ ಸ್ಮಾರಕವೆಂದು ಈ ಪ್ರದೇಶವನ್ನು ಘೋಷಿಸಿದ್ದು, ಪುರಾತತ್ವ ಇಲಾಖೆ ಶಿಫಾರಸು ಮಾಡಿರುವ ಈ ಪ್ರದೇಶ 'ಆದಿ ಮಾನವರ ಶಿಲಾ ಸ್ಮಾರಕ' ಎಂದೇ ಹೆಸರಾಗಿದೆ. ಅನೇಕ ಸಮಾಧಿಗಳು ಸುಸ್ಥಿತಿಯಲ್ಲಿದ್ದು, ಸಂಶೋಧಕರಿಗೆ ಜ್ಞಾನ ನಿಧಿಯಂತೆ ಕೆಲಸ ಮಾಡುತ್ತಿವೆ. ಲಂಡನ್ನಿನ ಸ್ಟೋನ್ ಹೆಂಜಸ್, ಈಜಿಪ್ಟಿನ ಪಿರಮಿಡ್ಡುಗಳು, ಬಹರೈನಿನ ದಿಲ್ಮನ್ ಸಮಾಧಿ ದಿಬ್ಬಗಳಂತೆ ಇವು ಕೂಡ ಸಾವಿನ ಗೌರವ ಸೂಚಕ ಶಿಲಾ ಸಮಾಧಿಗಳಾಗಿವೆ.

**ಮೋರೇರ ಬೆಟ್ಟದ ಇತಿಹಾಸ:**

ಪ್ರಕೃತಿಯ ಮಡಿಲಿನೊಳಗೆ ಅಂಕುಡೊಂಕಾದ ಕಿರಿದಾದ ದಾರಿಯಲ್ಲಿ ಸಾಗುವುದು ಒಂದು ರೋಮಾಂಚನ ಅನುಭವ ನೀಡುತ್ತದೆ. ಹಿರೇಬೆಣಕಲ್ ಚಿಕ್ಕಬೆಣಕಲ್ ಗ್ರಾಮಗಳ ವ್ಯಾಪ್ತಿಯ ಬೆಟ್ಟಗಳಲ್ಲಿ ವಿಶೇಷವಾಗಿ ಮೋರೇರ ಗುಡ್ಡ, ಮಳೆಯಮ್ಮನ ಊಟಿ, ತಳವಾರನ ಮೂಲೆ, ದುರ್ಗದಡಿ  ಎಂದು ಕರೆಯುವ ಸ್ಥಳಗಳಲ್ಲಿ ಸುಮಾರು 3000–4000 ವರ್ಷಗಳಷ್ಟು ಹಳೆಯ ಇತಿಹಾಸವಿರುವ ಪ್ರಾಚ್ಯಾ ಅವಶೇಷಗಳಿವೆ. ಬೆಟ್ಟದ ತುದಿಯಲ್ಲಿ ಸುಮಾರು 500 ಹೆಚ್ಚು ಸಮಾಧಿಗಳಿವೆ. ಪ್ರಕೃತಿಯ ನೈಜ ಶಿಲೆಗಳ ನಾನಾ ಆಕಾರಗಳು ನೋಡುಗರ ಗಮನ ಸೆಳೆಯುತ್ತವೆ. ಚಿಕ್ಕ ಮಕ್ಕಳಿಗೆ ಚಿಕ್ಕ ಹಾಸುಗಲ್ಲಿನಿಂದ ನಾಲ್ಕು ಗೋಡೆಯಾಕಾರದಲ್ಲಿ ನಿರ್ಮಿಸಿ ಮೇಲ್ಗಡೆ ತಟ್ಟೆಯಾಕಾರದ ಕಲ್ಲು ಹೊದಿಕೆ ಹೊಚ್ಚಿಸಲಾಗಿದೆ. ಇದು ಸುಮಾರು ಕ್ರಿ.ಪೂ. 1200 ರಿಂದ ಕ್ರಿ.ಪೂ 2000 ರಷ್ಟರವರೆಗಿನ ಮೋರೇರು ಇತಿಹಾಸ ಹಾಗೂ ಕಬ್ಬಿಣಯುಗದ ಬೃಹತ್ ಶಿಲಾಯುಗದ ಸಂಸ್ಕೃತಿಯನ್ನು ನೆನಪಿಸುತ್ತದೆ ಎಂದು ಇತಿಹಾಸ ತಜ್ಞರಾದ ಡಾ. ಶರಣ ಬಸಪ್ಪ ಕೋಲ್ಕಾರ ಹೇಳುತ್ತಾರೆ.

ಪ್ರಾಚೀನ ಕಾಲದಲ್ಲಿ ಆದಿಮಾನವರು ಈ ಬೆಟ್ಟದ ಮೇಲೆಯೇ ವಾಸವಾಗಿದ್ದರೆಂಬುದಕ್ಕೆ ಸಾಕಷ್ಟು ಪುರಾವೆಗಳು ಇಲ್ಲಿ ದೊರೆತಿವೆ. ಅವರು ವಾಸವಾಗಿದ್ದ ಗುಹೆಗಳನ್ನು ಇಂದಿಗೂ ಸಹ ಇಲ್ಲಿ ವಿಕ್ಷಿಸಬಹುದು. ಇದಕ್ಕೆ ಸಂಬಂಧಪಟ್ಟ ಸಂಸ್ಕೃತಿಯ ಬೂದಿ ದಿಬ್ಬ, ಗುಹಾ ಚಿತ್ರಗಳು ಕೂಡ ಇಲ್ಲಿ ದೊರಕಿವೆ. ಇವುಗಳಲ್ಲದೇ ಆದಿಮಾನವರು ಉಪಯೋಗಿಸುತ್ತಿದ್ದ ಮಡಿಕೆ ಚೂರುಗಳು, ನೀಳಚಕ್ಕೆ, ಶಿಲಾಗಟ್ಟಿಗಳು ದೊರಕಿವೆ. ವಿಶೇಷವಾಗಿ ಅನೇಕ ಗವಿವರ್ಣ ಚಿತ್ರಗಳನ್ನೂ ಸಹ ಇಲ್ಲಿ ಕಾಣಬಹುದಾಗಿದೆ.  ಅಲ್ಲಿನ ಕಲ್ಲು ಬಂಡೆಗಳ ಮೇಲೆ ಜಿಂಕೆ, ನವಿಲು, ಹುಲ್ಲೆ, ಎತ್ತುಗಳು, ಕುದುರೆಗಳು ಮತ್ತು ಹಸು ಮುಂತಾದ ಪ್ರಾಣಿಗಳ ವರ್ಣ ಚಿತ್ರ ಬಿಡಿಸಿರುವುದನ್ನು ಕಾಣಬಹುದು.

ಕೈ ಹಿಡಿದು ನಿಂತಿರುವ ಮನುಷ್ಯನ ಹೋಲುವ ಚಿತ್ರಗಳು ಹಾಗೂ ಮಹಿಳೆಯ ಪ್ರಸವ ವೇದನೆಯ ಚಿತ್ರ, ಕುದುರೆ ಮೇಲೆ ಕುಳಿತಿರುವ ವರ್ಣ ಚಿತ್ರಗಳಿವೆ. ವರ್ಣಚಿತ್ರ ಬಿಡಿಸಲು ಪ್ರಕೃತಿಯಲ್ಲಿ ದೊರೆಯುವ ನಾನಾ ಸಸ್ಯಗಳ ರಸ ಹಾಗೂ ಕಾಡು ಹಂದಿಯ ರಕ್ತ ಮಿಶ್ರಣದಿಂದ ವರ್ಣಚಿತ್ರ ಬಿಡಿಸುತ್ತಿದ್ದರು



Downloaded From:www.kpscvaani.com

ಎನ್ನುವುದು ಡಾ. ಶರಣ ಬಸಪ್ಪ ಕೋಲ್ಕಾರ ಅವರ ಅಭಿಪ್ರಾಯ.

ಹೈದರಾಬಾದಿನ ನಿಜಾಮನ ಸೇವೆಯಲ್ಲಿದ್ದ ಫಿಲಿಪ್ ಮೆಡೋಸ್‌ಟೇಲರ್ ಅವರು 1835 ರಲ್ಲಿ ಜರ್ನಲ್ ಆಫ್ ದಿ ರಾಯಲ್ ಏಷಿಯಾಟಿಕ್ ಸೊಸೈಟಿಯಲ್ಲಿ ಹಿರೇಬೆಣಕಲ್ ಬಗ್ಗೆ ಪ್ರಕಟಿಸಿದ ಮೊದಲ ವರದಿಯಾಗಿದೆ. ನಂತರ ಒಂದು ಶತಮಾನಕ್ಕೂ ಹೆಚ್ಚು ಕಾಲ, ಈ ತಾಣದಲ್ಲಿ ಯಾವುದೇ ವ್ಯವಸ್ಥಿತ ಅಧ್ಯಯನವನ್ನು ನಡೆಸಲಾಗಿಲ್ಲ. 1944 ಮತ್ತು 1948ರ ನಡುವೆ, ಸರ್ ಮಾರ್ಟಿಮರ್ ವೀಲರ್ ಪುರಾತತ್ವ ಶಾಸ್ತ್ರದ ಉತ್ಖನನಗಳನ್ನು ಕೈಗೊಂಡರು. ಇವುಗಳನ್ನು ಅಡಿಗ ಸುಂದರ ಅವರು ಪೂರಕವಾಗಿ 1975ರಲ್ಲಿ ಪ್ರಕಟಿಸಿದರು. ಸುಂದರ ಅವರ "ದ ಅರ್ಲಿ ಚೇಂಬರ್ ಟೂಂಬ್ಸ್ ಆಫ್ ಸೌತ್ ಇಂಡಿಯಾ, "ಎ ಸ್ಟಡಿ ಆಫ್ ದಿ ಐರನ್ ಏಜ್ ಮೆಗಾಲಿಥಿಕ್ ಮಾನುಮೆಂಟ್ಸ್ ಆಫ್ ನಾರ್ತ್ ಕರ್ನಾಟಕ" ಎಂಬ ಪ್ರಕಟಣೆಯಲ್ಲಿ ದಟ್ಟ ಅರಣ್ಯದಿಂದ ಸುತ್ತುವರಿದ ಈ ಸ್ಥಳದಲ್ಲಿ ಬೃಹತ್ ಶಿಲಾ ಸಮಾಧಿ ಕೋಣೆಗಳಿರುವ ಕುರಿತು ವಿವರಿಸಿದ್ದಾರೆ. 2010ರಲ್ಲಿ ಕಲಬುರಗಿ ಪ್ರಾದೇಶಿಕ ಆಯುಕ್ತರಾಗಿದ್ದ ರಜನೀಶ್ ಗೋಯಲ್ ಈ ಸ್ಥಳಕ್ಕೆ ಭೇಟಿ ನೀಡಿ ಇತಿಹಾಸ ತಜ್ಞರಿಂದ ಮನವಿ ಸ್ವೀಕರಿಸಿ ವೀಕ್ಷಿಸಿದ್ದರು.

ಕರುನಾಡಿನ ನೆಲ, ಜಲ, ಕಾಡು, ಕಡಲು, ವಾಸ್ತು, ವಿಜ್ಞಾನ, ಶಿಲ್ಪ, ಕಲೆ, ಇತಿಹಾಸ, ಪರಂಪರೆ, ಕನ್ನಡಿಗರ ತತ್ವ ಸಿದ್ಧಾಂತಗಳೂ ಸೇರಿದಂತೆ ರಾಜ್ಯದ ಎಲ್ಲ ವೈವಿಧ್ಯಗಳ ಪ್ರಾತಿನಿಧಿಕ ಹೆಗ್ಗುರುತುಗಳು ಎನಿಸುವಂತಹ 'ಏಳು ಅದ್ಭುತ ತಾಣ'ಗಳ ಆಯ್ಕೆಗೆ ಸುದೀರ್ಘ ಅಭಿಯಾನವನ್ನು ಖಾಸಗಿ ಸುದ್ದಿ ಸಂಸ್ಥೆಯೊಂದಿಗೆ ಕರ್ನಾಟಕ ಪ್ರವಾಸೋದ್ಯಮ ಇಲಾಖೆಯು ನಡೆಸಿತ್ತು. 'ಕರ್ನಾಟಕದ 7 ಅದ್ಭುತ' ಗಳಿಗಾಗಿ ರಾಜ್ಯದ ಮೂಲೆ ಮೂಲೆಯ ಜನರು ಐದು ಸಾವಿರಕ್ಕೂ ಹೆಚ್ಚು ತಾಣಗಳನ್ನು ನಾಮ ನಿರ್ದೇಶನ ಮಾಡಿದ್ದರು. ಇವುಗಳನ್ನು ಆಂತರಿಕ ತೀರ್ಪುಗಾರರ ಸಮಿತಿಯು ಪರಿಶೀಲಿಸಿ ಉತ್ತಮ ಎನಿಸುವಂತಹ 100 ತಾಣಗಳನ್ನು ಆರಿಸಿತ್ತು. ಬಳಿಕ ಈ 100 ತಾಣಗಳನ್ನು ಜನಮತ ಪರೀಕ್ಷೆಗೆ ಒಡ್ಡಲಾಯಿತು.

ಸುದ್ದಿ ಮಾಧ್ಯಮದಲ್ಲಿ ನೀಡಲಾದ ಕರೆಯ ಮೇರೆಗೆ ವೆಬ್‌ಸೈಟ್ ಹಾಗೂ ಆನ್‌ಲೈನ್ ಮಾಧ್ಯಮಗಳ ಮೂಲಕ ಸುಮಾರು 82 ಲಕ್ಷಕ್ಕೂ ಹೆಚ್ಚು ಮತ ಚಲಾವಣೆಯಾಗಿದ್ದವು. ಈ ಪೈಕಿ ಅತಿ ಹೆಚ್ಚು ಜನಮತ ಪಡೆದ 21 ತಾಣಗಳನ್ನು ಅಂತಿಮ ಸುತ್ತಿಗೆ ಆರಿಸಲಾಗಿತ್ತು. ಒಂದು ವರ್ಷದ ಕಾಲ ಸುದೀರ್ಘ ಸ್ಥಳ ಸಮೀಕ್ಷೆ ನಡೆಸಿದ ಬಳಿಕ ಈ ತಾಣಗಳನ್ನು ಜಾಗತಿಕ ಪ್ರವಾಸೋದ್ಯಮ ಹಾಗೂ ಇತಿಹಾಸ ತಜ್ಞರಿರುವ ಏಳು ತೀರ್ಪುಗಾರರ ಸಮಿತಿಯ ಮುಂದಿಡಲಾಗಿತ್ತು. ಈ ಸಮಿತಿಯ ಸದಸ್ಯರು 7 ಅಂಶಗಳ ಮಾನದಂಡಗಳನ್ನು ಮುಂದಿಟ್ಟು ವಿಜೇತ ತಾಣಗಳ ಆಯ್ಕೆಗೆ ವಿಚಾರ ಮಂಥನ ನಡೆಸಿದರು. ಚಾರಿತ್ರಿಕ, ನಿರ್ಮಾಣ ಹಾಗೂ ಬಳಕೆಯಾದ ದ್ರವ್ಯ, ವೈಶಿಷ್ಟ ಮತ್ತು ಅನನ್ಯತೆ, ಸೌಂದರ್ಯ ಮತ್ತು ಕಲಾತ್ಮಕತೆ, ಬೃಹದಾಕಾರ, ಸುಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಅಂತಿಮವಾಗಿ 7 ಅದ್ಭುತಗಳನ್ನು ಒಮ್ಮತದಿಂದ ಆರಿಸಿದರು.

ಕರ್ನಾಟಕ ಪ್ರವಾಸೋದ್ಯಮದ ಈ ಉಪಕ್ರಮವು ಕರ್ನಾಟಕ ಸರ್ಕಾರ, ಕರ್ನಾಟಕ ರಾಜ್ಯ ಸಾರಿಗೆ ಅಭಿವೃದ್ಧಿ ನಿಗಮ ಮತ್ತು ಜಂಗಲ್ ಲಾಡ್ಜ್‌ಗಳು ಮತ್ತು ರೆಸಾರ್ಟ್‌ಗಳಿಂದ ಬೆಂಬಲಿತವಾಗಿದೆ. ಕರ್ನಾಟಕದ ಏಳು ಅದ್ಭುತಗಳನ್ನು ಆಯ್ಕೆ ಮಾಡುವುದು ಒಂದು ಸವಾಲೇ ಆಗಿತ್ತು. ಏಕೆಂದರೆ ಕರ್ನಾಟಕದಲ್ಲಿ ಸಾಕಷ್ಟು ಪ್ರವಾಸಿ ಆಕರ್ಷಕ, ಐತಿಹಾಸಿಕ, ನೈಸರ್ಗಿಕ ಸ್ಥಳಗಳಿವೆ. ಕರ್ನಾಟಕದ ಏಳು ಅದ್ಭುತಗಳ ಆಯ್ಕೆ ಪ್ರಕ್ರಿಯೆಯನ್ನು ಮೇ 2022 ರಲ್ಲಿ ಪ್ರಾರಂಭಿಸಲಾಯಿತು. ನಂತರ ಕಠಿಣ ಆಯ್ಕೆ ಮತ್ತು ಮತದಾನದ ಮೂಲಕ ಕರ್ನಾಟಕದ 7 ಅದ್ಭುತಗಳನ್ನು 25 ಫೆಬ್ರವರಿ 2023 ರಂದು ತಜ್ಞರ, ತೀರ್ಪುಗಾರರ ಮೌಲ್ಯಮಾಪನದ ನಂತರ ಘೋಷಿಸಲಾಯಿತು. ಈ ಏಳು ಅದ್ಭುತಗಳು ರಾಜ್ಯದ ಅಗಾಧ ವೈವಿಧ್ಯತೆಯನ್ನು ಪ್ರದರ್ಶಿಸುವ ವಿಶಿಷ್ಟ ವರ್ಗವನ್ನು ಪ್ರತಿನಿಧಿಸುತ್ತವೆ. ನಟ, ನಿರ್ದೇಶಕ ರಮೇಶ್ ಅರವಿಂದ್ ಈ ಅಭಿಯಾನದ ರಾಯಭಾರಿಯಾಗಿದ್ದರು.

ಇದರಿಂದಾಗಿ ಕರ್ನಾಟಕದ ಪ್ರಾಗೈತಿಹಾಸಿಕ ಕಾಲದ ಜೀವನ ಸಂಸ್ಕೃತಿಯನ್ನು ಹೆಚ್ಚು ಹೆಚ್ಚಾಗಿ ತಿಳಿದುಕೊಳ್ಳಲು ಸಾಧ್ಯವಾಗಿದೆ. ಹಿರೇಬೆಣಕಲ್ ಮೊರೇರ ಗುಡ್ಡವು ಮೇಲೆ ಗಮನಿಸಿದಂತೆ ಬೃಹತ್ ಶಿಲಾಯುಗದ ಜನರ ವಸತಿ ನೆಲೆಯಾಗಿದ್ದು, ಅವರ ಜೀವನ ಸಂಸ್ಕೃತಿಯನ್ನು ಬಿಂಬಿಸುವ ಹಲವಾರು ಅಪೂರ್ವ ಅವಶೇಷಗಳನ್ನು ಹೊಂದಿದ್ದು, ಆ ಮೂಲಕ ನಾಡಿನ ಮಹತ್ವದ ಪ್ರಾಗೈತಿಹಾಸಿಕ ಕಾಲದ ನೆಲೆಯಾಗಿದೆ. ■

### 'ಕರ್ನಾಟಕದ 7 ಅದ್ಭುತ'ದಲ್ಲಿ ಇದು ಒಂದು

ಬೆರಳೆಣಿಕೆಯಷ್ಟು ಪುರಾತತ್ವ ಶಾಸ್ತ್ರಜ್ಞರನ್ನು ಹೊರತುಪಡಿಸಿ ಈ ಸ್ಥಳವು ಹೊರಗಿನ ಜಗತ್ತಿಗೆ ತಿಳಿದಿಲ್ಲ. ಹೀಗಾಗಿ ಕರ್ನಾಟಕ ಪ್ರವಾಸೋದ್ಯಮ ಇಲಾಖೆಯು ಮಹತ್ವದ ಹೆಜ್ಜೆ ಇಟ್ಟಿದೆ. ಇದನ್ನು ಇನ್ನಷ್ಟು ಜನಪ್ರಿಯತೆ ಮಾಡಿ ವಿಶ್ವದ ಎಲ್ಲಡೆ ಪರಿಚಯಿಸಲು ಮುಂದಾಗಿ ಕರ್ನಾಟಕದ ಏಳು ಅದ್ಭುತಗಳ ಪಟ್ಟಿಯಲ್ಲಿ ಸೇರಿಸಿದೆ.





Downloaded From:www.kpscvaani.com



# ಹುಬ್ಬಳ್ಳಿಯ ತೋಳನ ಕೆರೆ



● ಸುಭಾಸ ಯಾದವಾಡ

ಹುಬ್ಬಳ್ಳಿ ಹೂ-ಬಳ್ಳಿಗಳ ಊರು. ಹಾಗೇ ಅದು ಕೆರೆ, ಬೆಟ್ಟ-ಗುಡ್ಡಗಳ ಊರೂ ಕೂಡ. ಅಲ್ಲಿನ ಒಂದು ಕೆರೆ, ಇನ್ನೇನು ಮುಚ್ಚಿಯೇ ಹೋಯಿತು... ಕಾಲಗರ್ಭ ಸೇರಲಿದೆ ಎಂಬ ಸ್ಥಿತಿಗೆ ಬಂದಿತ್ತು. ಆ ಕೆರೆಯ ಹೆಸರೇ ತೋಳನ ಕೆರೆ. ಈಗ ಅದು ಪೂರ್ಣ ಪ್ರಮಾಣದಲ್ಲಿ ಅಭಿವೃದ್ಧಿ ಹೊಂದಿದೆ. ಅಭಿವೃದ್ಧಿ ಮಾರ್ಗದಲ್ಲೂ ಹಲವಾರು ತೊಂದರೆಗಳು ಬಂದದ್ದುಂಟು. ಕೆರೆಗೆ ಕೊಳಚೆ ನೀರು ಸೇರಿ ಅಲ್ಲಿನ ಮೀನುಗಳು ಸೇರಿದಂತೆ ಜಲಚರಗಳೆಲ್ಲಾ ಸತ್ತು ಕೆರೆಯಲ್ಲಿ ತೇಲಿದ್ದುಂಟು. ಇದರಿಂದ ಜನ ಜಾಗೃತರಾಗಿ ಅಧಿಕಾರಿಗಳ ಗಮನ ಸೆಳೆದು ಪರಿಹಾರ ಕಂಡುಕೊಂಡರು. ಈಗಲೂ ಆ ಆತಂಕದ ತೂಗು ಕತ್ತಿ ಕೆರೆಯ ಮೇಲೆ ತೂಗುತ್ತಲೇ ಇದೆ. ಅದಕ್ಕೆ ಪರಿಹಾರವಾಗಿ ಕೊಳಚೆ ನೀರು ಸಂಸ್ಕರಣಾ ಘಟಕ ಕಾರ್ಯ ಮಾಡುತ್ತಿದೆ.

ಹಿಂದೆ, ಆ ಕೆರೆಯ ಸುತ್ತಮುತ್ತ ತೋಳಗಳು ಇದ್ದವೋ ಏನೋ? ಹಾಗಾಗಿ ಜನ ಆ ಕೆರೆಗೆ ತೋಳನ ಕೆರೆ ಎಂದು ಕರೆದರು. ಆಮೇಲೆ ಏನಾಯಿತೋ ಗೊತ್ತಿಲ್ಲ. ತೋಳಗಳು, ಇದು ತಮಗೆ ಸೂಕ್ತವಾದ ಸ್ಥಾನವಲ್ಲವೇನೋ ಎಂದು ಭಾವಿಸಿ ಬೇರೆಡೆಗೆ ಹೋಗಿರಬೇಕು. ತೋಳಗಳು ಹೋದ ಮೇಲೆ ನನ್ನದೇನಿದೆ ಎಂದು ಕೆರೆಯೂ ಕಾಣೆಯಾಯಿತು. ಹೂಳು ತುಂಬಿದ ಕೆರೆ ಮೈದಾನವಾಯಿತು. ಕೊಳೆ-ಕೊಳಚೆ ನೀರು ಅಲ್ಲಲ್ಲಿ ಗುಂಡಿಗಳಲ್ಲಿ ಕಾಣುತ್ತಿತ್ತು. ಜನ ಈ ಕೆರೆಯ ಮೂಲಕ ಹಾಯ್ದು ಹೋಗುವಾಗ ಮೂಗು ಮುಚ್ಚಿಕೊಂಡು ಹೋಗಬೇಕಾಗುತ್ತಿತ್ತು.

ಹುಬ್ಬಳ್ಳಿಗೂ, ತೋಳನಕೆರೆಗೂ ವರದಾನವಾಗಿ ಬಂದದ್ದು ಸ್ಮಾರ್ಟ ಸಿಟಿ ಯೋಜನೆ. ಹುಬ್ಬಳ್ಳಿ-ಧಾರವಾಡ ಸ್ಮಾರ್ಟ ಸಿಟಿ ಲಿಮಿಟೆಡ್ (HDSCL) ಎಂಬ ನೋಂದಾಯಿತ ಸಂಸ್ಥೆ ಈ






Downloaded From:www.kpscvaani.com

ಯೋಜನೆಯನ್ನು ಯಶಸ್ವಿಯಾಗಿ ನಿರ್ವಹಿಸಿತು. ಇದು ಕರ್ನಾಟಕದ ಮೊಟ್ಟ ಮೊದಲ ನೋಂದಾಯಿತ ಸ್ಮಾರ್ಟ್ ಸಿಟಿ ಸಂಸ್ಥೆ. ಸುಮಾರು 29 ಕೋಟಿ ರೂಪಾಯಿಗಳ ವೆಚ್ಚದಲ್ಲಿ ತೋಳನ ಕೆರೆಯ 36.6 ಎಕರೆ ಪ್ರದೇಶವನ್ನು ಅಭಿವೃದ್ಧಿ ಪಡಿಸಲಾಗಿದೆ.

ಕೆರೆ ಬಂದ ಮೇಲೆ, ತೋಳಗಳೂ ಬರಬೇಕಲ್ಲವೇ? ಹೌದು, ಅವೂ ಬಂದವು. ಆದರೆ ಅವು ಜೀವಂತ ತೋಳಗಳಲ್ಲ. ಅದು ತೋಳನ ಕೆರೆ ಎಂದು ಸಾರಲು, ಮನುಷ್ಯರು ತಂದ ತೋಳಗಳ ಮೂರ್ತಿಗಳು.



ಈಗ ತೋಳನ ಕೆರೆ ಎಷ್ಟು ಸುಂದರವಾಗಿದೆ ಎಂದರೆ, ಜನ ಅದನ್ನು ಹುಬ್ಬಳ್ಳಿಯ 'ಮಿನಿ ಲಾಲ್‌ಬಾಗ್' ಎಂದು ಕರೆಯುತ್ತಿದ್ದಾರೆ. ಆ ಕೆರೆಯನ್ನು ಇನ್ನಷ್ಟು ಕಳೆಗಟ್ಟಿಸಬೇಕೆಂದರೆ ಒಂದಿಷ್ಟು ಜೀವಂತ ತೋಳಗಳನ್ನು ಅಲ್ಲಿಗೆ ತರಬೇಕು. ಅಲ್ಲಿ ಪ್ರಕೃತಿ ಸಹಜ ಅಭಿವೃದ್ಧಿಯಿಂದಾಗಿ, ಒಂದಿಷ್ಟು ಪ್ರಾಣಿ–ಪಕ್ಷಿ ಹಾಗು ಜೀವ ಸಂಕುಲಗಳು ಅಲ್ಲಿಗೆ ಬರಬಹುದು ಎಂದು ನಿರೀಕ್ಷಿಸಲಾಗಿದೆ.

ಹುಬ್ಬಳ್ಳಿಯ "ರೇಣುಕಾ ನಗರ"ದಲ್ಲಿರುವ ಈ ಕೆರೆ, ಈಗ ಪ್ರಕೃತಿ ಪ್ರಿಯರು ನೋಡಲೇ ಬೇಕಾದ ಸುಂದರ ತಾಣ. ಎರಡು ಪ್ರವೇಶ ದ್ವಾರಗಳುಳ್ಳ ಈ ಕೆರೆಯ ಸುತ್ತಲೂ 7 ಮೀಟರ್ ಅಗಲವಾದ ಹಾಗು ಒಂದುವರೆ ಕಿಲೋಮೀಟರ್ ಉದ್ದದ ಮನಮೋಹಕ ರಸ್ತೆ ಇದೆ. ರಸ್ತೆಯ ಮಧ್ಯೆ ಹಾಗೂ ಎರಡೂ ಪಕ್ಕಗಳಲ್ಲಿ, ಹಸಿರು ಚಾಮರ ಹಿಡಿದು ಅತಿಥಿಗಳನ್ನು ಹೃದಯ ಪೂರ್ವಕವಾಗಿ ಸ್ವಾಗತಿಸುವ ಗಿಡ–ಮರಗಳಿವೆ. ಅಲ್ಲಲ್ಲಿ ವೈವಿಧ್ಯಮಯ ಬಣ್ಣಗಳ ಹೂಗಳನ್ನು ಅರಳಿಸಿಕೊಂಡು, ಸುಗಂಧ ಸೂಸುವ ಹೂ–ಬಳ್ಳಿ–ಕಂಟಿಗಳಿವೆ. ನಿತ್ಯ ಬರುವ ವಾಯುವಿಹಾರಿಗಳಿಗಂತೂ ಇದು ಸ್ವರ್ಗವೇ ಸರಿ.

ಅಲ್ಲಲ್ಲಿ ಮಕ್ಕಳಾಟದ ಉಯ್ಯಾಲೆ, ತೂಗುತೊಟ್ಟಿಲು, ಹಗ್ಗದಾಟ, ಜಾರುಗುಂಡಿ.. ಮುಂತಾದ ಪರಿಕರಗಳಿವೆ. ದೊಡ್ಡವರ ವ್ಯಾಯಾಮಕ್ಕೂ ಸುಸ್ಥಿರವಾಗಿರುವ ಬಯಲು ಜಿಮ್ ಸಲಕರಣೆಗಳೂ ಇವೆ. ಸುಂದರವಾದ ಬಯಲು ರಂಗಮಂದಿರವೂ ಆಕರ್ಷಣೀಯವಾಗಿದೆ. ಸುತ್ತೆಲ್ಲ ಒಮ್ಮೆ ಕಣ್ಣು ಹಾಯಿಸಿ ಇಡೀ ಪರಿಸರದ ಸೌಂದರ್ಯವನ್ನು ಆಸ್ವಾದಿಸಲೋಸುಗ ಒಂದು ನಿರೀಕ್ಷಣಾ ಗೋಪುರವೂ ಇದೆ. ಜೊತೆಗೆ ಗಿಡಗಳು ಉದುರಿಸುವ ಹೂ–ಎಲೆ–ಕಾಯಿಗಳನ್ನು ರಸಗೊಬ್ಬರವನ್ನಾಗಿಸುವ, ವರ್ಮಿ ಕಾಂಪೋಸ್ಟ್ ಘಟಕವೂ ಇದೆ. ಏನೆಲ್ಲ ಇದ್ದರೂ ಕೆಲವರು ಕುಕೃತ್ಯಗಳನ್ನು ನಡೆಸುತ್ತಾರಲ್ಲವೇ? ಪುಂಡು ಪೋಕರಿಗಳ ಹಾವಳಿಯನ್ನು ತಡೆಯಲು ಕಣ್ಗಾವಲಾಗಿ ಸಿಸಿ ಕ್ಯಾಮರಾಗಳನ್ನು ಉದ್ಯಾನದ ಅಲ್ಲಲ್ಲಿ ಅಳವಡಿಸಲಾಗಿದೆ.

ಈಗ ತೋಳನ ಕೆರೆ ಭರ್ತಿ ತುಂಬಿಕೊಂಡಿದೆ. ಅಲ್ಲಲ್ಲಿ ಪುಟಿಯುವ ಕಾರಂಜಿಗಳಿವೆ. ಕೆರೆಯ ಮಧ್ಯದಲ್ಲಿರುವ ಹಸಿರು ಗುಡ್ಡಗಳಂಥ ಪುಟ್ಟ ದ್ವೀಪಗಳಿವೆ. ನೋಡಲು ಬಂದವರನ್ನು ಕೆರೆಗೆ ಇಳಿಸಲು, ನೀರಿನಲ್ಲಿ ವಿಹಾರವನ್ನು ಮಾಡಿಸಲು ಪುಟ್ಟ ದೋಣಿಗಳನ್ನು ಕೆರೆಗೆ ಇಳಿಸುವ ಯೋಜನೆಯೂ ಇದೆ. ಪರಿಸರ ಸ್ನೇಹಿಯಾದ ಈ ಆವರಣದಲ್ಲಿ ಯಂತ್ರಚಾಲಿತ ದೋಣಿಗಳಿರುವುದಿಲ್ಲ. ಅವುಗಳ ಸದ್ದಿನಿಂದ ಅಲ್ಲಿರುವ ಪಕ್ಷಿ–ಪತಂಗ ಹಾಗು ಇತರ ಜೀವಿಗಳಿಗೆ ತೊಂದರೆಯಾಗಬಾರದೆಂಬ ಕಾಳಜಿ ನಿರ್ವಾಹಕರಿಗಿದೆ. ಅದಕ್ಕಾಗಿಯೇ ಅಲ್ಲಿನ ದೀಪಾಲಂಕಾರಕ್ಕಾಗಿ, ಪರಿಸರಸ್ನೇಹಿ ಸೌರ ವಿದ್ಯುತ್ತನ್ನು ಬಳಿಸಲಾಗುತ್ತಿದೆ. ಅದರಿಂದಾಗಿ ಪ್ರತಿವರ್ಷ ಸುಮಾರು 70 ಸಾವಿರ ರೂಪಾಯಿ ಉಳಿತಾಯವಾಗುತ್ತಿದೆ. ಸೌರ ವಿದ್ಯುತ್ ಘಟಕ ಸ್ಥಾಪನೆಗೆ ಬಳಸಿದ ಬಂಡವಾಳ 5 ವರ್ಷಗಳ ಈ ಉಳಿತಾಯದಿಂದ ತೀರಿ, 6ನೇ ವರ್ಷದಿಂದ ಉಚಿತ ವಿದ್ಯುತ್ ದೊರೆಯುವಂತಾಗುತ್ತದೆ.

ಕೆರೆ ಇನ್ನೂ ಅಧಿಕೃತವಾಗಿ ಉದ್ಘಾಟನೆಗೊಂಡಿಲ್ಲ. ಆದರೂ ಜನ ಸಹಕುಟುಂಬ ಪರಿವಾರದೊಂದಿಗೆ ಬಂದು, ಕೆಲವು ಗಂಟೆಗಳನ್ನು ಸಮಾಧಾನದಿಂದ ಕಳೆದು, ಉಲ್ಲಸಿತರಾಗಿ ಹಿಂದಿರುಗುತ್ತಾರೆ. ಟೆನಿಸ್ ಮುಂತಾದ ಆಟದ ಮೈದಾನಗಳು ಇಲ್ಲಿ ಮೈದಾಳಿವೆ. ಧ್ಯಾನ–ಯೋಗಕ್ಕಾಗಿಯೂ ವ್ಯವಸ್ಥೆ ಮಾಡಲಾಗುತ್ತಿದೆ. ಅಂತೂ ಇದೊಂದು ಅಪರೂಪದ ಉದ್ಯಾನವನವಾಗಿ ರೂಪಗೊಳ್ಳುತ್ತಿರುವುದು ಸಂತಸದ ಸಂಗತಿ.

ಈ ಯೋಜನೆಯನ್ನು ರೂಪಿಸಿದ, ಹಿಂದಿನ ಧಾರವಾಡ ಜಿಲ್ಲಾಧಿಕಾರಿ ದರ್ಪನ್ ಜೈನ, ಒಂದು ಸ್ಮರಣಾರ್ಹ ಕಾರ್ಯವನ್ನು ಮಾಡಿದ್ದಾರೆ. ಅವರು ಯೋಚಿಸಿದ ಬಹುತೇಕ ಕಾರ್ಯಗಳು ಪೂರ್ಣಗೊಂಡಿವೆ. ತೋಳನ ಕೆರೆಯ ಗೋಳಿನ ಕಥೆ ಮುಗಿದಂತಾಗಿದೆ. ಇನ್ನುಳಿದ ಚೂರು–ಪಾರು ಕೆಲಸಗಳು ಬೇಗನೆ ಮುಗಿಯಲಿವೆ.

ಹಾಂ ನಿಲ್ಲಿ, ತೋಳನ ಕೆರೆ ನೋಡಲು ಈಗಲೇ ಹೊರಟು ಬಿಡಬೇಡಿ. ತೋಳನ ಕೆರೆ ಉದ್ಯಾನವು ಬೆಳಿಗ್ಗೆ ಮೂರು ಗಂಟೆ (6 ರಿಂದ 9ರ ವರೆಗೆ) ಹಾಗು ಸಂಜೆ ಎರಡು ಗಂಟೆ (4.30 ರಿಂದ 6.30ರ ವರೆಗೆ) ಮಾತ್ರ ತೆರೆದಿರುತ್ತದೆ. ಸದ್ಯ ಎಲ್ಲರಿಗೂ ಉಚಿತ ಪ್ರವೇಶವಿದ್ದು, ಮುಂದೆ ಅದು ಶುಲ್ಕ ಸಹಿತ ಪ್ರವೇಶವಾಗಿ ಪರಿವರ್ತನೆಗೊಳ್ಳಬಹುದು. ■



Downloaded From:www.kpscvaani.com

# ಆರು ದಶಕ ಕಂಡ ಚಿತ್ರಕಲಾ ಪರಿಷತ್ತು

ಜಗನ್ನಾಥ್ ಪ್ರಕಾಶ್







ಕಳೆದ ಆರು ದಶಕಗಳಿಂದ ದೃಶ್ಯಕಲಾ ಶಿಕ್ಷಣ ನೀಡುತ್ತಿರುವ ಚಿತ್ರಕಲಾ ಪರಿಷತ್ತು ದೇಶ ವಿದೇಶಗಳ ಗಮನ ಸೆಳೆದ ಸಂಸ್ಥೆಯಾಗಿದೆ.

ಕನ್ನಡ ನಾಡನ್ನು ಕವಿಸಾಹಿತಿಗಳು ಕಲಾ ಬೀಡೆಂದು ಬಹು ಹಿಂದೆಯೇ ಬಣ್ಣಿಸಿದ್ದಾರೆ. ಬೇಲೂರು, ಹಂಪಿ, ಪಟ್ಟದ ಕಲ್ಲು, ಐಹೊಳೆ ಬಾದಾಮಿ, ಲಕ್ಕುಂಡಿ, ಹಳೇಬೀಡು ಕಲಾಕುಸುರಿಯ ಶಿಲ್ಪಕೃತಿಗಳು, ಹಂಪಿ, ಶ್ರೀರಂಗಪಟ್ಟಣ, ಮೈಸೂರು, ಹರಿಹರ, ಶ್ರವಣ ಬೆಳಗೊಳಗಳ ವರ್ಣಚಿತ್ರಗಳು, ಭಿತ್ತಿಗಳೇ ಅಲ್ಲದೆ ನಾಡಿನುದ್ದಕ್ಕೂ ಹರಡಿಕೊಂಡಿರುವ ಕಲಾ ಆಗರ ಇದಕ್ಕೆ ಪುರಾವೆ.

ಆರು ದಶಕಗಳಿಂದ ದೃಶ್ಯಕಲೆಗೆ ಪ್ರೋತ್ಸಾಹ ಹಾಗೂ ದೃಶ್ಯಕಲಾ ಶಿಕ್ಷಣಕ್ಕೆ ಸೂಕ್ತ ವೇದಿಕೆಯಾಗಿ ದೇಶ ವಿದೇಶಗಳ ಗಮನ ಸೆಳೆದಿರುವ ಸಂಸ್ಥೆಯೇ ಕರ್ನಾಟಕ ಚಿತ್ರಕಲಾ ಪರಿಷತ್ತು.

ಸಾಂಪ್ರದಾಯಿಕ ಹಾಗೂ ನವೀನ ಕಲೆ ಈಗಲೂ ಸೃಷ್ಟಿಯಾಗುತ್ತಿರುವ ಕರ್ನಾಟಕದಲ್ಲಿ ದೃಶ್ಯಕಲಾ ಮಾಧ್ಯಮಕ್ಕೊಂದು ಚಿಮ್ಮು ಹಲಗೆಯಾಗಿ ಅರಳಿರುವ ಕರ್ನಾಟಕ ಚಿತ್ರಕಲಾ ಪರಿಷತ್ತು ಕಲಾ ವಿಶ್ವಕ್ಕೆ ಅಪೂರ್ವ ಕೊಡುಗೆಯನ್ನು ನೀಡುತ್ತಿದೆ.

ಲಲಿತಕಲಾ ವಿಷಯಗಳಲ್ಲಿ ಡಿಪ್ಲೋಮೋ ಕೊಡುವ ಪುಟ್ಟ ಸಂಸ್ಥೆಯಾಗಿ ಜನ್ಮತಾಳಿದ (1960) ಮೈಸೂರು ಪ್ರದೇಶ ಚಿತ್ರಕಲಾ ಪರಿಷತ್ತು, ಇಂದು ಪದವಿ, ಸ್ನಾತಕ ಪದವಿ ಕೊಡುವ ವಿಶ್ವವಿದ್ಯಾನಿಲಯ ಮಟ್ಟಕ್ಕೆ ಬೆಳೆದಿರುವ ಶಿಕ್ಷಣ ಸಂಸ್ಥೆ.





Downloaded From:www.kpscvaani.com



ಮಹಾತ್ಮಾಗಾಂಧಿಯವರು ನಡೆದಾಡಿದ ಕುಮಾರಕೃಪಾ ರಸ್ತೆಯ ಅಡವಿ ವಾತಾವರಣವಿರುವ ತಾಣದಲ್ಲಿ ತಲೆ ಎತ್ತಿರುವ ಕರ್ನಾಟಕ ಚಿತ್ರಕಲಾ ಪರಿಷತ್ತು ಚಿಣ್ಣರ ಚಿತ್ರಕಲಾ ಕಲಿಕೆಯ ನೆಚ್ಚಿನ ತಾಣ. ಕಳೆದ 50 ವರ್ಷಗಳ ಹಿಂದೆ ಮಕ್ಕಳಿಗಾಗಿ ಬೇಸಿಗೆ ಚಿತ್ರಕಲಾ ಶಿಬಿರ ಆರಂಭಿಸಿದ ಪರಿಷತ್ತು ಇಂದು ವರ್ಷ ಪೂರ್ತಿ ನಾಲ್ಕಾರು ಅಲ್ಪಾವಧಿ ಚಿತ್ರಕಲಾ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದೆ.

ವಿಶಿಷ್ಟ ರೀತಿಯ ಕಲಾ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿರುವ ಕರ್ನಾಟಕ ಚಿತ್ರಕಲಾ ಪರಿಷತ್ತು ದೇಶ ವಿದೇಶಗಳ ವಿಖ್ಯಾತ ಚಿತ್ರಕಲಾವಿದರ ನೆಚ್ಚಿನ ಗ್ಯಾಲರಿಗಳಿರುವ ಸ್ಥಳವಾಗಿ ಇಂದು ಬೆಳೆದು ನಿಂತಿದೆ.

ಕೆ.ಕೆ.ಹೆಬ್ಬಾರ್, ಎಂ.ಎಫ್.ಹುಸೇನ್, ಎನ್.ಜಿ. ವಾಸುದೇವ್, ಯೂಸೆಫ್ ಅರಾಕಲ್ ರಂತಹ ಹಲವಾರು ಹಿರಿಯ ಕಿರಿಯ ಕಲಾವಿದರ ಚಿತ್ರಗಳನ್ನು ಪ್ರದರ್ಶಿಸಿರುವ ಚಿತ್ರಕಲಾ ಪರಿಷತ್ತು, ಕರಕುಶಲ ವಸ್ತು ಮೇಳ, ನೃತ್ಯ-ನಾಟಕ, ಚಿತ್ರ ಕೃತಿ ಪ್ರದರ್ಶನ ಮುಂತಾದ ಚಟುವಟಿಕೆಗಳನ್ನು ನಿರಂತರವಾಗಿ ಹಮ್ಮಿಕೊಳ್ಳುವ ಸಾಂಸ್ಕೃತಿಕ ತಾಣ.

ಕುಮಾರಕೃಪಾ ರಸ್ತೆಯಲ್ಲಿದ್ದ ಚಿತ್ರಕಲಾ ಪರಿಷತ್ತಿನ ಮಹಾವಿದ್ಯಾಲಯಕ್ಕೆ ಕರ್ನಾಟಕ ಸರ್ಕಾರವು, ರಾಜರಾಜೇಶ್ವರಿ ನಗರದಲ್ಲಿರುವ ಗಾಣಕಲ್ ಬಳಿ 14 ಎಕರೆ ಭೂಮಿಯನ್ನು ಗುತ್ತಿಗೆ ಮೇಲೆ ಮಂಜೂರು ಮಾಡಿದ್ದು, ಅಲ್ಲೀಗ ರಮ್ಯ ಪ್ರಕೃತಿ ಮಡಿಲಲ್ಲಿ ನೂತನ ಕ್ಯಾಂಪಸ್ ತಲೆ ಎತ್ತಿದ್ದು, ಸಾವಿರಾರು ವಿದ್ಯಾರ್ಥಿಗಳು ಕಲಾ ವ್ಯಾಸಂಗ ಮಾಡಲು ಅನುವು ಮಾಡಿ ಕೊಟ್ಟಿದೆ.

ಹೊಸ ಕ್ಯಾಂಪಸ್‌ನಲ್ಲಿ ಶಿಕ್ಷಣ ಕೇಂದ್ರವಲ್ಲದೆ ಚಿತ್ರಕೃತಿಗಳ ಪ್ರದರ್ಶನಕ್ಕೆಂದು ಗ್ಯಾಲರಿಗಳೂ ರೂಪುಗೊಂಡಿವೆ. ಕ್ಯಾಂಪಸ್‌ನಲ್ಲಿ ವರ್ಷದುದ್ದಕ್ಕೂ ವಿವಿಧ ಕಲಾ ವಿಷಯಗಳಿಗೆ ಸಂಬಂಧಿಸಿದ ಕಾರ್ಯಾಗಾರಗಳನ್ನು ಏರ್ಪಡಿಸಲಾಗುತ್ತಿದ್ದು, ದೇಶದ ಹಲವು ಪರಿಣಿತ ಕಲಾವಿದರು, ಅಧ್ಯಾಪಕರು ಕಾರ್ಯಾಗಾರಗಳಲ್ಲಿ ಭಾಗವಹಿಸಿ, ವಿದ್ಯಾರ್ಥಿಗಳಿಗೆ ವಿಶೇಷ ತರಬೇತಿಯನ್ನು ಪ್ರಾಯೋಗಿಕವಾಗಿಯೂ ನೀಡುತ್ತಿದ್ದು, ಗುಣಮಟ್ಟದ ಶೈಕ್ಷಣಿಕ ಚಟುವಟಿಕೆಗಳಿಗೂ ನೆರವಾಗುತ್ತಿದೆ.

ಕಲಾ ಶಿಕ್ಷಣದ ಜೊತೆಗೆ ಚಿತ್ರಕಲೆಯ ಉನ್ನತಿಗಾಗಿ ಚಿತ್ರಕಲಾ ಪರಿಷತ್ತು ಅನುಷ್ಠಾನಗೊಳಿಸುತ್ತಿರುವ ಕಾರ್ಯಕ್ರಮಗಳೂ ಹಲವು. ಪರಿಷತ್ತಿನ ಉನ್ನತ ದರ್ಜೆಯ ಗ್ಯಾಲರಿಗಳು ದೇಶವ್ಯಾಪಿ ಖ್ಯಾತಿ ಪಡೆದಿದೆ. ಸದಾ ಬೇಡಿಕೆಯಲ್ಲಿರುವ ಪರಿಷತ್ತಿನ ಗ್ಯಾಲರಿಗಳಲ್ಲಿ ತಮ್ಮ ಕಲಾ ಸೃಷ್ಟಿಯನ್ನು ಪ್ರದರ್ಶಿಸಲು ಖ್ಯಾತನಾಮ ಕಲಾವಿದರು ಇಚ್ಛೆಪಡುತ್ತಾರೆ. ಹಿರಿಯ-ಕಿರಿಯ ಕಲಾವಿದರೆಂಬ ತಾರತಮ್ಯವಿಲ್ಲದೆ ಗ್ಯಾಲರಿಗಳಲ್ಲಿ ವಿದೇಶಿ ಚಿತ್ರಕಲಾವಿದರು ತಮ್ಮ ಕೃತಿಗಳನ್ನು ಪ್ರದರ್ಶಿಸಲು ಗ್ಯಾಲರಿಗಳನ್ನು 3-4 ತಿಂಗಳುಗಳ ಮೊದಲೇ ಕಾಯ್ದಿರಿಸುವುದು ಈಗಂತೂ ಸಾಮಾನ್ಯ ಸಂಗತಿ.

ಚಿತ್ರಕಲೆ ಜೊತೆಗೆ ಕರಕುಶಲ ವಸ್ತುಗಳಿಗೂ ಇಲ್ಲಿ ಪ್ರದರ್ಶನ ಮಾಡುವ ಅವಕಾಶವಿದ್ದು, ಉತ್ತರ ಭಾರತದ ಅನೇಕ ರಾಜ್ಯಗಳ ಲಲಿತಕಲಾ ಅಕಾಡೆಮಿ, ಕರಕುಶಲ ಅಭಿವೃದ್ಧಿ ನಿಗಮಗಳು ತಮ್ಮ ಕರಕುಶಲಗಳ ವಸ್ತು ವೈವಿಧ್ಯಗಳನ್ನು ಇಲ್ಲಿ ಪ್ರದರ್ಶಿಸಲು ಆದ್ಯತೆ ನೀಡುತ್ತವೆ.

ಚಿತ್ರಕಲಾ ಪರಿಷತ್ತಿನಲ್ಲಿರುವ 'ಆರ್ಟ್‌ಮಾರ್ಟ್'ನಲ್ಲಿ ಕರ್ನಾಟಕದ ಹಲವು ಕಲಾವಿದರ ಚಿತ್ರಕೃತಿಗಳ ಮಾರಾಟಕ್ಕೆ ವ್ಯವಸ್ಥೆ ಮಾಡಲಾಗಿದ್ದು, ವಾರದ ಎಲ್ಲಾ ದಿನಗಳಲ್ಲೂ ಕಲಾಸಕ್ತರು ತಮ್ಮ ನೆಚ್ಚಿನ ಕಲಾವಿದರ ಚಿತ್ರಕೃತಿಗಳನ್ನು ಖರೀದಿಸಲು ಇಲ್ಲಿ ಸಾಧ್ಯವಿದೆ. ರಾಜ್ಯದ ಕಲಾವಿದರೇ ಅಲ್ಲದೆ ಹೊರರಾಜ್ಯಗಳ ಕಲಾವಿದರೂ ತಮ್ಮ ಚಿತ್ರಕೃತಿಗಳನ್ನು ರಚಿಸಿ, ಮಾರಾಟಕ್ಕಾಗಿ ಇಲ್ಲಿಗೆ ಕಳಿಸುವರು.

ರಾಷ್ಟ್ರ ಹಾಗೂ ರಾಜ್ಯ ಮಟ್ಟದ ಕಲಾವಿದರ ಶಿಬಿರಗಳು ವರ್ಷದುದ್ದಕ್ಕೂ ನಡೆಯುವ ಚಿತ್ರಕಲಾ ಪರಿಷತ್ತಿನಲ್ಲಿ ಪ್ರಸಿದ್ಧ ಕಲಾವಿದರು ಶಿಬಿರಗಳಲ್ಲಿ ಭಾಗವಹಿಸುವುದು ಅನೂಚಾನವಾಗಿ ನಡೆದಿದೆ.

ಶೈಕ್ಷಣಿಕ ಮತ್ತು ಕಲಾ ಮಾಧ್ಯಮದ ಬಹುಮುಖ ಬೆಳವಣಿಗೆಗೆ ಶ್ರಮಿಸುತ್ತಿರುವ ಚಿತ್ರಕಲಾ ಪರಿಷತ್ತು ಕಳೆದ ಎರಡು ದಶಕಗಳಿಂದ ಏರ್ಪಡಿಸುತ್ತಿರುವ ಚಿತ್ರಸಂತೆಯು ಜನಮೆಚ್ಚುಗೆಗೆ ಪಾತ್ರವಾಗಿದೆ.

ಈ ಚಿತ್ರಸಂತೆಗೆ ದೇಶದ ಎಲ್ಲಡೆಯಿಂದ ಆಗಮಿಸುವ ಕಲಾವಿದರು ತಾವು ರಚಿಸಿರುವ ಕಲಾಕೃತಿಗಳನ್ನು ಪ್ರದರ್ಶನ ಹಾಗೂ ಮಾರಾಟಕ್ಕೆ ಇಡುತ್ತಾರೆ.

ಕರ್ನಾಟಕ ಸರ್ಕಾರ ಹಾಗೂ ಉನ್ನತ ಶಿಕ್ಷಣ ಇಲಾಖೆಗಳು ವಿವಿಧ ರಾಜ್ಯ ಸರ್ಕಾರದ  ನಿಗಮ ಮಂಡಲಿಗಳು ಚಿತ್ರಸಂತೆಗೆ ಕೈಜೋಡಿಸುತ್ತಿವೆ.

ಹಾಗೆಯೇ ಪ್ರತಿವರ್ಷ ಕರ್ನಾಟಕ ಚಿತ್ರಕಲಾ ಪರಿಷತ್ತು ರಾಷ್ಟ್ರಮಟ್ಟದ ಸಾಧಕ ಕಲಾವಿದರಿಗೆ ದಿ॥ ಎಂ.ಎಸ್. ನಂಜುಂಡರಾವ್ ನೆನಪಿನಲ್ಲಿ ಒಂದು ಲಕ್ಷ ರೂ ನಗದು ಬಹುಮಾನ ಪ್ರಶಸ್ತಿಯನ್ನು ನೀಡಿ ಗೌರವಿಸುತ್ತದೆ.

ಇದೇ ಸಂದರ್ಭದಲ್ಲಿ ಕನ್ನಡ ನಾಡಿನ ನಾಲ್ವರು ಸಾಧಕ ಕಲಾವಿದರಿಗೆ ಚಿತ್ರಕಲಾ ಸಮ್ಮಾನ್ ಪುರಸ್ಕಾರಗಳನ್ನು ಡಿ. ದೇವರಾಜ ಅರಸು, ಎಂ. ಆರ್ಯಮೂರ್ತಿ, ಎಚ್.ಕೆ. ಕೇಜ್ರಿವಾಲ್ ಹಾಗೂ ವೈ. ಸುಬ್ರಮಣ್ಯ ರಾಜು ಅವರ ಜ್ಞಾಪಕಾರ್ಥ ಚಿತ್ರಸನ್ಮಾನ್ ಗೌರವವನ್ನು ಪ್ರಧಾನ ಮಾಡಲಾಗುವುದು (ಇದು ಪ್ರಶಸ್ತಿ ಪತ್ರ ಹಾಗೂ ತಲಾ ರೂ.50 ಸಾವಿರ ನಗದು ಬಹುಮಾನವನ್ನು ಒಳಗೊಂಡಿದೆ).

ನಾಡಿನ ಕಲಾ ಲೋಕಕ್ಕೆ ಅರ್ಥ ಪೂರ್ಣ ಕೊಡುಗೆ ನೀಡುತ್ತಿರುವ ಕರ್ನಾಟಕ ಚಿತ್ರಕಲಾ ಪರಿಷತ್ತು ರಾಷ್ಟ್ರ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಹೆಸರು ಪಡೆದಿರುವ ಸಂಸ್ಥೆಯಾಗಿ ಕಾರ್ಯನಿರ್ವಹಿಸುವ ಮೂಲಕ ನಮ್ಮ ರಾಜ್ಯದ ಕೀರ್ತಿಯನ್ನು ಹೆಚ್ಚಿಸಿದೆ ಎಂದರೆ ತಪ್ಪಾಗಲಾರದು.


Downloaded From:www.kpscvaani.com



# ಚಾಮುಂಡಿ ಬೆಟ್ಟಕ್ಕೆ ಕುಡಿಯುವ ನೀರಿನ ಸೌಲಭ್ಯ



**ಚಾಮುಂಡಿ ಬೆಟ್ಟದ ಮೇಲೆ ನೀರಿನ ಅಭಾವವನ್ನು ಶಾಶ್ವತವಾಗಿ ನಿವಾರಣೆ ಮಾಡಿದ ಇತಿಹಾಸ ಕುರಿತು ಈ ಲೇಖನವು ಬೆಳಕು ಚೆಲ್ಲಿದೆ.**

ವೇಮಗಲ್ ಸೋಮಶೇಖರ್

ಮೈಸೂರು ರಾಜರ ಕುಲದೇವತೆಯಾದ ಶ್ರೀ ಚಾಮುಂಡೇಶ್ವರಿ ದೇವಿ ದೇವಸ್ಥಾನವಿರುವ ಚಾಮುಂಡಿ ಬೆಟ್ಟದ ಮೇಲೆ ದೇವಿ ಕೊಳದ ನೀರನ್ನು ಬಿಟ್ಟರೆ ಬೇರೆ ಜಲ ಸೌಲಭ್ಯವಿರಲಿಲ್ಲ. ಕೆಲವು ವೇಳೆ ದೇವಿಕೊಳದ ನೀರು ಅಶುದ್ಧವಾಗಿ ಮಾರಣಾಂತಿಕ ವ್ಯಾಧಿಯು ಕೂಡ ಸಂಭವಿಸಲು ಕಾರಣವಾಗುತ್ತಿದ್ದುದನ್ನು, ಹಾಗೂ ಜಾತ್ರೆಯ ಕಾಲದಲ್ಲಿ ಭಕ್ತಾದಿಗಳಿಗೆ ಕುಡಿಯಲು ನೀರಿಗೆ ಕಷ್ಟವಾಗುತ್ತಿದ್ದುದನ್ನು ಗಮನಿಸಿದ ಅರಸ ನಾಲ್ವಡಿ ಕೃಷ್ಣರಾಜರಾಜೇಂದ್ರ ಒಡೆಯರ್‌ರವರು  ಬಹಳ ಧನವ್ಯಯದಿಂದ ಯಂತ್ರಸಾಧನೆಯನ್ನೊದಗಿಸಿ 1927ರಲ್ಲಿ ಬೆಟ್ಟದ ಮೇಲಕ್ಕೆ ನೀರನ್ನೆತ್ತಿಸಿ ಕುಡಿಯುವ ನೀರಿ ಸೌಲಭ್ಯವನ್ನು ಕಲ್ಪಿಸುವ ವ್ಯವಸ್ಥೆ ಮಾಡಿಸುವ ಮೂಲಕ ಬೆಟ್ಟದ ಮೇಲೆ ವಾಸ ಮಾಡುತ್ತಿದ್ದ ಜನರೆಲ್ಲರಿಗೂ ಮಹತ್ತರವಾದ ಉಪಕಾರ ಮಾಡಿದರು.


Downloaded From:www.kpscvaani.com



ಮೈಸೂರು ನಗರದ ದಕ್ಷಿಣ ದಿಕ್ಕಿನಲ್ಲಿರುವ ಚಾಮುಂಡಿ ಬೆಟ್ಟದ ಮೇಲೆ ಮಹಾರಾಜರ ಮನೆತನದ ಕುಲದೇವತೆಯಾದ ಶ್ರೀ ಚಾಮುಂಡೇಶ್ವರಿ ಅಮ್ಮನವರ ದೇವಾಲಯವೂ, ಈ ದೇವಾಲಯದ ದಕ್ಷಿಣಕ್ಕೆ ಮಹಾಬಳೇಶ್ವರ ದೇವಾಲಯವೂ ಸೇರಿದಂತೆ ಇನ್ನೂ ಕೆಲವು ದೇವಾಲಯಗಳೂ, ರಾಜೇಂದ್ರ ವಿಲಾಸ ಅರಮನೆಯೂ ಇರುತ್ತದೆ. ಎಲ್ಲಾ ದೇವಾಲಯಗಳಲ್ಲಿ ಕೆಲಸ ಕಾರ್ಯ, ಪೂಜೆ ಮಾಡುವವರೂ ಮತ್ತು ವ್ಯವಸಾಯ ಮುಂತಾದ ಕಾರ್ಯಗಳನ್ನು ಮಾಡುವ ನೂರಾರು ಜನರು ಅನೇಕ ವರ್ಷಗಳಿಂದ ಬೆಟ್ಟದ ಮೇಲೆಯೇ ವಾಸ ಮಾಡಿಕೊಂಡು ಬಂದಿದ್ದಾರೆ.

ಇದಲ್ಲದೆ ಪ್ರತಿ ಶುಕ್ರವಾರ ಹಾಗೂ ಮಂಗಳವಾರದಂದು ನಡೆಯುವ ವಿಶೇಷ ಪೂಜೆ ಸಂದರ್ಭದಲ್ಲೂ, ಮೈಸೂರು ನಗರದಲ್ಲಿ ನಡೆಯುವ ನವರಾತ್ರಿ ಉತ್ಸವ ಕಾಲದಲ್ಲೂ, ನವರಾತ್ರಿ ಕಳೆದ ಬಳಿಕ ಬೆಟ್ಟದ ಮೇಲೆ ನಡೆಯುವ ರಥೋತ್ಸವ ಕಾಲದಲ್ಲೂ, ಪರಸ್ಥಳಗಳಿಂದ ಸಾವಿರಾರು ಭಕ್ತಾದಿಗಳು ಬೆಟ್ಟದ ಮೇಲೆ ಬಂದು ಸೇರುತ್ತಾರೆ. ಅಲ್ಲದೆ ನಾಲ್ವಡಿ ಕೃಷ್ಣರಾಜ ಒಡೆಯರ್‌ರವರೂ, ಅರಮನೆಯ ರಾಣಿವಾಸದವರೂ, ರಾಜಬಂಧುಗಳೂ ಆಗಿಂದ್ದಾಗ್ಗೆ ಬೆಟ್ಟದ ಮೇಲೆ ಹೋಗಿ ಚಾಮುಂಡಿ ದೇವಸ್ಥಾನದಲ್ಲಿ ಪೂಜೆ ಸೇವಾರ್ಥಗಳನ್ನು ನಡೆಸುತ್ತಿದ್ದರು. ಎಲ್ಲರಿಗೂ (ಕುಡಿಯುವುದಕ್ಕೂ, ಅಡಿಗೆ ಮಾಡುವುದಕ್ಕೂ ಮತ್ತು ದೇವರ ಪೂಜೆಗೂ) ಬೆಟ್ಟದ ಮೇಲಿರುವ ದೇವೀಕೊಳದ ನೀರೇ ಆಶ್ರಯದಾತವಾಗಿತ್ತು. ಈ ದೇವೀಕೊಳದಲ್ಲಿ ತೆಪ್ಪೋತ್ಸವವೂ ನಡೆಯುತಿತ್ತು. ಈಗಲೂ ನಡೆಯುತ್ತಿದೆ.

ನಾಲ್ವಡಿಯವರು ಸುಮಾರು 1910ರ ನಂತರ ಬೆಟ್ಟದ ಮೇಲೂ, ದೇವಾಲಯಗಳಿಗೂ ಹಾಗೂ ಬೆಟ್ಟಕ್ಕೆ ಹತ್ತಿ ಹೋಗುವ ರಸ್ತೆಯುದ್ದಕ್ಕೂ ವಿದ್ಯುಚ್ಛಕ್ತಿಯ ದೀಪಗಳನ್ನಿಡಿಸಿ ಅನುಕೂಲ ಮಾಡಿಸಿದ್ದರು. ಬೆಟ್ಟದ ಮೇಲೆ ಇರುವವರು ಮತ್ತು ಅಲ್ಲಿಗೆ ಹೋಗುವವರು ದೇವೀ ಕೊಳದ ನೀರನ್ನೇ ಉಪಯೋಗಿಸುತ್ತಿದ್ದರಿಂದ ಆಗಾಗ್ಗೆ ವಾಂತಿ, ಭೇದಿ ಮುಂತಾದ ಸಾಂಕ್ರಾಮಿಕ ಕಾಯಿಲೆಗಳು ಕಾಣಿಸಿಕೊಳ್ಳುತ್ತಿದ್ದವು. ಇದನ್ನು ಗಮನಿಸಿದ ನಾಲ್ವಡಿಯವರು ಮೈಸೂರು ನಗರದಲ್ಲಿದ್ದಂತೆ ಬೆಟ್ಟದ ಮೇಲೆಯೂ ಶುದ್ಧ ನೀರಿನ ಅನುಕೂಲ ಒದಗಿಸಬೇಕೆಂಬ ಯೋಚನೆಯಿಂದ ಬಹು ಕಾಳಜಿ ವಹಿಸಿ ಇಂಜನಿಯರುಗಳಿಂದ ಬಹು ದಿವಸ ಪರಿಶೀಲನೆ ನಡೆಸಿದರು.

ಆದರೆ ಯಾವ ಇಂಜನಿಯರೂ ನೀರನ್ನು ಒದಗಿಸುವ ಅಂದಾಜು ಪಟ್ಟಿಗಳನ್ನು ಒದಗಿಸಲಿಲ್ಲ. ಆಗ ಸರ್ಕಾರದ ನೀರು ಸರಬರಾಜು ಇಲಾಖೆಯ ಸೂಪರಿಂಟೆಂಡಂಟ್‌ರಾಗಿದ್ದ ಅಸಿಸ್ಟೆಂಟ್ ಇಂಜನಿಯರ್ ಕೆ.ಆರ್. ವೆಂಕಟಸುಬ್ಬಾಚಾರ್ ಬಿ.ಎ.,ಬಿ.ಇ. ಇವರು ನಾಲ್ವಡಿಯವರ ಮನವಿಯಂತೆ ಪರಿಶೀಲನೆ ಮಾಡಿ ಬೆಟ್ಟದ ಬುಡದಿಂದ ಎರಡು ಅಂತಸ್ತುಗಳಲ್ಲಿ ನೀರನ್ನು ನಲ್ಲಿಗಳ ಮೂಲಕ ಇಂಜನ್ ಶಕ್ತಿಯಿಂದ ಎತ್ತಿ ಬೆಟ್ಟದ ಮೇಲಕ್ಕೆ ಸಾಗಿಸುವ ಏರ್ಪಾಟು ಮಾಡಿದರು.

ಅದಕ್ಕೆ ಅವಶ್ಯವಾದ ಕೊಳಾಯಿ ಹಾಗೂ ಇತರೆ ಸಾಮಗ್ರಿಗಳನ್ನು ಇಂಗ್ಲೆಂಡಿನಿಂದ ತರಿಸಿ ಅಳವಡಿಸಿದರು. ಬೆಟ್ಟದ ಬುಡದಲ್ಲಿ ಒಂದು ಇಂಜನ್ ಇಟ್ಟು ವಿದ್ಯುಚ್ಛಕ್ತಿಯಿಂದ



ನೀರನ್ನು ಕೊಳವೆಗಳ ಮೂಲಕ ಎತ್ತಿ ಬೃಹತ್ ನಂದಿ ವಿಗ್ರಹದ ಬಳಿಯಲ್ಲಿ ನಿರ್ಮಿಸಿದ ಕೊಳಕ್ಕೆ ಬಿಡುವಂತೆಯೂ, ಆ ಕೊಳದ ಬಳಿ ಇನ್ನೊಂದು ಇಂಜನ್ ಅಳವಡಿಸಿ ಅದೇ ರೀತಿ ಬೆಟ್ಟದ ಮೇಲೆ ನಿರ್ಮಿಸಿರುವ ತೊಟ್ಟಿಗೆ ಬೀಳುವಂತೆಯೂ ಕಾಮಗಾರಿ ಮಾಡಿಸಿದರು.

ಆ ತೊಟ್ಟಿಯಿಂದ ಎರಡು ಕಡೆಗಳಿಗೆ ನಲ್ಲಿಗಳನ್ನು ಅಳವಡಿಸಿ ಒಂದರಿಂದ ರಾಜೇಂದ್ರ ವಿಲಾಸ್ ಅರಮನೆಗೂ, ಇನ್ನೊಂದರಿಂದ ಬೆಟ್ಟದ ಮೇಲಿರುವ ಪ್ರಜೆಗಳಿಗೂ ದಿನವಹಿ 4 ಸಾವಿರ ಗ್ಯಾಲನ್‌ನಷ್ಟು ನೀರು ಒದಗುವ ಹಾಗೆ ಏರ್ಪಡಿಸಿದ ನಾಲ್ವಡಿಯವರು ತಮ್ಮ ವರ್ಧಂತಿ ಉತ್ಸವದ ಸಂತೋಷದ ದಿವಸವಾದ 1927ರ ಜೂನ್ ನಾಲ್ಕನೇ ಶನಿವಾರದಂದು ಪ್ರಾರಂಭಿಸಿದರು. ಅಂದು ಇಷ್ಟಕ್ಕೆಲ್ಲಾ ತಗುಲಿದ ಖರ್ಚು 30 ಸಾವಿರ ರೂ. ಈ ಖರ್ಚನ್ನು ಮಾತ್ರವಲ್ಲದೆ ನಾಲ್ವಡಿಯವರು ಈ ಕಾರ್ಯಕ್ಕಾಗಿ ಸಾಲಿಯಾನ ಆಗುವ ಸಿಬ್ಬಂದಿ ಮೊದಲಾದ ಖರ್ಚುಗಳನ್ನೂ ಸಹ ಅರಮನೆ ಇಲಾಖೆಯಿಂದಲೇ ಕೊಡತಕ್ಕದ್ದೆಂದು ಸಂತೋಷದಿಂದ ಅಪ್ಪಣೆ ಮಾಡಿದರು.

ಇದರಿಂದಾಗಿ ಬೆಟ್ಟದ ಮೇಲೆ ನೀರಿನ ಅಭಾವವು ಶಾಶ್ವತವಾಗಿ ನಿವಾರಣೆಯಾಗಿ ಶುದ್ಧ ನೀರು ಸರಬರಾಜಾಯಿತು. ಇದರ ಏರ್ಪಾಟನ್ನು ಖುದ್ದಾಗಿ ನಿಂತು ಕಾಮಗಾರಿಗಳನ್ನೆಲ್ಲಾ ಅಚ್ಚುಕಟ್ಟಾಗಿ ನೆರವೇರಿಸಿ ನೀರನ್ನು ಒದಗಿಸಿದ ಇಂಜನಿಯರ್ ವೆಂಕಟಸುಬ್ಬಾಚಾರ್ ಅವರು ಚಾಮುಂಡಿ ಬೆಟ್ಟದ ಮೇಲಿನ ಪ್ರಜೆಗಳಿಗೆ ಪ್ರಾತಃ ಸ್ಮರಣೀಯರಾದರು. ಈ ಕಾರ್ಯದಿಂದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರಿಗಿದ್ದ ಪ್ರಜಾವಾತ್ಸಲ್ಯವೂ ಔದಾರ್ಯವೂ ಅಪಾರವಾಗಿತ್ತೆಂದು ವೇಧ್ಯವಾಗುತ್ತದೆ.


Downloaded From:www.kpscvaani.com



# ಬೆಂಗಳೂರು ಜನಕ
# ನಾಡಪ್ರಭು ಕೆಂಪೇಗೌಡ

**ನಾಡಪ್ರಭು ಕೆಂಪೇಗೌಡರೆಂದರೆ, ಜಗದ್ವಿಖ್ಯಾತ ದಾಖಲೆಗಳ ಧೀರ, ಸಾವಿರ ಕೆರೆಗಳ ಸರದಾರ, ಬೆಂಗಳೂರು ಕಟ್ಟಿದ ಕನಸುಗಾರ ಮತ್ತು ನಾಡು ಮರೆಯದ ಕನ್ನಡದ ಕುವರ.**

ಬನ್ನೂರು ಕೆ.ರಾಜು

ಕೃಷಿತಜ್ಞ, ಶಿಕ್ಷಣ ತಜ್ಞ, ಆಡಳಿತ ತಜ್ಞ, ಇಂಜಿನಿಯರ್, ವಾಣಿಜ್ಯೋದ್ಯಮಿ, ವಿಚಾರವಾದಿ, ವೈದ್ಯ, ವಿಜ್ಞಾನಿ, ಕಾಲಜ್ಞಾನಿ, ತಂತ್ರಜ್ಞ, ಯೋಜನಾ ನಿಪುಣ, ತತ್ವಜ್ಞಾನಿ..... ಹೀಗೆ ಬಹುಪಾಲು ಎಲ್ಲರೂ ಒಬ್ಬ ವ್ಯಕ್ತಿಯಲ್ಲಿ ಇರಲು ಸಾಧ್ಯವೇ? ಎಂಬ ಪ್ರಶ್ನೆಗೆ ಸಾಧ್ಯವೆಂದು ಉತ್ತರವಾಗಿ ನಾಡಪ್ರಭು ಕೆಂಪೇಗೌಡರು ಕಾಣುತ್ತಾರೆ. ಏಕೆಂದರೆ ಎಲ್ಲಾ ಕ್ಷೇತ್ರಗಳ ತಂತ್ರಜ್ಞತೆ, ನಿಪುಣತೆ ಕೆಂಪೇಗೌಡರೊಳಗಿತ್ತೆಂಬುದಕ್ಕೆ ಸುಮಾರು ಐನೂರು ವರ್ಷಗಳ ಹಿಂದೆಯೇ ಅವರು ಕಟ್ಟಿದ ಇಂದು ಸಿಲಿಕಾನ್ ಸಿಟಿಯಾಗಿ ವಿಶ್ವ ವಿಖ್ಯಾತಿಗಳಿಸಿರುವ ಬೆಂಗಳೂರನ್ನು ಒಮ್ಮೆ ಒಳಹೊಕ್ಕಿ ನೋಡಿದರೆ ಕೆಂಪೇಗೌಡರ ಸಾಮರ್ಥ್ಯದ ಅರಿವಾಗುತ್ತದೆ.

ಕುಡಿಯುವ ನೀರಿಗಾಗಿ ಬೆಂಗಳೂರು ನಗರವೊಂದರಲ್ಲೇ 25ಕ್ಕೂ ಹೆಚ್ಚು ಸರಣಿ ಕೆರೆಗಳನ್ನು ವೈಜ್ಞಾನಿಕವಾಗಿ ನಿರ್ಮಿಸಿ ಒಂದು ಕೆರೆಯಲ್ಲಿ ತುಂಬಿದ ನೀರು ಮತ್ತೊಂದು ಕೆರೆಗೆ ಹರಿದು ಹೋಗುವಂತೆ ಮಾಡಿದ್ದ ಕೆಂಪೇಗೌಡರ ವೈಜ್ಞಾನಿಕ ತಂತ್ರಜ್ಞತೆಗೆ ಎಲ್ಲಾ ಕ್ಷೇತ್ರಗಳ ತಜ್ಞರೂ ತಲೆಬಾಗಲೇಬೇಕು. ಸಾವಿರಾರು ಕೆರೆಗಳನ್ನು ನಿರ್ಮಿಸಿ ಸಾವಿರ ಕೆರೆಗಳ ಸರದಾರನೆಂದೇ ಹೆಸರಾಗಿದ್ದ ಮತ್ತೊಬ್ಬ ರಾಜ ಜಗತ್ತಿನಲ್ಲಿ ಸಿಗುವುದು ಬಹಳ ವಿರಳ. ಇಲ್ಲವೆಂದರೂ ಆದೀತು. ದುರಂತವೆಂದರೆ ಅವರು ಬಹಳ ಕಾಳಜಿಯಿಂದ ಬೆಂಗಳೂರು ನಗರದಲ್ಲಿ ನಿರ್ಮಿಸಿದ್ದ ಬಹುತೇಕ ಕೆರೆಗಳು ಇಂದು ಮುಚ್ಚಿ ಹೋಗಿವೆ.

ಕರ್ನಾಟಕದ ಇತಿಹಾಸದಲ್ಲಿ ಯಲಹಂಕ ನಾಡು ಬಹಳ ವಿಶಾಲವಾದದ್ದು. ವಿಶೇಷವಾಗಿ ವಿಜಯನಗರ ಸಾಮ್ರಾಜ್ಯದ ಅಭಿವೃದ್ಧಿಯಲ್ಲಿ ಯಲಹಂಕ ನಾಡಿನ ಪ್ರಭುಗಳ ಪಾತ್ರ ಅತ್ಯಂತ ಮಹತ್ವವಾದದ್ದು. ಇತಿಹಾಸಕಾರರ ಪ್ರಕಾರ ಯಲಹಂಕ ಪ್ರಭುಗಳು ಅರ್ಥಾತ್ ರಾಜರು ಹತ್ತು ಮಂದಿ. ಇವರಲ್ಲಿ ಪ್ರಥಮ ರಾಜನಾದ ದೇವರಸಗೌಡನೇ ನಾಡ ಪ್ರಭು ಕೆಂಪೇಗೌಡರ ವಂಶಸ್ಥರ ಮೂಲ ಪುರುಷ. ಈತ ಹೊಯ್ಸಳರ ಸಾಮಂತನಾಗಿ 'ಕುರುವಗೆರೆ' ಎಂಬ ಪ್ರದೇಶದಿಂದ ರಾಜ್ಯಾಡಳಿತ ಮಾಡುತ್ತಿದ್ದ. ಕ್ರಿ.ಶ. 1200ರ ಶಾಸನವೊಂದು ಈತನ ಬಗ್ಗೆ ಮಾಹಿತಿ ತಿಳಿಸುತ್ತದೆ.

ಹೊಯ್ಸಳರ ಸಾಮಂತನಾಗಿದ್ದ ದೇವರಸಗೌಡ ನಂತರದ ದಿನಗಳಲ್ಲಿ ತನ್ನ ರಾಜ್ಯವನ್ನು ವಿಸ್ತರಿಸಿ 'ಆವತಿ' ಎನ್ನುವ ಊರಿಗೆ ಬಂದು ಅದನ್ನು ರಾಜಧಾನಿಯನ್ನಾಗಿ ಮಾಡಿಕೊಂಡ. ಆವತಿ ಈಗಿನ ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿದೆ. ದೇವರಸಗೌಡ ಆವತಿಯನ್ನು ಕೇಂದ್ರಸ್ಥಾನ ಮಾಡಿಕೊಂಡು ಇಲ್ಲಿ ನೆಲೆನಿಂತ ಕಾರಣ ಈ ವಂಶಸ್ಥರನ್ನು 'ಆವತಿ ನಾಡಗೌಡ ಪ್ರಭುಗಳು' ಎಂದೂ ಕರೆಯಲಾಗಿದೆ. ದೇವರಸಗೌಡನ ಪುತ್ರನಾದ ಜಯಗೌಡ ತನ್ನ ತಂದೆ ದೇವರಸಗೌಡನ ಹೆಸರಿನಲ್ಲಿ ನಿರ್ಮಿಸಿದ ಹಳ್ಳಿಯೇ 'ದೇವನಹಳ್ಳಿ'. ಈತ ಆವತಿಯಿಂದ ತನ್ನ ರಾಜಧಾನಿಯನ್ನು ಯಲಹಂಕಕ್ಕೆ ಬದಲಾಯಿಸಿದ. ಇವನು ನಿಧನವಾದ ನಂತರ ಒಂದನೇ ಭೈರೇಗೌಡ ಆಳ್ವಿಕೆಗೆ ಬಂದ. ಇವನು ಹೊಯ್ಸಳರ ಜತೆ ಒಳ್ಳೆಯ ಸಂಬಂಧ ಹೊಂದಿದ್ದ ಕಾರಣ ದೊಡ್ಡಬಳ್ಳಾಳನ ನೆನಪಿಗಾಗಿ ದೊಡ್ಡಬಳ್ಳಾಪುರ ಪಟ್ಟಣವನ್ನು ನಿರ್ಮಿಸಿದ. ಹೊಯ್ಸಳರ ಪಟ್ಟದರಸಿ ಶಾಂತಲಾದೇವಿಯ ಪುತ್ರ ಚಿಕ್ಕಬಳ್ಳಾಳ. ಇವನ ಗೌರವಾರ್ಥ ಒಂದನೇ ಭೈರೇಗೌಡ ಚಿಕ್ಕಬಳ್ಳಾಪುರ ನಿರ್ಮಿಸಿದ.

ಒಂದನೇ ಭೈರೇಗೌಡನ ಕಾಲಾನಂತರ ಇಮ್ಮಡಿ ಭೈರೇಗೌಡ ಅಧಿಕಾರದ ಚುಕ್ಕಾಣಿ ಹಿಡಿದ. ವಿಜಯ ನಗರ ಸಾಮ್ರಾಜ್ಯ



Downloaded From:www.kpscvaani.com

ಕಟ್ಟುವ ಕಾಲದಲ್ಲಿ ಅವರಿಗೆ ಸರ್ವ ರೀತಿಯಲ್ಲೂ ಸಹಕಾರ ನೀಡಿ ವಿಜಯನಗರ ಸಾಮ್ರಾಜ್ಯದ ಬೆಳವಣಿಗೆಯಲ್ಲಿ ಇವನು ಪ್ರಮುಖ ಪಾತ್ರವಹಿಸಿದ್ದ. ಇಮ್ಮಡಿ ಭೈರೇಗೌಡನ ನಂತರ ಈತನ ಪುತ್ರ ನಂಜಪ್ಪಗೌಡ ಪಟ್ಟಕ್ಕೆ ಬಂದ. ನಂಜಪ್ಪಗೌಡರಿಗೆ ಅವರ ಕುಲ ದೇವತೆಯಾದ ಕುರುವಗೆರೆ ಕೆಂಪಮ್ಮನ ಹರಕೆಯ ಆಶೀರ್ವಾದದ ಫಲವಾಗಿ ಕೆಂಪನಂಜೇಗೌಡ ಜನಿಸಿದ. ಈತನೇ ನಾಡಪ್ರಭು ಕೆಂಪೇಗೌಡರ ತಂದೆ. ಕೆಂಪನಂಜೇಗೌಡ ಮತ್ತು ಲಿಂಗಮಾಂಬೆ ದಂಪತಿಯ ನಾಲ್ಕು ಮಂದಿ ಗಂಡು ಮಕ್ಕಳಲ್ಲಿ ಹಿರಿಮಗನೇ ನಾಡಪ್ರಭುವಾದ ಕೆಂಪೇಗೌಡ. ಇವರು 1510 ಜೂನ್ 27 ರಂದು ಜನಿಸಿದರು. ಇನ್ನು ಮೂವರೆಂದರೆ ವೀರೇಗೌಡ, ಬಸವೇಗೌಡ ಹಾಗೂ ಕೆಂಪಸೋಮೇಗೌಡ. ಕೆಂಪನಂಜೇಗೌಡ ವಿಜಯನಗರ ಸಾಮ್ರಾಜ್ಯಕ್ಕೆ ಅತ್ಯಂತ ನಿಷ್ಠನಾಗಿದ್ದುದರಿಂದ ಕೃಷ್ಣದೇವರಾಯ ಇವನನ್ನು ಹಾಗೂ ಇವನ ಆಡಳಿತದ ಕಾರ್ಯ ಶೈಲಿಯನ್ನು ಬಹಳ ಮೆಚ್ಚಿಕೊಂಡಿದ್ದರು.

ಯಲಹಂಕ ಊರಿಗೆ ಅಂದಾಜು 1200 ವರ್ಷಗಳ ಇತಿಹಾಸವಿದೆ. ಗಂಗರ ಕಾಲದಲ್ಲಿ ಇದು ಹೆಚ್ಚಿನ ಮಹತ್ವ ಪಡೆದಿತ್ತು. ನಾಡಪ್ರಭು ಕೆಂಪೇಗೌಡರ ವಂಶಸ್ಥರು ರಾಜ್ಯಭಾರ ಮಾಡಿದ ಮತ್ತೊಂದು ಪ್ರಮುಖ ಸ್ಥಳ 'ಮಾಗಡಿ'. ಇದು 12ನೇ ಶತಮಾನದಲ್ಲಿ ಚೋಳರಾಜನೊಬ್ಬನಿಂದ ಸ್ಥಾಪಿತವಾಯಿತೆಂದು ಹೇಳಲಾಗುತ್ತದೆ. ಇದಕ್ಕೆ ಪೂರಕವಾದ ಐತಿಹ್ಯ ಕೂಡ ಇಲ್ಲುಂಟು. ನಂತರದ ದಿನಗಳಲ್ಲಿ 'ಮಾಗಡಿ'ಯು ಹೊಯ್ಸಳರ ಕೈವಶವಾಗಿ, ಬಳಿಕ ವಿಜಯನಗರದ ಅರಸರ ಕೈ ಸೇರಿತು. ಅಂತಿಮವಾಗಿ ಕೆಂಪೇಗೌಡರ ವಂಶಸ್ಥರ ವಶಕ್ಕೆ ಬಂತು. ಇದನ್ನು ಬಹು ವೈಭವದಿಂದ ಆಳಿದ ನಾಡಪ್ರಭು ಕೆಂಪೇಗೌಡರ ಎರಡನೇ ಪುತ್ರ ಇಮ್ಮಡಿ ಕೆಂಪೇಗೌಡನು ಮಾಗಡಿ ಕೆಂಪೇಗೌಡರೆಂದೇ ಕರೆಸಿಕೊಂಡು ಹೆಸರುವಾಸಿಯಾದರು. ಮತ್ತೊಬ್ಬ ಮಗ ಗಿಡ್ಡೇಗೌಡ ಕ್ರಿ.ಶ. 1578ರವರೆಗೆ ಆಳಿದನೆಂದು ಹೇಳಲಾಗುತ್ತದೆ. 18ನೇ ಶತಮಾನದ ಪ್ರಾರಂಭದ ತನಕವೂ ಕೆಂಪೇಗೌಡರ ವಂಶಸ್ಥರ ಆಳ್ವಿಕೆಯಲ್ಲಿದ್ದ ಮಾಗಡಿ ಆ ನಂತರ ಮೈಸೂರು ಅರಸರ ಪಾಲಾಯಿತು. ಕ್ರಿ.ಶ. 1791ರಲ್ಲಿ ಇದನ್ನು ಬ್ರಿಟಿಷರು ಆಕ್ರಮಿಸಿಕೊಂಡರು. ಅಲ್ಲಿಗೆ ವೈಭವದ ಮಾಗಡಿಯ ಇತಿಹಾಸ ಮಣ್ಣುಗೂಡಿತು. ಸುಮಾರು 500 ವರ್ಷಗಳ ಕಾಲ ವೈಭವ ಪೂರ್ಣವಾಗಿ ಆಡಳಿತ ನಡೆಸಿದ ಇವರ ವಂಶದ ಸಾಮ್ರಾಜ್ಯವಿ ನಾಡಪ್ರಭು ಕೆಂಪೇಗೌಡರ ಕಾಲದಲ್ಲಿ ಮೈಸೂರು ಸಂಸ್ಥಾನಕ್ಕಿಂತ ವಿಶಾಲವಾಗಿತ್ತು.

ನಾಡಪ್ರಭು ಕೆಂಪೇಗೌಡರು ಪುಟ್ಟ ವಯಸ್ಸಿನಲ್ಲೇ ಕ್ರಿಯಾಶೀಲತೆ ಸ್ವಭಾವ ಹೊಂದಿದ್ದರು. ತನ್ನ ಆಡಳಿತದ ಅವಧಿಯಲ್ಲಿ ಅತ್ಯಂತ ಸುಸಜ್ಜಿತವಾದ ಮತ್ತು ಯೋಜನಾಬದ್ಧವಾದ ಸಾಮ್ರಾಜ್ಯವನ್ನು ನಿರ್ಮಿಸಬೇಕೆಂಬ ಮಹತ್ವಾಕಾಂಕ್ಷೆಯನ್ನು ಹೊಂದಿದ್ದರು. ತಂದೆ ಕೆಂಪನಂಜೇಗೌಡನಿಗೆ ಮಗ ಕೆಂಪೇಗೌಡನನ್ನು ಸಕಲಕಲಾವಲ್ಲಭನನ್ನಾಗಿ ಮಾಡಬೇಕೆಂಬ ಅಧಮ್ಯ ಆಸೆ. ಹಾಗಾಗಿ ಐಗಂಡಪುರದ ಮಾಧವಭಟ್ಟರಲ್ಲಿ ಐದು ವರ್ಷದ ಬಾಲಕ ಕೆಂಪೇಗೌಡನನ್ನು ವಿದ್ಯಾಭ್ಯಾಸಕ್ಕೆ ಸೇರಿಸಿದರು. ಅಲ್ಲಿ ಗುರುಗಳಿಂದ ಆಡಳಿತ, ರಾಜನೀತಿ ಸೇರಿದಂತೆ ಪ್ರತಿಯೊಂದು ವಿಷಯಗಳಲ್ಲೂ ಪರಿಣಿತಿಗಳಿಸಿ ಕುದುರೆ ಸವಾರಿ, ಕತ್ತಿವರಸೆ, ಮಲ್ಲಯುದ್ಧ ಮುಂತಾದ ಓರ್ವ ರಾಜನಿಗಿರಬೇಕಾದ ಸರ್ವ ವಿದ್ಯೆಗಳಲ್ಲೂ ಸಮರ್ಥರಾದರು. ಅಲ್ಲಿ ಗೆಳೆಯನಾಗಿ ದೊರೆತ ನಾರಾಯಣಭಟ್ಟ (ನಾಣಿ) ಕೆಂಪೇಗೌಡನ ಪ್ರತಿಯೊಂದು ಹೆಜ್ಜೆಯಲ್ಲೂ ಸಹಕಾರದ ಆತ್ಮೀಯನಾಗಿದ್ದ. ಇವರಿಬ್ಬರ ಸ್ನೇಹ ಕೃಷ್ಣ–ಕುಚೇಲರ ಸಂಬಂಧವಾಗಿತ್ತು.

ಗುರು ಮಾಧವ ಭಟ್ಟರ ಅಣತಿಯಂತೆ ರಾಜ್ಯಾಡಳಿತದ ಚುಕ್ಕಾಣಿ ಹಿಡಿಯುವ ಮುನ್ನ ದೇಶ ನೋಡು ಕೋಶ ಓದು ಎಂಬಂತೆ ದೇಶ ಪರ್ಯಟನೆಗೆ ಹೊರಟ ಕೆಂಪೇಗೌಡರು ಮೊದಲಿಗೆ ವಿಜಯನಗರಕ್ಕೆ ಭೇಟಿ ನೀಡುತ್ತಾರೆ. ರಾಜಧಾನಿ ಹಂಪಿಯಲ್ಲಿ ವಿಜಯನಗರದ ವೈಭವವನ್ನು ಕಂಡು ರೋಮಾಂಚಿತರಾಗುತ್ತಾರೆ. ಇಂತಹದೊಂದು ನಗರವನ್ನು ತಾನೂ ನಿರ್ಮಿಸಬೇಕೆಂಬ ದೃಢ ಮನಸ್ಸಿನಿಂದ ದೇಶ ಸಂಚಾರ ಮುಗಿಸಿ ಯಲಹಂಕಕ್ಕೆ ವಾಪಸ್ಸು ಬರುತ್ತಾರೆ. 1528 ರಲ್ಲಿ ಚೆನ್ನಮಾಂಬೆಯೊಡನೆ ವಿವಾಹವಾಗಿ ಯುವರಾಜರಾಗಿ ಪಟ್ಟಾಭಿಷಕ್ತರಾಗುತ್ತಾರೆ. ಆ ನಂತರ 1531ರಲ್ಲಿ ಯಲಹಂಕ ಪ್ರಭುವಾಗಿ ಪಟ್ಟಾಭಿಷಕ್ತರಾಗಿ ರಾಜ್ಯಾಡಳಿತದ ಚುಕ್ಕಾಣಿ ಹಿಡಿಯುತ್ತಾರೆ. ಅಲ್ಲಿಂದ ಆರಂಭವಾಗುತ್ತದೆ ಕೆಂಪೇಗೌಡರ ಸುವರ್ಣಯುಗ. ಇಡೀ ಜಗತ್ತೇ ಅವರು ನಿರ್ಮಿಸಿದ ಬೆಂಗಳೂರಿನತ್ತ ತಿರುಗಿ ನೋಡುವಂಥಾಗುತ್ತದೆ.

ರಾಜಧಾನಿ ಹಂಪೆಯ ಬೀದಿ ಬೀದಿಗಳಲ್ಲಿ ಮುತ್ತುರತ್ನಗಳನ್ನು, ವಜ್ರ ವೈಢೂರ್ಯಗಳನ್ನು ಬಳ್ಳಗಳಲ್ಲಿ ಅಳೆದು ಸುರಿದು ಮಾರುತ್ತಿದ್ದ ಮಹಾ ಸಿರಿವಂತಿಕೆಯ ವಿಜಯನಗರ ಸಾಮ್ರಾಜ್ಯದ ಅಭಿವೃದ್ಧಿಯ ವೈಭವದಲ್ಲಿ ಸಾಮಂತರಾಗಿದ್ದ ಕೆಂಪೇಗೌಡರ ವಂಶಸ್ಥರದ್ದೂ ಸಿಂಹಪಾಲಿತ್ತು. ಹಾಗಾಗಿ ಕೃಷ್ಣದೇವರಾಯನಿಗೆ ಇವರ ಮೇಲೆ ಹೆಚ್ಚಿನ ಒಲವಿತ್ತು. ಚಿಕ್ಕ ವಯಸ್ಸಿನಲ್ಲೇ ಕೆಂಪೇಗೌಡರಿಗೆ ಕೃಷ್ಣದೇವರಾಯರೊಡನಾಟ ಚೆನ್ನಾಗಿತ್ತು.


ಕೃಷ್ಣದೇವರಾಯ 1529 ರಲ್ಲಿ ನಿಧನರಾದಾಗ ಅವರ ಸಹೋದರ ಅಚ್ಯುತರಾಯ ಅಧಿಕಾರಕ್ಕೆ ಬರುತ್ತಾರೆ. ಬೆಂಗಳೂರು ನಿರ್ಮಾಣಕ್ಕೆ 50 ಸಾವಿರ ಚಿನ್ನದ ವರಹಗಳನ್ನು ನೀಡುವುದರ ಜೊತೆಗೆ 30 ಸಾವಿರ ಪಗೋಡಗಳ ಉತ್ಪನ್ನ ಬರುವ ಹಳೇ ಬೆಂಗಳೂರು, ಬೇಗೂರು, ವರ್ತೂರು, ಹಲಸೂರು, ಜಿಗಣಿ, ತಲಘಟ್ಟಪುರ, ಕೆಂಗೇರಿ, ಕುಂಬಳಗೋಡು, ಹೆಸರಘಟ್ಟ, ಕಾವಳ್ಳಿ (ಈಗಿನ ಕನ್ನಲ್ಲಿ), ಚಿಕ್ಕಬಾಣವರ ಇತ್ಯಾದಿ 12 ಹೋಬಳಿಗಳನ್ನು ಕೆಂಪೇಗೌಡರಿಗೆ ದಾನವಾಗಿ ಬಿಟ್ಟುಕೊಡುತ್ತಾರೆ. ವೈಜ್ಞಾನಿಕ ಪ್ರಜ್ಞೆಯ ಪವಿಚಾರವಾದಿಯಾಗಿದ್ದ ಕೆಂಪೇಗೌಡರು ಯಾವುದೇ ಶಾಸ್ತ್ರ, ಘಳಿಗೆ ನೋಡದೆ ರೈತನ ನೇಗಿಲಿನಿಂದ ಗೆರೆ ಎಳೆಸುವ ಮೂಲಕ ತಮ್ಮ ಮಹದಾಕಾಂಕ್ಷೆಯ ಬೆಂಗಳೂರು ನಿರ್ಮಾಣವನ್ನು ಆರಂಭಿಸುತ್ತಾರೆ.

ಮೈಸೂರಿನ ಪಿರಿಯಾಪಟ್ಟಣ, ಕಲ್ಲಹಳ್ಳಿ, ನಂಜರಾಯಪಟ್ಟಣ, ಕೊಡಗು ಮುಂತಾದ ಪ್ರಾಂತ್ಯಗಳು ಸೇರಿದಂತೆ ಉಮ್ಮತ್ತೂರಿನ ಆಡಳಿತಕ್ಕೆ ಒಳಪಟ್ಟಿದ್ದ ಶಿವನಸಮುದ್ರ ಸೀಮೆಯವರೆಗೂ ಕೆಂಪೇಗೌಡರ ಆಳ್ವಿಕೆ ಇತ್ತು. 1510 ರಲ್ಲಿ ಜನಿಸಿ 1531 ರಲ್ಲಿ ಪಟ್ಟಾಭಿಷಕ್ತರಾಗಿ ಅಧಿಕಾರಕ್ಕೆ ಬಂದ ನಾಡಪ್ರಭು ಕೆಂಪೇಗೌಡರು. 1569 ರವರೆಗೆ ಸುಮಾರು 38 ವರ್ಷಗಳ ಕಾಲ ಆಳ್ವಿಕೆ ನಡೆಸಿ 1569ರಲ್ಲಿ ಇಹಲೋಕ ತ್ಯಜಿಸಿದರು. ಆದರೆ ತಮ್ಮ ಅಭೂತಪೂರ್ವ ಸಾಧನೆಗಳಿಂದ ಅವರು ಇಂದಿಗೂ ಚಿರಂಜೀವಿಯಾಗಿದ್ದಾರೆ. ■



Downloaded From:www.kpscvaani.com

# ಪದಬಂಧ-43



ವಿದ್ಯಾ ಎ. ಹಾಲಭಾವಿ

## ಎಡದಿಂದ ಬಲಕ್ಕೆ

1. ಕರು ಹಾಕದಿರುವ ಹಸು (3)
3. ಎಲೆ ಅಡಿಕೆ ಚೀಲ (2)
5. ರೇಷ್ಮೆ ನಗರ  ಎಂದು ಹೆಸರು ಪಡೆದ ಊರು (5)
7. ಅರಿವೆಗೊಂದು ಪರ್ಯಾಯ ಪದ (2)
8. ಕಾಳಿನದಿ ದಡದಲ್ಲಿರುವ ಉತ್ತರಕನ್ನಡ ಜಿಲ್ಲೆಯಕಡಲತೀರದ ಸುಂದರ ನಗರ (4)
10. ನಡೆದ ಅಥವಾ ಕಲ್ಪಿತ ಸಂಗತಿ (2)
11. ಹಾವುಗೆ ಹತ್ತಿರವಿರುವ ಉರಗ (2)
12. ಹಮ್ಮೀರನಿಗೊಲಿದ ಶಿವ (2)
13. ಮಮತಾಮಯಿ ಈ ಮಾತೆ! (2)
14. ಸಿದ್ಧರಾಮಯ್ಯನವರು ಹೆಚ್ಚು ಬಾರಿ ನಿರ್ವಹಿಸಿದ ಖಾತೆ (4)
16. ಜಾಗರೂಕರಾಗಿ ನೋಡಿದ ಸ್ಥಳ! (2)
17. ಅತಿಶಯವಾದ ಸೌಂದರ್ಯವುಳ್ಳವಳು (5)
19. ಮೋಸಕ್ಕೊಂದು ಪರ್ಯಾಯ ಪದ (2)
20. ವ್ಯಾಕರಣದಲ್ಲಿ ಪುರುಷವಾಚಕ ಲಿಂಗ (3)

## ಮೇಲಿಂದ ಕೆಳಕ್ಕೆ

1. ಕರದಲ್ಲಿರುವ ಚಿನ್ನ! (4)
2. ಉಲ್ಲಾ ಕಾಣುತ್ತಿರುವ ಜಾನುವಾರು (2)
4. ಚಿತ್ರಕಲಾ ಪರಿಷತ್ತಿನಲ್ಲಿ ವರ್ಷಕ್ಕೊಮ್ಮೆ ಇದು ಜರುಗುತ್ತದೆ (4)
6. ಬೆಟ್ಟದ ಗವಿ (3)
8. ಬಿಸಿಯಾಗಿರುವಿಕೆ (2)
9. ವಾರಕ್ಕೆ ಮೊದಲೇ ಕಾಣಿಸಿದ ಆನೆ! (3)
10. ಕಠೋರವಾದ ಕೈ! (2)
11. ದೋಣಿಯ ಕಂಬಕ್ಕೆ ಕಟ್ಟುವ ಬಟ್ಟೆ (2)
12. ಹರಸುವಾಗ ಕಾಣಿಸಿದ ಆಕಳು (2)
13. ಘರ್ಷಣೆಯನ್ನು ಹೀಗೂ ಹೇಳುವರು (4)
14. ಭಾರವಲ್ಲದ್ದು ಇದು! (3)
15. ಸುಗಂಧ ಲೇಪನ ದ್ರವ್ಯ (4)
18. ಪುರಿಯಲ್ಲಿರುವ ಶತ್ರು! (2)

## ಉತ್ತರ

**ಮೇಲಿಂದ ಕೆಳಕ್ಕೆ**

1. ಕಸವರ 2. ಸುರಾ 4. ಚಿತ್ರಸಂತೆ 6. ಗಹ್ವರ 8. ಕಾವು
9. ವಾರಣ 10. ಕರ 11. ಹಾಯಿ 12. ಹಸು 13. ತಾಕಲಾಟ
14. ಹಗುರ 15. ಅಂಗರಾಗ 18. ರಿಪು

**ಎಡದಿಂದ ಬಲಕ್ಕೆ**

1. ಕಡಸು 3. ಸಂಚಿ 5. ರಾಮನಗರ 7. ವಸ್ತ್ರ 8. ಕಾರವಾರ
10. ಕತೆ 11. ಹಾವು 12. ಹರ 13. ತಾಯಿ 14. ಹಣಕಾಸು
16. ಜಾಗ 17. ಸುರಸುಂದರಿ 19. ಟಕ್ಕು 20. ಪುಲ್ಲಿಂಗ

### –: ಸೂಚನೆ :–

ಲೇಖನಗಳನ್ನು ಬರೆಯುವ ಆಸಕ್ತರು ವಾರ್ತಾ ಜನಪದಕ್ಕೆ ಲೇಖನಗಳನ್ನು ಕಳುಹಿಸಬಹುದು. ಸರ್ಕಾರದ ಯೋಜನೆಗಳು, ಅಭಿವೃದ್ಧಿಗಳು, ಪ್ರಗತಿಪರ ರೈತರ ಯಶೋಗಾಥೆ, ಜನಜಾಗೃತಿ ಮೂಡಿಸುವ ವಿಚಾರಗಳು, ಕರ್ನಾಟಕದ ಪ್ರೇಕ್ಷಣೀಯ ಸ್ಥಳಗಳು, ಕರ್ನಾಟಕದ ಇತಿಹಾಸ ಸಾರುವ ಗತ ವೈಭವಗಳು, ವಿವಿಧ ವಲಯದಲ್ಲಿ ಸಾಧನೆ ಮಾಡಿರುವ ರಾಜ್ಯದ ಸಾಧಕರ ಪರಿಚಯ ಇಂತಹ ವಿಷಯಗಳಿಗೆ ಹೆಚ್ಚಿನ ಆದ್ಯತೆ ನೀಡಲಾಗುವುದು.

ನುಡಿ ತಂತ್ರಾಂಶದಲ್ಲಿ ಟೈಪ್ ಮಾಡಿದ ಕನಿಷ್ಠ 500 ಪದಗಳಿಂದ 750 ಪದಗಳಿಗೆ ಮೀರದಂತೆ ಲೇಖನವನ್ನು ಪೂರಕವಾದ ಛಾಯಾಚಿತ್ರದೊಂದಿಗೆ ನಮ್ಮ ಇ-ಮೇಲ್ ವಿಳಾಸ janapada2008@gmail.comಗೆ ಕಳುಹಿಸಬಹುದು. ಲೇಖನಗಳ ಆಯ್ಕೆ ತೀರ್ಮಾನ ಅಂತಿಮವಾಗಿ ಸಂಪಾದಕ ಮಂಡಳಿಯದಾಗಿರುತ್ತದೆ. ಲೇಖನದ ಜೊತೆಗೆ ತಮ್ಮ ಹೆಸರು ವಿಳಾಸ ಮತ್ತು ದೂರವಾಣಿಯನ್ನು ನಮೂದಿಸತಕ್ಕದ್ದು.

Published by : R.Vinothpriya, IAS, Commissioner, Department of Information & Public Relation, 17, Varthasoudha, Bhagwan Mahaveer Road, Bangalore - 560 001
Printed at :M/s Lavanya Mudrana, #19, Vidyapeeta Circle, Banashankari 1st Stage, Bangalore-560050

Downloaded From:www.kpscvaani.com



ಮೇ 24 ರಂದು ಸ್ಪೀಕರ್ ಸ್ಥಾನಕ್ಕೆ ಅವಿರೋಧವಾಗಿ ಆಯ್ಕೆಯಾದ ಯು.ಟಿ.ಖಾದರ್ ಅವರನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ವಿರೋಧ ಪಕ್ಷದ ನಾಯಕ ಬಸವರಾಜ ಬೊಮ್ಮಾಯಿ ಹಾಗೂ ಹಂಗಾಮಿ ಸಭಾಧ್ಯಕ್ಷರಾಗಿದ್ದ ಆರ್.ವಿ.ದೇಶಪಾಂಡೆ ಅವರುಗಳು ಸಭಾಧ್ಯಕ್ಷರ ಪೀಠದ ಬಳಿಗೆ ಕರೆದೊಯ್ದ ಸಂದರ್ಭ.



ಮೇ 23 ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸರ್ಕಾರದ ಅಪರ ಮುಖ್ಯ ಕಾರ್ಯದಶಿಗಳು, ಪ್ರಧಾನ ಕಾರ್ಯದರ್ಶಿಗಳು ಹಾಗೂ ಕಾರ್ಯದರ್ಶಿಗಳೊಂದಿಗೆ ಸಭೆ ನಡೆಸಿದ ಸಂದರ್ಭ. ಈ ಸಂದರ್ಭದಲ್ಲಿ ಉಪ ಮುಖ್ಯಮಂತ್ರಿಗಳು, ಸಚಿವರುಗಳು ಸೇರಿದಂತೆ ಸರ್ಕಾರದ ಮುಖ್ಯ ಕಾರ್ಯದರ್ಶಿ ಅವರು ಉಪಸ್ಥಿತರಿದ್ದರು.

Downloaded From:www.kpscvaani.com

RNI No. KAR/KAN/2017/75029

Regd No.KA/BGGPO/2583/2021-23 Licensed to post without prepayment Licence No. PMG/BG/ WPP-365/2021-23
Published on 27th, Dt. 29th & 30th Posted at (Every month), Bangalore PSO, Mysore Road, Bangalore - 26



Downloaded From:www.kpscvaani.com